ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



Blog : janashakthi.wordpress.com e-mail : js_weekly@yahoo.com

ಸಂಪುಟ 8 ಸಂಚಿಕೆ 50

ಡಿಸೆಂಬರ್ 14, 2014

ಪುಟ 16 ರೂ. 10/-



ಕಾರ್ಮಿಕ ವಿರೋಧಿ ಕಾಯ್ದೆ ತಿದ್ದುಪಡಿಗೆ ರಾಜ್ಯವ್ಯಾಪಿ ಖಂಡನೆ



'ದಲಿತರ ಶೋಷಣಾ ಮುಕ್ತಿ ಮಂಚ್'ನ ಪ್ರಥಮ ರಾಷ್ಟ್ರೀಯ ಸಮಾವೇಶ

'ದಲಿತರ ಸಮಸ್ಯೆಗಳನ್ನೇ ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯಿರಿ'



ಬಿಜೆಪಿಯ ಉದ್ಧಟ ಹೇಳಿಕೆಗಳು ಭೀಷಣ ಕೇಡಿನ ಸಂಕೇತಗಳು



ತತ್ತರಗೊಂಡ ಜನರ ಬದುಕಿನ ಜಂಜಡಗಳಿಗೆ ಉತ್ತರ ಹುಡುಕುವ ಯತ್ನ

ಬಿಡಿಸಲಾಗದಂತೆ ಹೆಣೆದುಕೊಂಡ ಆತ್ಮ, ಮೋಕ್ಷ ಮತ್ತು ಕರ್ಮ-ಪಾಪ, ಪುಣ್ಯ, ಪುನರ್ಜನ್ಮಗಳು

"ಸತ್ಯಮೇವ ಜಯತೇ ನಾನೃತಂ" ಇದು ಬಹಳ ಪ್ರಸಿದ್ಧವಾದ ಉಪನಿಷತ್ ವಾಕ್ಯ. ಮುಂಡಕೋಪನಿಷತ್‌ನಿಂದ ಆಯ್ದದ್ದು. ಇದನ್ನು ಎಲ್ಲ ಕಡೆ ಉಲ್ಲೇಖಿಸುವ, ಭಾರತದ ತತ್ವಜ್ಞಾನದ ಶ್ರೇಷ್ಠತೆಯನ್ನು ಸಾರುವುದಕ್ಕೆ ಉದಾಹರಣೆಯಾದ ವಾಕ್ಯ. ಈ ವಾಕ್ಯವನ್ನು ಅದರ ಸಂದರ್ಭದಿಂದ ಹೊರಗೆ ನೋಡಿದಾಗ ಒಂದು ಸಾರ್ವಕಾಲಿಕ ಸತ್ಯವನ್ನು ಹೇಳುವಂತೆ ಕಾಣುತ್ತದೆ. ಎಲ್ಲರೂ ಹೌದು ಹೌದು ಎಂದು ತಲೆದೂಗುವಂತೆ ಮಾಡುತ್ತದೆ. ಆದರೆ ಉಪನಿಷತ್‌ನಲ್ಲಿ ಯಾವ ಶ್ಲೋಕದಿಂದ ಎತ್ತಿಕೊಳ್ಳಲಾಗಿದೆಯೋ ಅದರ ಸಂದರ್ಭವನ್ನು ನೋಡಬೇಕು. ಆಗ ಈ ಉಪನಿಷತ್ತುಗಳ ನಿಜ ಸ್ವರೂಪ ಅರ್ಥವಾಗುತ್ತದೆ.

"ಸತ್ಯಮೇವ ಜಯತೇ ನಾನೃತಂ
ಸತ್ಯೇನ ಪಂಥಾ ವಿತತೋ ದೇವಯಾನಂ
–ಮುಂಡಕೋಪನಿಷತ್ 3–1 6

ಸತ್ಯವೇ ಜಯಿಸುತ್ತದೆ ಅಸತ್ಯವಲ್ಲ. ಪರಮಾತ್ಮನನ್ನು ಸೇರುವ ದೇವಯಾನವೆಂಬ ಮಾರ್ಗವು ಸತ್ಯದಿಂದ ಕೂಡಿದೆ."

ಈ ಉಪನಿಷತ್ತಿಗೆ ದೀರ್ಘ ವ್ಯಾಖ್ಯಾನ ಬರೆದ ರಾಮಕೃಷ್ಣಾಶ್ರಮದ ಸೋಮಾನಾಥಾನಂದರು ಈ ಸತ್ಯದ ಅರ್ಥವನ್ನು ಹೀಗೆ ವಿವರಿಸಿದ್ದಾರೆ " ಇಲ್ಲಿ ಸತ್ಯವೆಂಬುದನ್ನು ದಿನ ನಿತ್ಯ ಆಡುವ ಮಾತಿಗೆ ಅನ್ವಯಿಸಿದರೆ ಬಹಳ ಸಣ್ಣ ಅರ್ಥವಾಗುವುದು. ಇಲ್ಲಿ ಯಾವುದು ಪರಮಸತ್ಯವಾಗಿರುವುದೋ ಅದು ಸತ್ಯ."

ಹಾಗಾದರೆ ಅನೃತವೆಂದರೆ "ರೂಪ ರಸ ಸ್ಪರ್ಶ ಗಂಧ ಮೊದಲಾದ ತಾತ್ಕಾಲಿಕ ಸಂತೋಷವನ್ನು ಕೊಡುವ ಪಥವನ್ನು ಹಿಡಿಯುವರೋ" ಅದು. ಬದುಕಿನೆಲ್ಲಾ ವಿಚಾರಗಳೂ ಅನೃತ. ಈ ಸತ್ಯ ಮತ್ತು ಅನೃತದ ಬಗ್ಗೆ ಈ ಪ್ರಸಿದ್ಧ ವಾಕ್ಯ ಮಾತನಾಡುತ್ತಿದೆಯೇ ಹೊರತು ಈ ಜಗತ್ತಿನ ಬದುಕಿನಲ್ಲಿ ನಾವು ನರ ಮನುಷ್ಯರು ಬಳಸುವ ಸತ್ಯದ ಬಗ್ಗೆ ಅಲ್ಲ. ಇನ್ನೂ ಹೆಚ್ಚಿನದಾಗಿ ಈ ಶ್ಲೋಕದ ಸತ್ಯ 'ದೇವಯಾನ'ಕ್ಕೆ ಸಂಬಂಧಿಸಿದ್ದು. ಹಿಂದಿನ ಸಂಚಿಕೆಯಲ್ಲಿ ಮಾಧವಾನಂದರ ವಿವರಣೆಯನ್ನು ಉಲ್ಲೇಖಿಸಿದ್ದನ್ನು ನೆನಪಿಗೆ ತಂದುಕೊಳ್ಳೋಣ. "ಉಪಾಸನಾ ನಿಷ್ಠರೂ, ಸತ್ಯನಿಷ್ಠರೂ ಆಗಿ ಪರಿಶುದ್ಧ ಜೀವನವನ್ನು ನಡೆಸಿದವರು ಬ್ರಹ್ಮ ಲೋಕ–ಕ್ಕೆ ಹೋಗುವ ಮಾರ್ಗ ದೇವಯಾನ. ಹಾಗೆ ಈ ಪ್ರಸಿದ್ಧ ವಾಕ್ಯದ ಸತ್ಯ ಜೀವನ ವಿಮುಖವಾದುದು, ಮಾತ್ರವಲ್ಲ ಉಪಾಸನಾ ನಿಷ್ಠರು ಬ್ರಹ್ಮಲೋಕವನ್ನು ತಲುಪುವುದಕ್ಕೆ ಇರುವ ಮಾರ್ಗಕ್ಕೆ ಸಂಬಂಧಿಸಿದ್ದು. ಸಾಧಾರಣ ಜನರು ಹೋಗುವ ಪಿತೃಯಾನ ಮಾರ್ಗಕ್ಕೆ ಸಂಬಂಧಿಸಿದ್ದಲ್ಲ."

ಜನ್ಮಾಂತರ ಪ್ರಾಪ್ತಿ ಮತ್ತು ಕರ್ಮ ನಿಯಮ

ದೇಹವೆಂಬ ಭೌತಿಕ ವಸ್ತುವನ್ನು ಬಿಟ್ಟು ಯಾರಿಗೂ ಕಾಣದ ಊಹಾತ್ಮಕವಾದ ಆತ್ಮವೆಂಬ ಕಲ್ಪನೆಯನ್ನು ವಿವರಿಸ ಹೊರಟ ಮೊದಲ ಕ್ಷಣದಿಂದಲೇ ಅದರೊಡನೆ ಮೋಕ್ಷ, ಕರ್ಮ, ಪಾಪ, ಪುಣ್ಯ, ಪುನರ್ಜನ್ಮ ಇವೆಲ್ಲಾ ಬೇರ್ಪಡಿಸಲಾಗದಂತೆ ಹೆಣೆದುಕೊಂಡಿದೆ. ಈ ಸಂಗತಿಗಳನ್ನು ಬಿಟ್ಟು ಆತ್ಮವೆಂಬ ಪರಿಕಲ್ಪನೆಯನ್ನು ವಿವರಿಸಲು ಪರಂಪರಾಗತ ಸಂಸ್ಕೃತ ವಿದ್ವಾನ್‌ಗಳಿಗಿರಲಿ ರಾಮಕೃಷ್ಣ–ವಿವೇಕಾನಂದರ ದಾರಿಯಲ್ಲಿ ನಡೆದಿರುವವರೆಂದು ಹೇಳಲಾದವರಿಗೂ ಸಾಧ್ಯವಾಗಿಲ್ಲ ಎಂಬುದನ್ನು ಹಿಂದಿನ ಸಂಚಿಕೆಯಲ್ಲಿ ನೀಡಿದ ಉಲ್ಲೇಖಗಳಿಂದ ನೋಡಿದ್ದೇವೆ.

ಯಾಜ್ಞವಲ್ಕ್ಯರು ಬೃಹದಾರಣ್ಯ ಕೋಪನಿಷತ್ತಿನಲ್ಲಿ ಹೇಳುವಂತೆ

"ಸ ಆಯಮಾತ್ಮಾ ಬ್ರಹ್ಮ ವಿಜ್ಞಾನಮಯೋ ಮನೋಮಯಃ
ಯಥಾಚಾರೀ ತಥಾ ಭವತಿ ಸಾಧುಕಾರೀ ಸಾಧುರ್ಭವತಿ
ಪಾಪಕಾರೀ ಪಾಪೋ ಭವತಿ, ಪುಣ್ಯಃ ಪುಣ್ಯೇನ ಕರ್ಮಣಾ ಭವತಿ ಪಾಪಃ ಪಾಪೇನ

ಆ ಆತ್ಮನೇ ಬ್ರಹ್ಮವು, ಜ್ಞಾನರೂಪನು, ಮನಸ್ಸನ್ನು ಆವರಿಸಿರುವವನು. ಯಾವ ಆಚಾರವನ್ನುಳ್ಳವನಾಗುತ್ತಾನೋ ಇವನು ಅದೇ ಆಗುತ್ತಾನೆ. ಸಾಧುವಾದ ಆಚಾರವುಳ್ಳವನು ಸಾಧುವಾಗುತ್ತಾನೆ. ಪಾಪಕಾರೀ ಆಚಾರವುಳ್ಳವನು ಪಾಪಿಯಾಗುತ್ತಾನೆ. ಪುಣ್ಯಶಾಲಿಯಾದವನು ಪುಣ್ಯದಿಂದ ಒಳ್ಳೆಯವನಾಗುತ್ತಾನೆ. ಪಾಪದಿಂದ ಕೆಟ್ಟವನಾಗುತ್ತಾನೆ."

ಈಶಾವಾಸ್ಯ ಉಪನಿಷತ್ತು, ಮತ್ತೊಂದು ಬಹಳ ಅಧ್ಯಯನ ಮಾಡಲ್ಪಟ್ಟ ಮತ್ತು ಭಾರತದ ತತ್ವಜ್ಞಾನದ ಮುಖ್ಯ ಆಕರಗಳಲ್ಲೊಂದು ಎಂದು ಬಣ್ಣಿಸಲ್ಪಟ್ಟ ಉಪನಿಷತ್ತು. ಈ ಉಪನಿಷತ್ತು ಹೀಗೆ ಹೇಳುತ್ತದೆ.

"ಅಸುರ್ಯಾ ನಾಮತೇ ಲೋಕಾ
ಅಂಧೇನ ತಮಸಾವೃತಃ /
ತಾಂಸ್ತೇ ಪ್ರೇತ್ಯಾಭಿಗಚ್ಛಂತಿ
ಯೇ ಕೇ ಚಾತ್ಮಹನೋ ಜನಾನಃ //

ಅಸುರೀ ಸ್ವಭಾವದ ಮನುಷ್ಯರ ಲೋಕ ಅಜ್ಞಾನದಿಂದ ಕೂಡಿದೆ. ಆತ್ಮಹಾನಿ ಮಾಡಿಕೊಂಡ ಜನರು ಪ್ರೇತಗಳಾಗಿ ಈ ಲೋಕಗಳನ್ನು ಸೇರುತ್ತಾ–ರೆ."

ಕರ್ಮ ಮತ್ತು ಪುನರ್ಜನ್ಮಗಳಿಗೆ ಸಂಬಂಧಿಸಿ ಇನ್ನೂ ಅನೇಕ ಉಪನಿಷತ್ತುಗಳಿಂದ ಉಲ್ಲೇಖಗಳನ್ನು ಯಥೇಚ್ಛವಾಗಿ ನೀಡಬಹುದು.

ಈ ವಿಷಯಕ್ಕೆ ಸಂಬಂಧಿಸಿ ಎಲ್ಲ ಉಪನಿಷತ್ತುಗಳ ಸಾರವನ್ನು ಸಂಸ್ಕೃತ ಹಾಗೂ ತತ್ವಶಾಸ್ತ್ರದ ವಿದ್ವಾಂಸರೂ ಆದ ಪ್ರೊ. ಹಿರಿಯಣ್ಣನವರು ಹೀಗೆ ನೀಡಿದ್ದಾರೆ.


"ಉಪನಿಷತ್ತುಗಳ ಪ್ರಕಾರ ಸತ್ತವರಲ್ಲಿ ಹೆಚ್ಚು ಪಾಲು ಜನ ಮತ್ತೆ ಹುಟ್ಟುತ್ತಾರೆ. ಮೋಕ್ಷವನ್ನು ಪಡೆಯುವವರೆಗೂ ಹುಟ್ಟು ಸಾವುಗಳ ನಿರಂತರ ಪ್ರವಾಹವು ಹರಿಯುತ್ತಲೇ ಇರುತ್ತದೆ. ಜನ್ಮಾಂತರ ಪ್ರಾಪ್ತಿ ಎಂದು ಕರೆದಿರುವುದು ಇದನ್ನೇ. ಪ್ರತಿಬಾರಿ ಸತ್ತಾಗಲೂ ಅಂಥ ಜೀವನು ಯಾವ ರೀತಿಯ ಜನ್ಮವನ್ನು ಪಡೆಯಬೇಕು ಎಂದು ನಿಯಂತ್ರಿಸುವ ನಿಯಮವನ್ನು ಕರ್ಮ ನಿಯಮ ಎನ್ನುತ್ತಾರೆ. ನೋವು ನಲಿವುಗಳಿಂದ ಕೂಡಿದ ಪ್ರತಿಯೊಂದು ಜನ್ಮವೂ ಹಿಂದಿನ ಜನ್ಮಗಳ ಕರ್ಮಗಳ ಅನಿವಾರ್ಯ ಫಲ ಮತ್ತು ತಾನೆ ಅದರಲ್ಲಿ ನಡೆವ ಕರ್ಮಗಳಿಂದ ಮುಂದಿನ ಜನ್ಮಗಳಿಗೆ ಕಾರಣವಾಗುತ್ತದೆ."

ಈ ಕರ್ಮ ನಿಯಮ ಮೊದಲ ಬಾರಿಗೆ ಮತ್ತು ಇಷ್ಟೊಂದು ವಿವರವಾಗಿ ರೂಪಿಸಿದ್ದು ಕೆಲ ಉಪನಿಷತ್ತುಗಳು. ಅಂದು ರೂಪಿಸಿದ ಈ ಕರ್ಮ ನಿಯಮ ಕಬ್ಬಿಣದ ಸಂಕೋಲೆಯಂತೆ ಇಡೀ ದೇಶದ ಸಾಮಾಜಿಕ, ಆಧ್ಯಾತ್ಮಿಕ ಜೀವನವನ್ನು ಆಳಿದೆ. ಸಾಮಾನ್ಯ ಜನರ ನಂಬಿಕೆಯಲ್ಲಿ ಹಾಸುಹೊಕ್ಕಾಗಿದೆ. ಇಂತಹ ನಿಯಮಗಳ ಕಲ್ಪನೆಯ ಅವಶ್ಯಕತೆಯೇನು ಎಂಬುದು ಮುಖ್ಯ ವಿಷಯ. ಈ ಬಗ್ಗೆ ಪ್ರೊ. ಹಿರಿಯಣ್ಣನವರ ವಿಶ್ಲೇಷಣೆ ಹೀಗಿದೆ.

"ಈ ಸಿದ್ಧಾಂತವು ಪ್ರದರ್ಶಿಸಿ ತೋರಿಸಬಹುದಾದ ಸತ್ಯವನ್ನು ಒಳಗೊಂಡಿದೆ ಎಂದು ಭಾವಿಸುವಂತಿಲ್ಲ. ಆದರೂ ಜೀವನದಲ್ಲಿ ಕಾಣುವ ಅಸಮತೆ–

ದಂಗೆಯೇಳದೆ ದಾಸರಾಗಿ ದುಡಿಯುವಂತೆ ಮಾಡಬೇಕಾದರೆ ಸಮಾಜದ ಬಹು ದೊಡ್ಡ ವಿಭಾಗವನ್ನು ಕೆಳ ಸ್ತರಕ್ಕೆ ತಳ್ಳಿ ಅವರು ದಂಗೆಯೇಳದೆ ದಾಸರಾಗಿ ದುಡಿಯುವಂತೆ ಮಾಡಬೇಕಾದರೆ ಬಹಳ ಪ್ರಬಲವಾದ ನಂಬಿಕೆಗಳ ಗುಚ್ಛವನ್ನೇ ಒದಗಿಸಬೇಕಾಯಿತು. ಆತ್ಮ, ಕರ್ಮ ಸಿದ್ಧಾಂತ ಅದಕ್ಕೆ ಸಾಧಕವಾಯಿತು.......

ಅನ್ಯಾಯಗಳನ್ನು ತರ್ಕಬದ್ಧವಾಗಿ ವಿವರಿಸುವ ಒಂದು ಕಲ್ಪನೆಯಾಗಿ ಅದಕ್ಕೆ ಬೆಲೆಯುಂಟು ಎಂಬುದು ಸ್ಪಷ್ಟವಾಗಿದೆ."



ಸಾಂಪ್ರದಾಯಿಕ ವಿದ್ವಾಂಸರಾದ ಹಿರಿಯಣ್ಣನವರು ಬಹಳ ಸ್ಪಷ್ಟವಾಗಿ ಎರಡು ವಿಷಯಗಳನ್ನು ಹೇಳುತ್ತಾರೆ. ಒಂದು, ಇದು ವ್ಯಕ್ತವಾಗಿ ಪ್ರದರ್ಶಿಸಿ ತೋರಿಸಬಹುದಾದ ಸತ್ಯವಲ್ಲ. ಅಂದರೆ ಸೂಕ್ತ ವಾಸ್ತವ ಜೀವನದ ಆಧಾರಗಳಿಂದ ಸಾಧಿಸಿ ತೋರಿಸಬಹುದಾದ್ದಲ್ಲ. ಇನ್ನೊಂದು, ಬಹಳ ಮುಖ್ಯವಾದುದು, ಸಮಾಜದಲ್ಲಿ ಕಾಣುವ ಅಸಮತೆ–ಅನ್ಯಾಯಗಳನ್ನು ತರ್ಕಬದ್ಧವಾಗಿ ವಿವರಿಸುವ ಒಂದು ಕಲ್ಪನೆ ಇದು ಎಂದು.


ಇಲ್ಲಿಯೇ ಇದೆ ಈ ಕಲ್ಪನೆಗಳ ಹಿಂದಿನ ಸತ್ಯ. ಹಿಂದೆ ವಿವರಿಸಿದಂತೆ ವೇದಗಳ ಕಾಲದಲ್ಲಿ ಬುಡುಕಟ್ಟು ಜೀವನದ ಎಲ್ಲರೂ ರಕ್ತ ಸಂಬಂಧಿಗಳೂ ಆಗಿ ಸರಿಸುಮಾರು ಒಂದೇ ರೀತಿಯ ಜೀವನವನ್ನು ಅನುಭವಿಸುತ್ತಿದ್ದ ಕಾಲ. ಆಹಾರಕ್ಕಾಗಿ ಪರಿತಪಿಸುತ್ತಿದ್ದ ಕಾಲ. ಬುಡುಕಟ್ಟುಗಳ ಮುಖ್ಯಸ್ಥರೇ ರಾಜರಾಗುವ ಹಂತದಲ್ಲಿದ್ದ ಸಮಾಜ ರಚನೆ. ಈ ಕಾಲದಲ್ಲಿ ಬ್ರಾಹ್ಮಣಗಳ, ಉಪನಿಷತ್ತುಗಳ ಕಾಲದಲ್ಲಿ ಬುಡಕಟ್ಟುಗಳ ಆಧಾರಿತವಾದ ರಾಜರುಗಳ ಬದಲಾಗಿ ಪ್ರಾದೇಶಿಕವಾದ ಆಧಾರದಲ್ಲಿ ರಾಜ್ಯಗಳು ರೂಪುಗೊಂಡಿದ್ದವು. ಆರ್ಯರಲ್ಲದ ಜನರು ವಾಸಿಸುತ್ತಿದ್ದ ಪ್ರದೇಶಗಳನ್ನು ಆಕ್ರಮಿಸಿಕೊಳ್ಳಲಾಗಿತ್ತು. ಅವರ ಮೇಲೆ ತೆರಿಗೆ, ಮತ್ತು ದಾಸ್ಯಗಳನ್ನು ಹೇರಲಾಗಿತ್ತು. ಈ ಕಾರಣ–ಕ್ಕಾಗಿ ಶ್ರಮ ವಿಭಜನೆಯಾಗಿ ಆರಂಭವಾಗಿದ್ದ ಸಮಾಜದ ಸಮುದಾಯಗಳನ್ನು ವಂಶ ಪಾರಂಪರ್ಯವಾದ ರಾಜತ್ವ, ಪುರೋಹಿತತ್ವ, ಕೃಷಿಕರು ಹಾಗೂ ವ್ಯಾಪಾರಿಗಳು ಮತ್ತು ದಾಸರ ಸಮಾಜವೆಂಬ ವರ್ಣಾಶ್ರಮದ ವ್ಯವಸ್ಥೆಯನ್ನಾಗಿ ರೂಪಿಸಲಾಗಿತ್ತು. ಅದಕ್ಕಾಗಿಯೇ ಹಿಂದಿನ ಸರಳವಾದ ಆಚರಣೆಗಳನ್ನು ವೈಭವದ ಯಾಗ, ಯಜ್ಞಗಳನ್ನಾಗಿ ಬದಲಾಯಿಸಲಾಗಿತ್ತು. ಹಿಂದಿನ ವೇದಗಳ ಕಾಲದ ಚೌಕಟ್ಟಿನಲ್ಲಿಯೇ ಇದ್ದಂತೆ ಕಂಡರೂ ಇದೊಂದು ಮುಖ್ಯ ತಿರುವಾಗಿತ್ತು. ಆದರೆ ಸಮಾಜದಲ್ಲಿ ಬೆಳೆದಿದ್ದ ರಾಜ ಮಹಾರಾಜರುಗಳು, ಅವರ ಕುಟುಂಬಗಳ ವೈಭವವನ್ನು ಮತ್ತು ಅವರ ಅಧಿಕಾರಕ್ಕೆ ಸಮರ್ಥನೆಯನ್ನು ನೀಡುವ ಪೌರೋಹಿತ್ಯ ನೀಡಿದ ಬೆಂಬಲದಿಂದಾಗಿ ಈ ಎರಡು ವರ್ಗಗಳಲ್ಲಿ ಶೇಖರವಾದ ಸಂಪತ್ತು ಮತ್ತು ಅದರಿಂದ ಬದುಕಿನಲ್ಲಿ ಉಂಟಾದ ಹಲವು ರೀತಿಯ ಅಸಮಾನತೆಗಳನ್ನು ಸಮರ್ಥಿಸಿಕೊಳ್ಳಲು ಬ್ರಾಹ್ಮಣಗಳ ಯಾಗ ಯಜ್ಞಗಳ ಆಚರಣೆಯ ಪದ್ಧತಿ ಸಾಕಾಗಲಿಲ್ಲ. ಆರ್ಯ ಜನರೊಳಗಿನ ವಿಭಜನೆ, ಅಸಮಾನತೆಗಳನ್ನು ವಿವರಿಸುವುದರ ಜೊತೆಗೆ ಬುಡುಕಟ್ಟುಗಳಾಗಿ ಸ್ವತಂತ್ರ ಸ್ವಾವಲಂಬೀ ಜೀವನ ನಡೆಸುತ್ತಿದ್ದ ಆರ್ಯೇತರ ಸಮುದಾಯಗಳನ್ನು ಆಧೀನ ಮಾಡಿಕೊಳ್ಳಲು ಅವರನ್ನು ದಾಸರಾಗಿ ಶೂದ್ರ ವರ್ಣವಾಗಿ ದುಡಿಸಿಕೊಳ್ಳಲು ಬೇಕಾದ ಸಮರ್ಥನೆ ಬ್ರಾಹ್ಮಣಗಳಿಂದ ಸಿಗಲಿಲ್ಲ. ಹೊಸದಾದ ಸಮಾಜ ವಿಭಜನೆಯ ಸಮರ್ಥನೆಗಾಗಿ ಹೊಸದೇ ಆದೊಂದು ವಿವರಣೆ ಬೇಕಾಗಿತ್ತು. ಉಪನಿಷತ್ತುಗಳಲ್ಲಿ ವಿವಿಧ ಚಿಂತನೆಗಳ ಧಾರೆ ಇದ್ದರೂ ಕೂಡ ಪ್ರಧಾನವಾದ ಧಾರೆ ಆತ್ಮ, ಬ್ರಹ್ಮನ್, ಕರ್ಮ, ಪುನರ್ಜನ್ಮಗಳಿಗೆ ಸಂಬಂಧಿಸಿದ್ದು. ಇದನ್ನು ರೂಪಿಸುವುದರಲ್ಲಿ ರಾಜ, ಮಹಾರಾಜರುಗಳೂ ಪ್ರಮುಖ ಪಾತ್ರ ವಹಿಸಿದ್ದಾರೆ ಎಂಬ ವಿವರಗಳನ್ನು ಹಿಂದೆ ನೀಡಲಾಗಿದೆ. ಸಮಾಜದ ಬಹು ದೊಡ್ಡ ವಿಭಾಗವನ್ನು ಕೆಳ ಸ್ಥರಕ್ಕೆ ತಳ್ಳಿ ಅವರು ದಂಗೆಯೇಳದೆ ದಾಸರಾಗಿ ದುಡಿಯುವಂತೆ ಮಾಡಬೇಕಾದರೆ ಬಹಳ ಪ್ರಬಲವಾದ ನಂಬಿಕೆಗಳ ಗುಚ್ಛವನ್ನೇ ಒದಗಿಸಬೇಕಾಯಿತು. ಆತ್ಮ, ಕರ್ಮ ಸಿದ್ಧಾಂತ ಅದ–ಕ್ಕೆ ಸಾಧಕವಾಯಿತು. ಇದು ನಮ್ಮ ದೇಶದ ಸಾಮಾಜಿಕ ಚರಿತ್ರೆಯಲ್ಲಿ ಬಹಳ ಮುಖ್ಯ ತಿರುವು.

ರಾಮಕೃಷ್ಣಾಶ್ರಮದ ಮಾಧವಾನಂದರು ಹೇಳುತ್ತಾರೆ " ಮಾನವನಿಗೆ 'ತನ್ನ ಈಗಿನ ಅವಸ್ಥೆಗೆ ತನ್ನನ್ನು ತಾನೇ ಅಭಿನಂದಿಸಿಕೊಳ್ಳಬೇಕು ಅಥವಾ ನಿಂದಿಸಿಕೊಳ್ಳಬೇಕು. ನೆಪ ಹೂಡುವುದಕ್ಕೆ ಅವನಿಗೆ ಅವಕಾಶವೇ ಇರುವುದಿಲ್ಲ. ಏಕೆಂದರೆ ಕರ್ಮ ನಿಯಮವು ಕಠೋರವಾದುದು." ಹಿರಿಯಣ್ಣನವರು ಹೇಳುವಂತೆ 'ನಮ್ಮಲ್ಲಿ ಹುಟ್ಟಬಹುದಾದ ಕಹಿ ಭಾವನೆಯನ್ನು ಹೋಗಲಾಡಿಸುತ್ತದೆ.'

ಹೀಗೆ ಬುಡಕಟ್ಟು ಜೀವನದ ಸ್ವಾತಂತ್ರ್ಯವನ್ನು, ಸಮಾನತೆಯ ಜೀವನವನ್ನು ಕಳೆದುಕೊಂಡ (ಹಿಂದೆ ಕಾಕನ ಕೋಟೆ ನಾಟಕವನ್ನು ಉದಾಹರಣೆ ನೀಡಿ ವಿವರಿಸಿದ ಬುಡಕಟ್ಟು ಜೀವನವನ್ನು ನೆನಪಿಸಿಕೊಳ್ಳಿ.) ಆರ್ಯೇತರ ಬುಡಕಟ್ಟುಗಳು ಈ ದಾಸ್ಯ ಜೀವನದ ವಿರುದ್ಧ ದಂಗೆಯೇಳದಂತೆ ಕಟ್ಟಿ ಹಾಕಿದ್ದೇ ಕರ್ಮ ಸಿದ್ಧಾಂತ. ಆರ್ಯನರ ನಡುವೆಯೂ ಕೆಳ ಜನ ವಿಭಾಗಗಳಾದ ವೈಶ್ಯ (ಅಂದು ಈ ವರ್ಣದವರು ಕೃಷಿ, ಪಶುಸಂಗೋಪನೆ ಮತ್ತು ವ್ಯಾಪಾರಗಳನ್ನು ಮಾಡುವ ಜನ ಸಮುದಾಯವಾಗಿದ್ದರು. ಆರ್ಯೇತರ ಸಮುದಾಯಗಳು ದಾಸರಾಗಿ ದೊರಕುವವರೆಗೆ ಆರ್ಯ ಜನರೊಳಗಿನ ಕೆಳ ವರ್ಣವಾಗಿದ್ದರು.) ಅವರೂ ಕೂಡ ತಮ್ಮ ದೈಹಿಕ ದುಡಿಮೆಯನ್ನು ನೀಗಿಸಲು ಶೂದ್ರ ಎಂದು ವಿಭಜಿಸಲ್ಪಟ್ಟ ಜನ ವಿಭಾಗಗಳು ದೊರಕಿದ ಮೇಲೆ ತಮ್ಮ ಅಧೀನ ಸ್ಥಿತಿಯನ್ನು ಒಪ್ಪಿಕೊಳ್ಳುವುದಕ್ಕೆ ಈ ಸಿದ್ಧಾಂತ ಸಹಾಯಕವಾಯಿತು.

ಅದೇ ಸಮಯದಲ್ಲಿ ಬ್ರಾಹ್ಮಣೋ ವರ್ಣಾನಾಂ ಪ್ರಭು ಎಂಬ ಕಲ್ಪನೆಯನ್ನು ಹೇರಲೂ ಕೂಡ ಆತ್ಮ, ಬ್ರಹ್ಮನ್, ಮೋಕ್ಷ ಮೊದಲಾದ ಪರಿಕಲ್ಪನೆಗಳು ಬಹಳ ಪ್ರಯೋಜನಕಾರಿಯಾಗಿ ದೊರಕಿದವು. ಮತ್ತು ಇಂದೂ ಕೂಡ ನಮ್ಮ ದೇಶದ ಮೇಲು ಜಾತಿಗಳ ಜನರನ್ನೂ, ಅದೇ ಸಮಯದಲ್ಲಿ ಕೆಳ ಸಮುದಾಯಗಳನ್ನು ತನ್ನ ಪ್ರಭಾವಕ್ಕೊಳಪಡಿಸುವುದಕ್ಕೆ ಸಾಧಕವಾಗಿವೆ. ಮುಂದಿನ ಸಂಚಿಕೆಗಳಲ್ಲಿ ಈ ಬಗ್ಗೆ ತಿಳಿದುಕೊಳ್ಳೋಣ. ●

ಜನಶಕ್ತಿ
ಕನ್ನಡ ವಾರಪತ್ರಿಕೆ



▌ನಿತ್ಯಾನಂದಸ್ವಾಮಿ

ಮುಗ್ದ ಮಕ್ಕಳ ಮನಸ್ಸುಗಳಲ್ಲಿ ಜಾತಿ ವಿಷಬೀಜ ಬಿತ್ತುವ ಪೋಷಕರು

ಮೈಸೂರು ತಾಲೂಕಿನ ಕುಪ್ಪೇಗಾಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ಕಳೆದ ಏಳೆಂಟು ದಿನಗಳಿಂದ ಸುದ್ದಿಯಲ್ಲಿದೆ. ಸುದ್ದಿ ಆತಂಕದಾಯಕವಾಗಿದೆ. ಶಾಲೆಯ ಬಿಸಿಯೂಟ ತಯಾರಿಸುವ ಸಿಬ್ಬಂದಿಯಲ್ಲಿ ದಲಿತ ಮಹಿಳೆಯೊಬ್ಬರು ನೇಮಕಗೊಂಡದ್ದನ್ನು ಪ್ರತಿಭಟಿಸಿ ಸವರ್ಣೀಯ ಮಕ್ಕಳು ತಮ್ಮ ಪೋಷಕರ ಆದೇಶದ ಮೇರೆಗೆ ಶಾಲಾ ಬಿಸಿಯೂಟವನ್ನು ಬಹಿಷ್ಕರಿಸಿ ಜಾತಿ ಅಸ್ಪೃಶ್ಯತೆಯನ್ನು ಆಚರಿಸಿದ್ದಾರೆ. ಕುಪ್ಪೇಗಾಲ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ವಗ್ರಾಮ ಸಿದ್ದರಾಮನ ಹುಂಡಿಯ ಸಮೀಪದಲ್ಲಿದ್ದು ಸಿದ್ದರಾಮಯ್ಯ ಕೂಡ ಇದೇ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದಿದ್ದರು ಎನ್ನಲಾಗಿದೆ.

ಇದು ಸಿದ್ದರಾಮಯ್ಯ ಓದಿದ ಶಾಲೆಗೆ ಮಾತ್ರ ಸೀಮಿತವಾದ ಘಟನೆಯಲ್ಲ. ರಾಜ್ಯದ ಇನ್ನಿತರ ಅನೇಕ ಶಾಲೆಗಳಿಂದಲೂ ಇಂತಹ ಪ್ರಕರಣಗಳು ಹಿಂದಿನಿಂದಲೂ ವರದಿಯಾಗುತ್ತಾ ಬಂದಿದ್ದು ಅನೇಕ ಮಂದಿ ಬಿಸಿಯೂಟ ತಯಾರಿಸುವ ಬಡ ದಲಿತ ಮಹಿಳೆಯರು ಕೆಲಸ ಕಳೆದುಕೊಂಡ ಉದಾಹರಣೆಗಳಿವೆ. ಕರ್ನಾಟಕವು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಒಂದು ಮುಂದುವರೆದ ರಾಜ್ಯ ಎಂದು ಹೇಳಿಕೊಳ್ಳಲಾಗುತ್ತಿರುವಾಗಲೇ ಇಂತಹ ಅನೇಕ ತಲೆತಗ್ಗಿಸುವ ಪ್ರಸಂಗಗಳು ಇಲ್ಲಿ ಯಾವುದೇ ಅಡೆತಡೆ ಇಲ್ಲದೆ ನಡೆಯುತ್ತಲೇ ಇವೆ. ಅಮಾನವೀಯ ಜಾತಿ ಪದ್ಧತಿಯ ವಿರುದ್ಧ ಸಮರ ಸಾರಿದ ಶರಣರ ಕ್ರಾಂತಿಯ ಬಗ್ಗೆ ಹೆಮ್ಮೆಪಟ್ಟುಕೊಳ್ಳುವ ಈ ನಾಡಿನ ಜನ ಶರಣರ ಅಮರ ಸಂದೇಶವನ್ನು ಜಾರಿಗೊಳಿಸುವಲ್ಲಿ ವಿಫಲರಾಗಿದ್ದೇವೆ ಎಂಬುದರ ಪುರಾವೆಯಾಗಿವೆ ಇಂತಹ ಘಟನೆಗಳು.

ಸರಿಸಮಾನರು ಎಂಬ ಮಾನವೀಯ ಮೌಲ್ಯವನ್ನು ಮೈಗೂಡಿಸಿಕೊಳ್ಳಲು ಸಹಾಯವಾಗುವಂತೆ ಮಾಡುವುದು ಸಹ ಶಾಲೆಯ ಬಿಸಿಯೂಟ ವ್ಯವಸ್ಥೆಯ ಉದ್ದೇಶವಾಗಿದೆ. ಹುಟ್ಟಿನಿಂದ ದಲಿತರು ಎಂದು ಗುರುತಿಸಲ್ಪಟ್ಟವರು ಸ್ಪರ್ಶಕ್ಕೆ ಅನರ್ಹರಲ್ಲ. ಅವರೂ ಉಳಿದವರಂತೆ ಮನುಷ್ಯರು. ಮನುಷ್ಯರಲ್ಲಿ ಸ್ಪರ್ಶರು ಮತ್ತು ಅಸ್ಪ್ರಶ್ಯರು ಎಂದು ಗುರುತಿಸುವುದು, ತಾರತಮ್ಯ ಮಾಡುವುದು ವೈಜ್ಞಾನಿಕವೂ ಅಲ್ಲ, ಮಾನವೀಯವೂ ಅಲ್ಲ ಎಂಬುದನ್ನು ನಮ್ಮ ಮಕ್ಕಳು ಅರಿಯುವುದೂ ಆಗಬೇಕಾಗಿದೆ. ಶಾಲೆಗಳಲ್ಲಿ ಮಕ್ಕಳಿಗೆ ಸಮವಸ್ತ್ರ ನೀಡುವುದೂ ಸಹ ಇದೇ ಉದ್ದೇಶಕ್ಕೆ ಪೂರಕವಾಗಿದೆ.

ಆದರೆ ನಾವು ನಾಗರಿಕರು ಇನ್ನೂ ಅನಾಗರಿಕರಾಗಿಯೇ ಇರಲು ಬಯಸುತ್ತೇವೆ. ನಮ್ಮ ಮಕ್ಕಳ ಮೇಲೆ ನಮ್ಮ ಅನಿಷ್ಟ ವಿಚಾರಗಳನ್ನು ಹೇರುತ್ತೇವೆ. ನಮ್ಮ ಮನಸ್ಸುಗಳಿಗೆ ಅಂಟಿಕೊಂಡಿರುವ ರೋಗವನ್ನು ನಮ್ಮ ಮುಗ್ಧ ಮಕ್ಕಳ ಮನಸ್ಸುಗಳಿಗೂ ಹಬ್ಬಿಸುತ್ತಿದ್ದೇವೆ.


ಅವರು ನಮ್ಮ ಮಕ್ಕಳು. ಅವರು ನಾವು ಬಯಸಿದಂತೆ ಬೆಳೆಯಬೇಕು. ನಾವು ಬಯಸುವುದನ್ನೇ ಮಾಡಬೇಕು. ಹಾಗೆ ಬಯಸುವುದು ನಮ್ಮ ಹಕ್ಕು ಎಂದು ವಾದಿಸುತ್ತೇವೆ. ಹೀಗಾಗಿ, ಅನೇಕ ಇತರ ಸಾಮಾಜಿಕ ಪಿಡುಗುಗಳಂತೆ ಜಾತಿ ಅಸ್ಪೃಶ್ಯತೆ ಆಚರಣೆಯ ಪಿಡುಗು ಪೀಳಿಗೆಯಿಂದ ಪೀಳಿಗೆಗೆ ಹಸ್ತಾಂತರವಾಗುತ್ತಾ ಬಂದಿದೆ.

ನಾವು ಮಕ್ಕಳ ಪೋಷಕರಾಗಿ ಸ್ವಲ್ಪ ತರ್ಕಬದ್ಧವಾಗಿ ಯೋಚಿಸಬೇಕು. ನಾವು ನಮ್ಮ ಮಕ್ಕಳನ್ನು ನಗರಗಳಿಗೆ ಕರೆದು ಕೊಂಡು ಹೋಗುತ್ತೇವೆ. ಶಾಲೆಯಲ್ಲಿ ಏರ್ಪಡಿಸಲಾಗುವ ಶೈಕ್ಷಣಿಕ ಪ್ರವಾಸಗಳ ಸಂದರ್ಭದಲ್ಲಿ ನಮ್ಮ ಮಕ್ಕಳು ಬೇರೆ ಬೇರೆ ಊರುಗಳಿಗೆ ಹೋಗುತ್ತಾರೆ. ಅಲ್ಲಿ ಸಾರ್ವಜನಿಕ ಹೋಟೇಲುಗಳಲ್ಲಿ ಅವರು ಊಟ ಉಪಹಾರ ಸೇವಿಸುತ್ತಾರೆ. ಹೊಟೇಲುಗಳಲ್ಲಿ ತಿನ್ನುವ ತಿಂಡಿ ತಿನಿಸುಗಳನ್ನು ಮೇಲ್ಜಾತಿಯವರೇ ತಯಾರಿಸುತ್ತಾರಾ? ಅದ್ಯಾವುದನ್ನೂ ವಿಚಾರಿಸದೆ ನಮ್ಮ ಮಕ್ಕಳು ಹೊಟೇಲ್ ತಿಂಡಿಗಳನ್ನು ತಿಂದು ತಮ್ಮ ಹಸಿವೆಯನ್ನು ನೀಗಿಸಿಕೊಳ್ಳುವುದಿಲ್ಲವೆ? ಶಾಲೆಯಲ್ಲಿ ತಯಾರಿಸುವ ಬಿಸಿಯೂಟವನ್ನು ಮಾತ್ರ ಮೇಲ್ಜಾತಿಯವರೇ ಸಿದ್ಧಪಡಿಸಿರಬೇಕೆಂದು ಇಂತಹ ಕೆಲವು ಪೋಷಕರು ಒತ್ತಾಯಿಸುವುದು ಏಕೆ? ಆ ಮೂಲಕ ಶಾಲೆಯಲ್ಲಿನ ಸುಮಧುರ ವಾತಾವರಣವನ್ನು ಹಾಳು ಮಾಡುವುದೇಕೆ?

ಪೇಜಾವರದ ವಿಶ್ವೇಶತೀರ್ಥ ಸ್ವಾಮಿಗಳಂತಹ ಕೆಲವು ಮಠಾಧೀಶರ ಅಮಾನವೀಯ ನಿಲುವುಗಳು ಇಂತಹ ಅನಿಷ್ಟ ಸಂಪ್ರದಾಯಗಳನ್ನು ಗಟ್ಟಿಗೊಳಿಸುತ್ತಾ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುತ್ತಿವೆ. ಗೊಲ್ಲರ ವಂಶಕ್ಕೆ ಸೇರಿದ ಶ್ರೀ ಕೃಷ್ಣನ ಮಠದಲ್ಲಿ ಬ್ರಾಹ್ಮಣೇತರರಿಗೆ ಪ್ರಸಾದ ವಿತರಣೆಯಲ್ಲಿಯೂ ಪಂಕ್ತಿ ಬೇಧ ಮಾಡುವುದನ್ನು ಇವರು ಸಮರ್ಥಿಸುತ್ತಾರೆ. ಸಾಧುಸಂತರ ಪರಂಪರೆಗೆ ಅವಮಾನಕಾರಿಯಾಗಿರುವ ಇಂತಹವರು ಮೆರೆಯುತ್ತಿರುವುದರಿಂದಲೇ ಈ ದೇಶದ ಸಂವಿಧಾನದ ಮೇಲೆ ಶಾಲೆಗಳಲ್ಲಿ, ದೇವಾಲಯಗಳಲ್ಲಿ, ಎಲ್ಲೆಡೆಗಳಲ್ಲಿ ಅತ್ಯಾಚಾರವೆಸಗಲಾಗುತ್ತಿದೆ. ಇದರ ವಿರುದ್ಧ ಮೇಲ್ಜಾತಿಗಳಲ್ಲಿ ಗುರುತಿಸಲ್ಪಡುವ ಎಲ್ಲ ಪ್ರಗತಿಪರರ ಗಟ್ಟಿಧ್ವನಿ ರಾಜ್ಯದೆಲ್ಲೆಡೆ ಮೊಳಗಬೇಕು.

ಮಡ ಮಡೆಸ್ನಾನ : ಸಮರ್ಥನೆಯ ಹೊಸ ವರಸೆಗಳು ಮತ್ತು ಬೆಳೆಯುತ್ತಿರುವ ಪ್ರತಿರೋಧವೂ

ಮೌಢ್ಯತೆ, ಜಾತಿ ತಾರತಮ್ಯ ಹಾಗೂ ಅಮಾನವೀಯ ಆಚರಣೆಯಾದ ಮಡ ಮಡೆಸ್ನಾನವನ್ನು ನಿಲ್ಲಿಸಬೇಕೆ, ಬೇಡವೇ ಎಂಬುದರ ಸುತ್ತ ಈ ದಿನಗಳಲ್ಲಿ ಅತ್ಯಂತ ಬಿರುಸಿನ ಚರ್ಚೆಗಳು ಮತ್ತೆ ಕಾಣಿಸಿಕೊಂಡಿವೆ. ಪುರೋಗಾಮಿ ರಾಜಕೀಯ–ಸಾಮಾಜಿಕ ಶಕ್ತಿಗಳು, ಪ್ರಗತಿಪರರು ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಈ ಅನಿಷ್ಠ ಆಚರಣೆಯನ್ನು ನಿಲ್ಲಿಸಬೇಕು, ನಿರ್ಬಂಧಿಸಬೇಕು ಎಂದು ಆಗ್ರಹಿಸಿದರೆ, ಇದಕ್ಕೆ ಎದುರಾಗಿ ಅದು ಹಲವಾರು ಶತಮಾನಗಳ ಆಚರಣೆ, ಭಕ್ತರ ವ್ಯಕ್ತಿಗತ ಧಾರ್ಮಿಕ ನಂಬಿಕೆ, ಸ್ವಯಂಪ್ರೇರಿತ ಇತ್ಯಾದಿ ವಾದಗಳ ಮೂಲಕ ಅದನ್ನು ಸಮರ್ಥಿಸಲಾಗುತ್ತಿದೆ. ಇದು ತಾತ್ವಿಕ ಸಂಘರ್ಷಕ್ಕೂ ಎಡೆ ಮಾಡಿದೆ. ನಿಡುಮಾಮಿಡಿ ಸ್ವಾಮೀಜಿಯವರ ನೇತೃತ್ವದಲ್ಲಿ 208 ಪ್ರಗತಿಪರ ಮಠಾಧೀಶರು ಮೂರು ದಿನಗಳ ಧರಣಿ ಉಪವಾಸ ಸತ್ಯಾಗ್ರಹವನ್ನು ನಡೆಸಿದ್ದರೆ, ಮಡೆಸ್ನಾನ–ಎಡೆಸ್ನಾನಗಳ ಮೀಮಾಂಸೆ ಮೂಲಕ ಮೂಲಭೂತವಾಗಿ ಯಥಾಸ್ಥಿತಿಯನ್ನು ಕಾಯುವ ಪ್ರತಿಗಾಮಿ ಸಮರ್ಥನೆಗೆ ಪೇಜಾವರ ಮಠದ ವಿಶ್ವೇಶ್ವರತೀರ್ಥ ಸ್ವಾಮೀಜಿ ತಮ್ಮ ಧರ್ಮಾರ್ಥ 'ರಾಜಕೀಯ' ಪರ್ಯಟನೆ ನಡೆಸಿದ್ದಾರೆ. ಮಡೆಸ್ನಾನ ಮತ್ತು ಇದಕ್ಕೆ ಮೂಲವಾದ ಪಂಕ್ತಿಬೇಧಗಳನ್ನು ನಿಲ್ಲಿಸಲು ಸಿಪಿಐ(ಎಂ) ರಾಜ್ಯದಾದ್ಯಂತ ಪ್ರತಿಭಟಿಸಿದೆ. ಹಿಂದುಳಿದ ವರ್ಗಗಳ ಒಕ್ಕೂಟದ ಶಿವರಾಮುರವರು ಜಾಥಾ ನಡೆಸಿದ್ದಾರೆ.



ಹುನ್ನಾರಗಳ ನಡುವೆಯೂ

ಕುಕ್ಕೆಯಲ್ಲಿ ಮಡೆಸ್ನಾನ ಮುಂದುವರಿಸಲು ಆದೇಶಿಸಿರುವ ರಾಜ್ಯ ಉಚ್ಚನ್ಯಾಯಾಲಯದ ಮಧ್ಯಂತರ ತೀರ್ಪು ಒಂದು ನಿಖರ, ನಿಷ್ಠುರ ನಿಲುವಿಗೆ ಬರಲಾಗದ, ಯಥಾ ಸ್ಥಿತಿಯ ಮುಂದುವರಿಕೆಗೆ ನೀಡಿದ ಅಭಯ. ಹೀಗಾಗಿ ಚಂಪಾಷಷ್ಠಿಯಂದು ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಎಂಜಲೆಲೆಯ ಮೇಲಿನ ಉರುಳಾಟ ನಿರಾತಂಕವಾಗಿ ನಡೆದಿದೆ. ಹಾಗೆಯೇ ಇತರೆ ಕೆಲವೆಡೆಯೂ ಆಗಿದೆ. ಸುಬ್ರಹ್ಮಣ್ಯ ದೇವಸ್ಥಾನಗಳಿರುವಲ್ಲಿ ಇದನ್ನು ಸಾಂಕ್ರಾಮಿಕ ರೋಗದಂತೆ ಹಬ್ಬಿಸುವ ಹುನ್ನಾರಗಳೂ ನಿಂತಿಲ್ಲ.

ಆದರೆ ಗಮನಿಸಬೇಕಾದ ಅಂಶವೆಂದರೆ ಎಷ್ಟೆಲ್ಲಾ ಸಮರ್ಥನೆಗಳು ಇದ್ದರೂ ಕುಕ್ಕೆಯಲ್ಲಿ ಈ ಬಾರಿ ಉರುಳಿದವರ ಪ್ರಮಾಣ ಇಳಿಮುಖವೇ. ಇನ್ನೂ ಒಂದು ವಿಶೇಷವೆಂದರೆ ಕಳೆದ ಬಾರಿ ಪುರೋಹಿತಶಾಹಿಗಳ ಒತ್ತಡ ಮತ್ತು ಹೊಯ್ದಾಟಗಳಲ್ಲಿದ್ದ ಚಿಕ್ಕಬಳ್ಳಾಪುರದ ಜಿಲ್ಲಾಡಳಿತ ಈ ಸಲ ಈ ಆಚರಣೆಯನ್ನು ನಿಷೇಧಿಸಿ ದೃಢವಾಗಿ ನಿಂತು ಬಿಟ್ಟಿದೆ. ಇದಕ್ಕೆ ಬಲ ನೀಡುವಲ್ಲಿ ಅಲ್ಲಿ ಸಿಪಿಐ(ಎಂ) ನಡೆಸಿದ ಹೋರಾಟದ ಪಾತ್ರ ಪ್ರಮುಖವಾಗಿದೆ. ಹಾಗೆ ಪೇಜಾವರರ ಮಠ ವ್ಯಾಪ್ತಿಯ ಮುಚ್ಲುಕೋಡು ಸುಬ್ರಹ್ಮಣ್ಯ ದೇವಳದಲ್ಲಿ ಮಡೆಸ್ನಾನ ಮಾಡಿಸಲಾಗದೆ ಅವರೇ ಪ್ರತಿಪಾದಿಸುವ ಎಡೆಸ್ನಾನ ನಡೆಸಿದ್ದು. ಆದರೆ ಶ್ರೀಕೃಷ್ಣ ಮಠದಲ್ಲಿ ಮಡೆಸ್ನಾನ ಆಗಿದೆ. ಅಂದರೆ ರಾಜ್ಯದಲ್ಲಿ ಈ ಪ್ರಶ್ನೆಯನ್ನು ಕೆಲ ಪ್ರಗತಿಪರರು, ಸಿಪಿಐ(ಎಂ) ಪಕ್ಷ ಆರಂಭದಲ್ಲಿ ಎತ್ತಿಕೊಂಡಾಗ ಇದ್ದಾಗಿನ ಸ್ಥಿತಿಗಿಂತ ಈಗ ಅದು ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರತಿರೋಧದ ವಿಸ್ತಾರವನ್ನು ಪಡೆಯುತ್ತಿದೆ. ನಿಧಾನಕ್ಕಾಗಿಯಾದರೂ ಜನ ಮಾನಸವನ್ನು ಕಲಕುತ್ತಿದೆ, ಆರೋಗ್ಯಕರ ಚಿಂತನೆಗೆ ಹಚ್ಚಿದೆ. ಆದರೆ ವಿವಿಧ ಆಯಾಮಗಳಲ್ಲಿ ನಡೆಯುವ ಹೋರಾಟ ಅತ್ಯಂತ ತಾಳ್ಮೆ, ಸಮಚಿತ್ತದಿಂದ ಆಳವಾದ ಸೈದ್ಧಾಂತಿಕ ನೆಲೆಯಲ್ಲಿ ನಡೆಯಬೇಕು.

ಆದರೆ ಈ ಬೆಳವಣಿಗೆಗಳಿಂದಾಗಿ ಅಸಮಾನತೆ ಮತ್ತು ಅಮಾನವೀಯತೆಯ ಈ ವ್ಯವಸ್ಥೆಯಿಂದ ಲಾಭ ಹೊಡೆಯುವ ಸ್ಥಾಪಿತ ಹಿತಾಸಕ್ತಿಗಳು ದಿಗಿಲು ಬಿದ್ದವರಂತೆ ಎದ್ದು ಕೂಗ ತೊಡಗಿವೆ. ಶೋಷಣಾ ವ್ಯವಸ್ಥೆಯ ಪೋಷಕರಾಗಿರುವ ಪರಾನ್ನಜೀವಿ 'ಪುರೋಹಿತಶಾಹಿ' ವಿತಂಡವಾದಗಳ ಮೂಲಕ ಜನರನ್ನು ಗೊಂದಲಕ್ಕೆ ದೂಡಲು ಯತ್ನಿಸುತ್ತಿವೆ.

ಹುಸಿ ಸಮರ್ಥನೆಗಳು

ಇಲ್ಲವಾದಲ್ಲಿ ಪೇಜಾವರ ವಿ.ತೀ.ಸ್ವಾ.ರವರು ನ್ಯಾಯಾಲಯದ ತಾತ್ಕಾಲಿಕ ಆದೇಶವನ್ನೇ ತಮ್ಮ ಪರವಾದ ತೀರ್ಪು ಎಂದು ಬಿಂಬಿಸಿಕೊಳ್ಳುವ ಅಗತ್ಯವೇನಿತ್ತು? ಮನುಷ್ಯರ, ಮಾನವೀಯತೆಯ ತುಚ್ಛೀಕರಣವನ್ನು ಧಾರ್ಮಿಕ ನಂಬಿಕೆಯ ಹೊದಿಕೆಯೊಳಗೆ ವೈಭವೀಕರಿಸುವ ಅರ್ಥವೇನು? ಈ ಅನಿಷ್ಟ ಪದ್ಧತಿ ತೊಲಗಿಸಿ ಎಂಬ ಆಗ್ರಹ ಬ್ರಾಹ್ಮಣ ಮತ್ತು ಹಿಂದೂ ಧರ್ಮದ ವಿರೋಧವಾಗುವುದಾದರೆ ಇವರು ಪಾಲಿಸುವ, ಪ್ರತಿಪಾದಿಸುವ ಧರ್ಮದ ಅರ್ಥವೇನು? ಅಂತೂ ಪೇಜಾವರರ ಬಾಯಿ ತೆರೆದಂತೆಲ್ಲಾ ಬಣ್ಣಗೇಡಿತನ ಬಯಲಾಗುತ್ತಿದೆ.

ಆದಾಗ್ಯೂ, ಜನರ ತಲೆಯೊಳಗೆ ಬಿಟ್ಟಿರುವ ಅಂಧಶ್ರದ್ಧೆಯ ಹುಳುಗಳು ಜೀವಂತವಿವೆ. ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟ್‌ನ ಮುಂದೆ ಪುರೋಹಿತಶಾಹಿಯು ಕೆಲವು ಮಲೆಕುಡಿಯರ ಮೂಲಕ ವಾದಿಸುತ್ತಿರುವಂತೆ ಇದು ಪರಂಪರಾನುಗತವಾದ ಆಚರಣೆಯೇನಲ್ಲ. ಉಚ್ಚ ನ್ಯಾಯಾಲಯದ ಮುಂದೆ ವಾದಿಸುವಾಗ ಏನಿಲ್ಲವೆಂದರೂ 500–600 ವರುಷಗಳ ಇತಿಹಾಸ ಇದೆ ಎಂದಿದ್ದಾರೆ. ಆದರೆ ಅದಕ್ಕೆ ಯಾವುದೇ ಆಧಾರ ದಾಖಲೆಗಳಿಲ್ಲ.



ಆ ಕುಕ್ಕೆ ಪ್ರದೇಶದಲ್ಲಿ ಇದ್ದದ್ದು ಮೂಲದಲ್ಲಿ ಆದಿ ಸುಬ್ರಹ್ಮಣ್ಯ ಮತ್ತು ಹುತ್ತಗಳ ಸಮೂಹ. ದಟ್ಟಡವಿಯ ನಡುವೆ ಆದಿವಾಸಿಗಳ ಆರಾಧ್ಯ ದೈವ ಸುಬ್ರಹ್ಮಣ್ಯನಾಗಲೀ,

ಪುಟ 4 ಕ್ಕೆ



ವಿಜಾಪುರ: ಅಂಗನವಾಡಿ ಕಾರ್ಯಕರ್ತೆಯ ಮೇಲಿನ ಅತ್ಯಾಚಾರ – ಕೊಲೆ ಖಂಡಿಸಿ ಪ್ರತಿಭಟನೆ

ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯಾದ ಭಾರತಿ ಮೆಂಡೆಗಾರ ಅವರನ್ನು ದುಷ್ಕರ್ಮಿಗಳು ಅತ್ಯಾಚಾರ ಮಾಡಿ ಅಮಾನುಷವಾಗಿ ಕೊಲೆ ಮಾಡಿದ ದುರಂತವೊಂದು ಬಿಜಾಪುರದಲ್ಲಿ ನಡೆದಿದೆ. ಈ ಅಮಾನುಷ ಅತ್ಯಾಚಾರ–ಕೊಲೆಯನ್ನು ಖಂಡಿಸಿ ಅಂಗನವಾಡಿ ಕಾರ್ಯಕರ್ತೆಯರು ವಿವಿಧ ಸಂಘಟನೆಯ ಮುಖಂಡರು ಸೇರಿ ಜಿಲ್ಲಾಧಿಕಾರಿ ಕಛೇರಿ ತೆರಳಿ ಪ್ರತಿಭಟನೆ ಧರಣಿ ನಡೆಸಿದರು. ಹಾಗೂ ಜಿಲ್ಲಾಧಿಕಾರಿ ಡಿ. ರಣದೀಪ ಅವರಿಗೆ ಮನವಿ ಸಲ್ಲಿಸಿ ತುರ್ತು ಕ್ರಮಕ್ಕೆ ಒತ್ತಾಯಿಸಿದರು.

ಪ್ರತಿಭಟನೆ ಸಂದರ್ಭದಲ್ಲಿ ಕೊಲೆಗಡುಕರನ್ನು ಕೂಡಲೇ ಬಂಧಿಸಿರಿ... ಅತ್ಯಾಚಾರಿಗಳಿಗೆ ಧಿಕ್ಕಾರ.. ಧಿಕ್ಕಾರ.. ಎನ್ನುವ ಘೋಷಣೆಗಳು ಜನರ ಅಂತರಾಳದಿಂದ ಹೊರಬಿದ್ದವು. ಈ ಸಂದರ್ಭದಲ್ಲಿ ಸರಸ್ವತಿಮಠ ಕರ್ನಾಟಕ ರಾಜ್ಯ ಅಂಗನವಾಡಿ ಜಿಲ್ಲಾಧ್ಯಕ್ಷರು ಮಾತನಾಡುತ್ತ, ಅಂಗನವಾಡಿ ಕಾರ್ಯಕರ್ತೆಯಾದ ಭಾರತಿ ಮಂಡೇಗಾರರನ್ನು ನವೆಂಬರ್, 22, 2014 ರಂದು ಮಧ್ಯ ರಾತ್ರಿಯಲ್ಲಿ ಅತ್ಯಾಚಾರ ಮಾಡಿ ಅಮಾನುಷವಾಗಿ ಕೊಲೆ ಮಾಡಿದ ಕೊಲೆ ಗಡುಕರನ್ನು ತಕ್ಷಣವೇ ಬಂಧಿಸಬೇಕು. ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು. ಯಾವುದೇ ಕ್ರಮ ತೆಗೆದುಕೊಳ್ಳದಿದ್ದರೆ ರಾಜ್ಯಾದ್ಯಂತ ಹೋರಾಟ ಮಾಡಲಾಗುವುದೆಂದು ಎಚ್ಚರಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯದ ಉಪಾಧ್ಯಕ್ಷರು ಭೀಮಶಿ ಕಲಾದಗಿ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಸುರೇಖಾ ರಜಪೂತ ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯಾದ ಭಾರತಿ ಮೇಂಡೆಗಾರರನ್ನು ಅತ್ಯಾಚಾರ ಮಾಡಿ ಅಮಾನುಷವಾಗಿ ಕೊಲೆ ಮಾಡಿದವರ ಮೇಲೆ ಕೇಸು ದಾಖಲು ಮಾಡಿದೆ. ಇನ್ನೂವರೆಗೆ ಕೊಲೆಗಾರರನ್ನು ಬಂಧಿಸಿಲ್ಲ. ಪೊಲೀಸರ ವಶೀಲಿ ಒತ್ತಡದಿಂದ ವಿಳಂಬವಾಗುತ್ತಿದೆ. ಆದ ಕಾರಣ ತಕ್ಷಣವೇ ಸಿ.ಓ.ಡಿ. ತನಿಖೆ ಮಾಡಿಸಬೇಕು. ಅಪರಾಧಿಗಳನ್ನು ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಭಾರತಿ ವಾಲಿ, ಸಿಐಟಿಯು ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ, ಜಿ.ಎಸ್. ಇಂಗಳಗಿ, ಸಾಯಬಣ್ಣ ಹಂದಿಗನೂರು, ಭೀಮರಾಯ ಪೂಜೇರಿ, ಕ.ಸಾ.ಪ. ಅ ಧ್ಯಕ್ಷ ಮಲ್ಲಿಕಾರ್ಜುನ ಯಂಡಿಗೇರಿ, ಬಿ. ಆರ್. ಬನಸೋಡೆ, ಪವಾಡೆಪ್ಪ ಚಲವಾದಿ, ನಯಿಲಾ ನಧಾಪ, ಪದ್ಮಾವತಿ ಬಿರಾದಾರ, ಬಿ.ಎನ್. ಅಲಗೊಂಡ, ದಲಿತ ಮುಖಂಡರಾದ ಗಣಪತಿ ಬಾಣಿಕೋಲ ಮುಂತಾದವರು ಬೆಂಬಲ ಸೂಚಿಸಿ ಮಾತನಾಡಿದರು.

ಮನವಿಯನ್ನು ಸ್ವೀಕರಿಸಿ ಜಿಲ್ಲಾಧಿಕಾರಿಗಳು ಈ ಕೂಡಲೆ ಇದರ ಬಗ್ಗೆ ಗಮನವಹಿಸಿ ಪೊಲೀಸ ಅಧಿಕಾರಿಗಳಿಗೆ ಕ್ರಮ ತೆಗೆದುಕೊಳ್ಳಲು ಸೂಚಿಸುತ್ತೇನೆಂದು ಆಶ್ವಾಸನೆ ಕೊಟ್ಟರು.

– ಸರಸ್ವತಿ ಮಠ

ಈ ವಾರ..........

ಪುಟ 4 ಕ್ಕೆ

ನಾಗ ದೇವತೆ, ಪಂಜುರ್ಲಿಯಂತಹ ದೈವಗಳ ಆರಾಧನೆ ಅತ್ಯಂತ ಸಹಜವಾದುದು. ಅಲ್ಲಿಯ ಹುತ್ತದ ಸುತ್ತ ಉರುಳಿದಲ್ಲಿ ಆ ಮಣ್ಣಿನ ಗುಣದಿಂದಾಗಿ ಕೆಲವು ಚರ್ಮರೋಗಗಳು ವಾಸಿಯಾಗುತ್ತವೆ ಎಂಬ ನಂಬಿಕೆ ಅನುಭವಶೀಲವೂ ಆಗಿರಬಹುದು. ಆದರೆ ಈ ವಿಷಯದಲ್ಲಿ ಸೂಕ್ತ ಆಧಾರಗಳಿಲ್ಲದೇ ಹೀಗೇ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಇಲ್ಲಿನ ಸುಬ್ರಹ್ಮಣ್ಯನೊಂದಿಗೆ ಗುರುತಿಸಿಕೊಂಡಿರುವ ಮಲೆಕುಡಿಯ ಸಮುದಾಯವು ಜಾತ್ರೆ, ತೇರು ಕಟ್ಟುವುದೂ ಒಳಗೊಂಡು ಹಲವಾರು ಆಚರಣೆಗಳಲ್ಲಿ ಬೆರೆತಿ–ದೆ. ಈ ಕೆಲ ಆಚರಣೆಗಳು ಅವರ ಮೂಲವೂ ಆಗಿರುವುದು ಸಹ ಸಹಜವಿದೆ.

ಆದರೆ ಈಗ ಪೇಜಾವರರೂ ಸೇರಿದಂತೆ ವೈದಿಕ ಪುರೋಹಿತಶಾಹಿ ವಾದಿಸುವಂತೆ ಬ್ರಾಹ್ಮಣರು ಉಂಡು ಬಿಟ್ಟ ಎಂಜಲಿನ ಮೇಲೆ ಉರುಳುವುದರಿಂದ ಎಂಜಲಿನಿಂದ ಹರಡುವ ಕೆಲವು ರೋಗಗಳು ಬರುವ ಸಾಧ್ಯತೆಗಳಿವೆ ಎಂಬುದು ಬಿಟ್ಟರೆ, ಯಾವುದೇ ರೀತಿಯ ಚರ್ಮ ರೋಗಗಳು ವಾಸಿಯಾಗುತ್ತವೆ ಎಂಬುದಕ್ಕೆ ಆಧಾರಗಳಿಲ್ಲ. (ಇರುವ ಕೆಲವು ಆದಿ ಸುಬ್ರಹ್ಮಣ್ಯನೊಂದಿಗೆ) ಎಂಜಲೆಲೆಯ ಮೇಲಿನ ಉರುಳಾಟ ಇಲ್ಲಿ ಏನಿದ್ದರೂ ಇತ್ತೀಚಿನದು. ಅದರಲ್ಲೂ ಇದು ನಡೆಯುವುದು ಇನ್ನೊಂದು ವೈದಿಕಶಾಹಿ ಹಿಡಿತದಲ್ಲಿರುವ ಸುಬ್ರಹ್ಮಣ್ಯ ದೇವಳದಲ್ಲಿ. (ಆದಿಗೂ ಅವರೇ) ಹೋಗಲಿ, ಅದು ಹಳೆಯ ಆಚರಣೆ ಎಂಬ ಕಾರಣಕ್ಕೆ ಪವಿತ್ರವಾಗಿ ಬಿಡುವುದೇ? ದೇವರ ಗುಡಿಯಲ್ಲಿ ನಡೆಯುತ್ತಿದೆ ಎಂಬುದಕ್ಕೆ ಅದು ಧಾರ್ಮಿಕವಾದ ಅರ್ಹತೆಯನ್ನು ಪಡೆದು ಬಿಡುವುದೇ? ಹಾಗಂತ ವಾದಿಸುವವರು ದೇವದಾಸಿ ಪದ್ಧತಿ, ಬೆತ್ತಲೆ ಸೇವೆಯಂತಹ ಅನಿಷ್ಟ ವಂಚಕ ಪದ್ಧತಿಗಳಿಗೆ ಧರ್ಮದ ಲೇಪ ಬಳಿದು ಅದನ್ನು ಮುಂದುವರಿಸ ಬಯಸುವ ಸ್ಥಾಪಿತ ಹಿತಾಸಕ್ತಿಗಳು. ಅಂತಹವರ ಧಾರ್ಮಿಕ, ಮಾನವೀಯ ಪ್ರಜ್ಞೆಯನ್ನೇ ಪ್ರಶ್ನಿಸಬೇಕಾಗುತ್ತದೆ. ಮತ್ತೂ ವಾದಿಸುವಂತೆ ಬ್ರಾಹ್ಮಣರ ಎಂಜಲಿನ ಮೇಲೆ ಉರುಳುವ ಸಮೂಹ ಸನ್ನಿಯನ್ನು 'ಸ್ವಯಂಪ್ರೇರಿತ' ಎಂದು ಒಪ್ಪಲಾದೀತೇ? ಜನರ, ಅಜ್ಞಾನ, ಹತಾಶೆ, ಮುಗ್ಧತೆಯನ್ನೇ ಬಂಡವಾಳ ಮಾಡಿಕೊಂಡು ಅಂಧಶ್ರದ್ಧೆ ಬೆಳೆಸಿ, ನಂಬಿಸಿ ಇಂತಹ ಅಸಂಬದ್ಧ, ಅವೈಜ್ಞಾನಿಕ ಆಚರಣೆಗಳನ್ನು ರೂಢಿಸುತ್ತಿರುವುದರಲ್ಲಿ ಯಾವ ಮನುಷ್ಯತ್ವವಿದೆ? ಇದನ್ನು ಧಾರ್ಮಿಕ ಕಲ್ಯಾಣದ ಕ್ರಿಯೆಯೆಂದಾಗಲೀ, ಸ್ವಯಂ ಇಚ್ಛಿತ ಎಂದಾಗಲೀ ಹೇಳುವುದು ವಂಚನೆಯ ಪರಮಾವಧಿ ಅಷ್ಟೇ. ಇಲ್ಲಿನ ನಾಗದೋಷ ನಿವಾರಣೆ, ಮಡಸ್ನಾನ, ಇಷ್ಟಾರ್ಥ ಕೋರಿಕೆಗಳ ಈಡೇರಿಕೆಯ ಜ್ಯೋತಿಷಿಗಳ ಹೈಪ್‌ನಿಂದಾಗಿ ದೇವಸ್ಥಾನದ ಆದಾಯ ಮತ್ತು ದಕ್ಷಿಣೆಯ ರಸಗವಳ ನೂರಾರು ಕೋಟಿಗೆ ಏರಿಕೆ–ಯಾಗಿದೆ. ಬಡವರು ಮಾತ್ರವಲ್ಲ, ಸಿರಿವಂತರನ್ನೂ ಸೆಳೆಯುತ್ತಿದೆ.

ಹೀಗೆ ಸುಲಭವಾಗಿ ಸೇರುವ ಸಿರಿವಂತಿಕೆಯನ್ನು ಬಿಡಲು ಯಾರು ಸಿದ್ಧರು? ಹಾಗಾಗಿಯೇ, ಮನುಷ್ಯರೆಲ್ಲಾ ಒಂದೇ, ಮಡೆಸ್ನಾನ, ಅಂಧಶ್ರದ್ಧೆ–ಮೌಢ್ಯತೆ ಆಚರಣೆ, ಜನರನ್ನು ಸುಲಿಯುವ ಅರ್ಥಹೀನ ಜೋತಿಷ್ಯ ನಿರ್ಬಂಧಿಸಬೇಕು, ಜಾತಿ ತಾರತಮ್ಯ ತೊಲಗಬೇಕು ಎಂಬಿತ್ಯಾದಿ ಆಗ್ರಹಗಳಿಗೆ ಧರಣಿ ಮಾಡಿದ ಪ್ರಗತಿಪರ ಮಠಾಧೀಶರನ್ನು ಢೋಂಗಿಗಳೆಂದು ಕರೆದ ಪೇಜಾವರರು, ನಂತರ ತಕ್ಕ ಪ್ರತ್ಯುತ್ತರದ ಮಂಗಳಾರತಿ ಪಡೆದ ಬಳಿಕ ತಾವು ಹಾಗೇ ಹೇಳಿಯೇ ಇಲ್ಲ ಎಂದು ನಾಲಿಗೆ ತಿರುಚಿದ್ದು ಅವರ ಖೋಟಾ ವ್ಯಕ್ತಿತ್ವದ ದರ್ಶನ. ಇವರ ಅಭಿಪ್ರಾಯದಂತೆ ಮಡೆಸ್ನಾನಕ್ಕೆ ಹಸಿರು ನಿಶಾನೆಯನ್ನು ಕೋರ್ಟ್ ತೋರಿಸಿದ್ದಕ್ಕೆ ಕೆಲ ಮುಗ್ಧ ಹಾಗೂ ಅವಕಾಶವಾದಿ ಮಲೆಕುಡಿಯರನ್ನು ಗುರಾಣಿಯಾಗಿ ಬಳಸುತ್ತಿರುವ ಪುರೋಹಿತಶಾಹಿಗಳ ಹುನ್ನಾರವಲ್ಲ, ಬದಲಿಗೆ ಪ್ರಗತಿಪರರಂತೆ! ಎಡೆಸ್ನಾನಕ್ಕೆ ಒಪ್ಪಿದ್ದರೆ ಈ ಆದೇಶ ಬರುತ್ತಿರಲಿಲ್ಲವಂತೆ! ಅಂತೂ ಜನ ಉರುಳುತ್ತಲೇ ಇರಬೇಕು, ಅಂದರೆ ತಾನೆ ಕಾಂಚಾಣವೂ ಉರುಳುರುಳಿ ಖಜಾನೆ ತುಂಬುವುದು.

ಹಾದಿ ತಪ್ಪಿಸುವ ವರಸೆಗಳು

ರಾಜ್ಯ ಉಚ್ಚನ್ಯಾಯಲಯದ ಮುಂದೆ ವಾದಿಸಿದ ಭಾಸ್ಕರ ಬೆಂಡೋಡಿಯವರ ಆದಿವಾಸಿ ಹಿತರಕ್ಷಣಾ ವೇದಿಕೆಯು ಮಲೆ ಕುಡಿಯರಿಗೆ ಎಂಜಲೆಲೆಯ ಮೇಲೆ ಉರುಳುವುದು ಧಾರ್ಮಿಕ ಪದ್ಧತಿ ಎಂದೆಲ್ಲಾ ಹೇಳಿತ್ತು. ಅಲ್ಲಿ ಪಂಕ್ತಿಬೇಧ ಇಲ್ಲವೆಂದೂ, ಎಲ್ಲಾ ಜಾತಿಗೆ ಸೇರಿದ ಭಕ್ತರು ಸಹಭೋಜನ ಮಾಡಿಯಾದ ಮೇಲೆ ಮಡೆಸ್ನಾನ ಜರುಗುವುದೆಂದೂ ವಾದಿಸಲಾಗಿತ್ತು. ಆದರೆ ಈಗಿನ ವರದಿಯಂತೆ ಬ್ರಾಹ್ಮಣರು ಉಂಡು ಬಿಟ್ಟ ಎಲೆಗಳ ಮೇಲೆಯೇ ಉರುಳಾಟ ಆಗಿದೆ. ಇಲ್ಲಿ ಮಲೆಕುಡಿಯರು ಮಾತ್ರವಲ್ಲ ಇತರೆ ಜಾತಿಗಳ ಮಹಿಳೆಯರು, ಮಕ್ಕಳೂ ಸೇರಿ ಉರುಳಿಯೂ ಆಗಿದೆ. ಚರ್ಮ ರೋಗ ವಾಸಿಗಾಗಿ, ಅಲ್ಲದೇ ಮಕ್ಕಳಾಗಲೂ ಹರಕೆ ತೀರಿಸಲಾಗಿದೆಯಂತೆ. ಉಂಡು ಬಿಟ್ಟ ಎಂಜಲ ಮೇಲೆ ಉರುಳುವಾಗ ಒಂದು ರೀತಿಯ ಮಾನಸಿಕ ಕಿರಿಕಿರಿಯಿಂದ ವಿಶೇಷ ರಸಗಳು ಉತ್ಪತ್ತಿಯಾಗಿ ಚರ್ಮರೋಗ ನಿವಾರಣೆಯಾಗುವುದು ಎಂಬ ಮಹಾ 'ವೈಜ್ಞಾನಿಕ' ವಿವರಣೆಗಳೂ ಶುರುವಾಗಿವೆ. ಇನ್ನೂ ವಿಚಿತ್ರ ಸಂಗತಿ ಮತ್ತು ಲೇಟೆಸ್ಟ್ ಸೇರ್ಪಡೆಯೆಂದರೆ ಶ್ರೀಕೃಷ್ಣನ ಮಗನೇ ಇಲ್ಲಿ 'ಮಡಸ್ನನ' ಅರ್ಥಾತ್ ಎಂಜಲೆಲೆಯ ಮೇಲೆ ಉರುಳಿದ್ದ ಎಂಬ ಕಾಗಕ್ಕನ ಪುರಾಣ! ಪುರೋಹಿತಶಾಹಿಗಳ ಪುಂಗಿಗೆ ತಲೆಯಾಡಿಸಿದರೆ ನಮ್ಮ ಸಂವಿಧಾನ ಹೇಳಿದಂತೆ ಭಾರತ ವೈಜ್ಞಾನಿಕ ಮನೋಭಾವದ ದೇಶವಾಗುವ ಬದಲು ಮಹಾವಂಚಕರ ದೇಶವಾಗುವುದರಲ್ಲಿ ಅನುಮಾನವೇ ಇಲ್ಲ.

ಪ್ರಶ್ನೆಗೀಡಾದ ಬದ್ಧತೆ

2012ರ ನವೆಂಬರ್ 8 ರಂದು ಪರಿಷ್ಕೃತ ಮಡಸ್ನಾನ (ಎಡೆ ಸ್ನಾನ) ಮಾಡಲು ಅವಕಾಶ ನೀಡಿದ್ದ ಆದೇಶಕ್ಕೆ ಹೈಕೋರ್ಟ್ ವಿಭಾಗೀಯ ಪೀಠ ತಡೆ ನೀಡಿತು. (ಎಡೆಸ್ನಾನ ತೀರ್ಪು ಪ್ರಶ್ನಿಸಿ ಸುಪ್ರಿಕೋರ್ಟ್‌ಗೆ ಅರ್ಜಿಯೂ ಸಲ್ಲಿಕೆಯಾಗಿತ್ತು. ಇಲ್ಲಿಯೂ ನಿಡುಮಾಮಿಡಿ ಶ್ರೀಗಳು, ಕೆ.ಮರುಳಸಿದ್ದಪ್ಪನವರು, ಜಿ.ಎನ್.ನಾಗರಾಜ್ ಮುಂತಾದವರು ಪ್ರತಿವಾದಿಗಳು.) ಈಗ ನೀಡಲಾಗಿರುವ ನ್ಯಾಯಾಲಯದ ಆದೇಶ ಅಂತಿಮ ತೀರ್ಪು ಏನಲ್ಲ. ಇದು ತಾತ್ಕಾಲಿಕ. ಆದರೆ ಮಾಧ್ಯಮಗಳು ವರದಿ ಮಾಡಿದ್ದನ್ನು ಗಮನಿಸಿದರೆ ನ್ಯಾಯಾಲಯವು ಆದೇಶ ನೀಡುವಾಗ 'ನಿಮಗಿಲ್ಲಿ ಕೆಲಸವಿಲ್ಲ, ಅಲ್ಲಿ ಜನರನ್ನು ಜಾಗೃತಗೊಳಿಸಿ' ಎಂಬಿತ್ಯಾದಿ ಒತ್ತುಗಳ ಮಾತುಗಳು ಅತ್ಯಂತ ಅಪಾರ್ಥಕ್ಕೆ ಈಡು ಮಾಡುತ್ತವೆ. 'ಇದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಇದಲ್ಲ, ಪಬ್ಲಿಸಿಟಿ ಅರ್ಜಿ ಎಂದ ನ್ಯಾಯಮೂರ್ತಿಗಳ ಬದ್ಧತೆಯೇ ಪ್ರಶ್ನೆಗೀಡಾದಲ್ಲಿ ಆಶ್ಚರ್ಯವಿಲ್ಲ. ಇವರ ಅರ್ಥದಲ್ಲಿ ನಂಬಿಕೆಗಳು, ಭಾವನೆಗಳು ಅಂಧಶ್ರದ್ಧೆ ಪಾಲಿಸುವವರಿಗೆ ಮಾತ್ರವೇ ಇರುತ್ತವೆ, ಪ್ರಶ್ನಿಸುವವರಿಗೆ ಇಲ್ಲವೆಂದೇ? ಮಡೆಸ್ನಾನ ಒಂದು ಧಾರ್ಮಿಕ ಕ್ರಿಯೆಯೆಂಬುದಾಗಿ, ಅದನ್ನು ನಿರ್ಬಂಧಿಸಲು ಆಗದು ಎನ್ನುವಂತೆ, ಪುರೋಹಿತಶಾಹಿಗಳ ವಾದವನ್ನೇ ಎತ್ತಿ ಹಿಡಿದಂತೆ ಎಂಬ ಅರ್ಥ ಹೊರಡಿಸುತ್ತವೆ. ಇಷ್ಟು ಸಿಕ್ಕರೆ ಸಾಕಲ್ಲವೇ ಅವರಿಗೆ, ಅದನ್ನೇ ಶಾಶ್ವತ ತೀರ್ಪು ಎಂದು ಪ್ರಚಾರಿಸಲು!

ಸಂವಿಧಾನ ಪೀಠಕ್ಕೆ

ನ್ಯಾಯಾಲಯದ ಆ ಹೇಳಿಕೆಗಳನ್ನು ಸಾರಾಸಗಟು ಒಪ್ಪಲು ಸಾಧ್ಯವೇ ಇಲ್ಲ. ಆದರೆ ನ್ಯಾಯಾಲಯವೇ ಹೇಳಿರುವಂತೆ 'ಇಲ್ಲಿರುವ ಹಲವಾರು ಸೂಕ್ಷ್ಮ ಪ್ರಶ್ನೆಗಳನ್ನು ಇನ್ನಷ್ಟು ಕೂಲಂಕುಶವಾಗಿ ಪರಿಶೀಲಿಸಬೇಕು. ಅವಸರ ಕೂಡದು.' ಎಂಬುದನ್ನು ಸಹ ಗಮನಿಸಿದಾಗ ಇನ್ನೂ ನ್ಯಾಯಾಲಯದಲ್ಲಿ ವಿಷಯದ ನಿಷ್ಕರ್ಷಕ್ಕೆ ಅವಕಾಶವಿದೆ. ಹಾಗಾಗಿ ಹೋರಾಟ ಮುಂದುವರಿಸಬೇಕಾದ ಸನ್ನಿವೇಶ ಇರುವುದು ಖಚಿತವಾಗುತ್ತದೆ. ಆದ್ದರಿಂದ ಇದಕ್ಕೆ ಸಮರ್ಪಕ ರೀತಿಯಲ್ಲಿ ವಾದಿಸಲು ಸಿದ್ಧತೆಯೂ ಬೇಕಾಗುತ್ತದೆ.

ಮುಖ್ಯವಾಗಿ, ಇಲ್ಲಿ ಎತ್ತಲಾದ ಹಲವಾರು ಪ್ರಶ್ನೆಗಳು ಸಂವಿಧಾನಾತ್ಮಕ ಪರಿಶೀಲನೆಯ ಅಗತ್ಯವನ್ನು ತೋರಿಸುತ್ತವೆ. ಆದ್ದರಿಂದ ಸಂವಿಧಾನ ಪೀಠವೇ ಅವನ್ನೆಲ್ಲಾ ಪರಿಶೀಲಿಸಿ ತೀರ್ಪು ನೀಡಬೇಕಿದೆ. ಹೀಗಾಗಿ ಇಂತಹ ಅಮಾನವೀಯ ಆಚರಣೆಗಳನ್ನು ನಿರ್ಬಂಧಿಸಬೇಕು ಎನ್ನುವ ರಾಜ್ಯ ಸರಕಾರ ಕಕ್ಷಿದಾರನೂ ಆಗಿರುವುದರಿಂದ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿ ವಾದಿಸಬೇಕಿದೆ. ಈಗ ತಿಳಿದಿರುವಂತೆ ಸರಕಾರ ಮನವಿ ಸಲ್ಲಿಸಿದ್ದು ಪರಿಣಾಮಕಾರಿಯಾಗಿ ವಾದ ಮಂಡಿಸಬೇಕು. ಇದೇ ಸಂದರ್ಭದಲ್ಲಿ ಸಿದ್ಧರಾಮಯ್ಯನವರ ಸರಕಾರ ಮೌಢ್ಯತೆಯ ನಿರ್ಬಂಧದ ಮಸೂದೆಯನ್ನು ಶೀಘ್ರವಾಗಿ ಅಂಗೀಕರಿಸಬೇಕು. ಈ ಹೋರಾಟದಲ್ಲಿ ಶಾಸನಾತ್ಮಕ ಬಲದ ಸಾಂಗತ್ಯವೂ ಅಗತ್ಯವಿದೆ. ಅದಕ್ಕಾಗಿ ಜನ ಜಾಗೃತಿ ಆಂದೋಲನವೂ ನಡೆಯಬೇಕಿದೆ. ●

ಜನಶಕ್ತಿ
ಕನ್ನಡ ವಾರಪತ್ರಿಕೆ



ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ

ಕರ್ನಾಟಕ ರಾಜ್ಯವ್ಯಾಪಿ ವ್ಯಾಪಕ ಪ್ರತಿಭಟನೆಗಳು

ಡಿಸೆಂಬರ್ 5, 2014 ರಂದು ಶುಕ್ರವಾರ ಬೆಳಿಗ್ಗೆ ಬೆಂಗಳೂರಿನ ಟೌನ್‌ಹಾಲ್ ಎದುರು ನಾನಾ ಬಣ್ಣಗಳ ಬಾವುಟಗಳ ಹಾರಾಟ. ಕೇಸರಿ, ಕೆಂಪು, ಕುಡುಗೋಲು ಸುತ್ತಿಗೆ ಗುರುತು, ಹಾರುವ ಹಳದಿ ಹುಲಿಯ ಚಿತ್ರದ ಬಾವುಟ ಇತ್ಯಾದಿಗಳು. ಇನ್ನೂ ಹಲವು ತರಹೇವಾರಿ.

ಕಾರ್ಮಿಕ ಕಾಯ್ದೆಗೆ ಶೋಷಣೆ ಹೆಚ್ಚಿಸುವ ಮಾಲಿಕರ ಪರವಾಗಿ ತಿದ್ದುಪಡಿ ವಿರೋಧಿಸಿ ನೂರಾರು ಕಾರ್ಮಿಕರು ಅಲ್ಲಿ ನೆರೆದಿದ್ದರು. 'ಕಾರ್ಮಿಕ ಸಂಘಗಳ ಜಂಟಿ ಸಮಿತಿ' ವತಿಯಿಂದ ಟೌನ್‌ಹಾಲ್‌ನಿಂದ ಫ್ರೀಡಂ ಪಾರ್ಕ್‌ವರೆಗೆ ಮೆರವಣಿಗೆ ಆರಂಭಗೊಂಡಿತು. ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಬಿ.ಎಂ.ಎಸ್, ಐಎನ್.ಟಿ.ಯು.ಸಿ, ಎ.ಐ.ಟಿ.ಯು.ಸಿ, ಹೆಚ್.ಎಮ್.ಎಸ್, ಎ.ಐ.ಯು.ಟಿ.ಯು.ಸಿ, ಟಿ.ಯು.ಸಿ.ಸಿ, ಎ.ಐ.ಸಿ.ಸಿ.ಟಿ.ಯು ಸಂಘಟನೆಗಳ ಮುಖಂಡರು ಕಾರ್ಯಕರ್ತರು ಮತ್ತು ಎಲ್.ಐ.ಸಿ, ಬ್ಯಾಂಕ್ ರಾಜ್ಯ ಮತ್ತು ಕೇಂದ್ರ ಸರಕಾರಿ ನೌಕರರು ದೊಡ್ಡ ಸಂಖ್ಯೆಯಲ್ಲಿ ನೆರೆದಿದ್ದರು.

ಮೆರವಣಿಗೆಯು ಕಾರ್ಪೋರೇಷನ್, ಕೆಂಪೇಗೌಡ ರಸ್ತೆ, ಮೈಸೂರು ಬ್ಯಾಂಕ್ ಸರ್ಕಲ್ ಮಾರ್ಗವಾಗಿ ಸ್ವಾತಂತ್ರ್ಯ ಉದ್ಯಾನ ತಲುಪಿತು.

ದೇಶದ ಕೋಟ್ಯಾಂತರ ಶ್ರಮಜೀವಿಗಳಿಗೆ ಇದುವರೆಗೂ ರಕ್ಷಣೆಯಾಗಿದ್ದ ಹಲವು ಕಾರ್ಮಿಕ ಕಾನೂನುಗಳನ್ನು ಇತ್ತೀಚಿಗೆ ಕೇಂದ್ರ ಸರಕಾರವು ತಿದ್ದುಪಡಿ ಮಾಡಿ ರಾಜ್ಯಸಭೆಯಲ್ಲಿ ಮಂಡಿಸಿರುವ ಕ್ರಮವನ್ನು ಬಹಿರಂಗ ಸಭೆಯಲ್ಲಿ ಮಾತನಾಡಿದ ನಾನಾ ಮುಖಂಡರು ಖಂಡಿಸಿದರು. ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿ.ಜೆ.ಕೆ. ನಾಯರ್, ರಾಜ್ಯ ಕಾರ್ಯದರ್ಶಿ ಬಿಎಂಎಸ್ ಮುಖಂಡ ರಾಮಕೃಷ್ಣ ಪೂಂಜಾ, ಎಐಟಿಯುಸಿ ಹಿರಿಯ ಮುಖಂಡರಾದ ಎಂ.ಸಿ. ನರಸಿಂಹನ್, ಎಚ್.ವಿ. ಅನಂತ ಸುಬ್ಬರಾವ್, ಎಐಯುಟಿಯುಸಿಯ ಮುಖಂಡರಾದ ರಾಧಾಕೃಷ್ಣ, ಟಿಯುಸಿಸಿ ರಾಜ್ಯ ಅಧ್ಯಕ್ಷ ಜಿ.ಆರ್. ಶಿವಶಂಕರ್, ಎಐಸಿಸಿಟಿಯು ಶಂಕರ್ ಮುಂತಾದವರು ವೇದಿಕೆಯಲ್ಲಿದ್ದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ, ಆರಂಭದಲ್ಲಿ ಸ್ವಾಗತಿಸಿ ಪ್ರಸ್ತಾವಿಕ ಮಾತುಗಳನ್ನು ಆಡಿದರು.

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ನವದೆಹಲಿ ಸಮಾವೇಶದ ತೀರ್ಮಾನದಂತೆ ಹಮ್ಮಿಕೊಂಡಿರುವ ರಾಷ್ಟ್ರವ್ಯಾಪಿ ಚಳುವಳಿಯ ಭಾಗವಾಗಿ ಈ ಹೋರಾಟ ನಡೆಯಿತು.



ಬೇಡಿಕೆಗಳು

ಕಾರ್ಮಿಕ ಕಾನೂನುಗಳಿಗೆ ಉದ್ದೇಶಿತ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ಕೂಡಲೇ ಹಿಂಪಡೆಯಬೇಕು. ಇದಕ್ಕೆ ರಾಷ್ಟ್ರಪತಿಗಳು ಅಂಗೀಕಾರ ನೀಡಬಾರದು. ರಾಜಾಸ್ತಾನ ಸರ್ಕಾರವು ಕಾರ್ಮಿಕ ಕಾನೂನುಗಳಿಗೆ ಏಕಪಕ್ಷೀಯವಾಗಿ ಮಾಡಿರುವ ತಿದ್ದುಪಡಿಗಳನ್ನು ರದ್ದುಪಡಿಸಬೇಕು. ಗುತ್ತಿಗೆ ಪದ್ಧತಿ–ಹೊರಗುತ್ತಿಗೆ ಪದ್ಧತಿ ರದ್ದಾಗಬೇಕು. ಗುತ್ತಿಗೆ ಕಾರ್ಮಿಕರನ್ನು ಹಂತ ಹಂತವಾಗಿ ಖಾಯಂಗೊಳಿಸಬೇಕು. ಅಲ್ಲಿಯವರೆಗೆ ಖಾಯಂ ಕಾರ್ಮಿಕರಿಗೆ ಸಿಗುತ್ತಿರುವ ವೇತನ ಮತ್ತಿತರ ಸೌಲಭ್ಯಗಳನ್ನು ನೀಡಬೇಕು. ಎಲ್ಲಾ ಸಂಘಟಿತ ಹಾಗು ಅಸಂಘಟಿತ ಕಾರ್ಮಿಕರಿಗೆ ಪಿ.ಎಫ್.ನಿಧಿಯಿಂದ ನೀಡಲಾಗುತ್ತಿರುವ ಪೆನ್ಷನ್‌ಅನ್ನು ರೂ.3000/–ಕ್ಕೆ ಏರಿಸಬೇಕು. ಲಾಭದಾಯಕ ಸಾರ್ವಜನಿಕ ಉದ್ಯಮಗಳಲ್ಲಿ ಬಂಡವಾಳ ಹಿಂತೆಗೆತ ನಿಲ್ಲಿಸಬೇಕು. ಕಲ್ಲಿದ್ದಲು ಕ್ಷೇತ್ರದ ಖಾಸಗೀಕರಣ ಬೇಡವೇ ಬೇಡ. ಖನಿಜ ಸಂಪತ್ತಿನ ಲೂಟಿ ನಿಲ್ಲಿಲಿ. ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ. ಸ್ಕೀಂ ಕೆಲಸಗಾರರಾದ ಅಂಗನವಾಡಿ, ಆಶಾ, ಬಿಸಿಯೂಟ ನೌಕರರನ್ನು ಕಾರ್ಮಿಕ ಶಬ್ದದ ವ್ಯಾಪ್ತಿಗೆ ತರಬೇಕು, ಕಾರ್ಮಿಕರಿಗಿರುವ ಎಲ್ಲಾ ಸೌಲಭ್ಯ ನೀಡಬೇಕು ಮುಂತಾದ ವಿವಿಧ ಬೇಡಿಕೆಗಳಿಗಾಗಿ ಒತ್ತಾಯಿಸಲಾಯಿತು. ಇದೇ ಬೇಡಿಕೆಗಳ ಆಧಾರದಲ್ಲಿ ರಾಜ್ಯದ ನಾನಾ ಕಡೆಗಳಲ್ಲಿ ಚಳುವಳಿಗಳು ನಡೆದ ವರದಿಗಳು ಬರುತ್ತಿವೆ.

ಉತ್ತರ ಕನ್ನಡ–ಕಾರವಾರದಲ್ಲಿ ಕಾರ್ಮಿಕರ ರ‍್ಯಾಲಿ

ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಸಹ ಡಿಸೆಂಬರ್ 5 ರಂದು ಪ್ರತಿಭಟನೆ ನಡೆಯಿತು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಮುನಾ ಗಾಂವ್ಕರ್, ಗಂಗಾ ನಾಯ್ಕ, ಪ್ರಾಂತ ರೈತ ಸಂಘದ ಶ್ಯಾಮನಾಥ ನಾಯ್ಕ, ಬ್ಯಾಂಕ್ ನೌಕರರ ಸಂಘದ ವಾಸುದೇವ ಶೇಟ್, ಆನಂದು ನಾಯ್ಕ, ವಿಮಾ ನೌಕರರ ಸಂಘದ ಆರ್.ಬಿ. ನಾಯ್ಕ, ಎ.ಆರ್.ಶೇಖ್, ಅಂಗನವಾಡಿ ನೌಕರರ ಸಂಘದ ಮಾಯಾ ಕಾಣೇಕರ್, ತಾರಾ ನಾಯ್ಕ, ಬಿಸಿಯೂಟ ನೌಕರರ ಸಂಘ ಜಯಶ್ರೀ ಗೌಡ, ಅಲ್ಲದೇ ಆಶಾ ಕಾರ್ಯಕರ್ತೆಯರ ಸಂಘ, ಭಾರತ ವಿದ್ಯಾರ್ಥಿ ಫೆಡರೇಶನ್‌ದ ಗಣೇಶ ರಾಠೋಡ್, ಡಿವೈಎಫ್‌ಐ ಸಂಘಟನೆಯ ಮುಂದಾಳುಗಳು ಹೆಚ್ಚನ ಸಂಖ್ಯೆಯಲ್ಲಿ ಹಾಜರಿದ್ದರು.



ಮಧುಗಿರಿ: ಸಿಐಟಿಯು ನೇತೃತ್ವದಲ್ಲಿ ಅಂಚೆ ಕಛೇರಿ ಮುತ್ತಿಗೆ

ಜೆಸಿಟಿಯು ಕರೆಯ ಮೇರೆಗೆ ದೇಶಾದ್ಯಂತ ನಡೆದ ಅಖಿಲ ಭಾರತ ಮುಷ್ಕರದ ಭಾಗವಾಗಿ ಮಧುಗಿರಿಯಲ್ಲಿ ಸಿಐಟಿಯು ನೇತೃತ್ವದ ಸಂಘಟನೆಗಳಾದ ಅಂಗನವಾಡಿ, ಕಟ್ಟಡ ಕಾರ್ಮಿಕರ, ಅಕ್ಷರ ದಾಸೋಹ, ಆಶಾ, ಮನೆಗೆಲಸ, ಕಾರ್ಮಿಕರು, ಖಾಸಗಿ ಬಸ್ ನಿಲ್ದಾಣದ ಹತ್ತಿರ ಸಮಾವೇಶಗೊಂಡು ನಂತರ ಮೆರವಣಿಗೆ ನಡೆಸಿ ಪಟ್ಟಣದ ಮುಖ್ಯ ಅಂಚೆ ಕಛೇರಿಯನ್ನು ಮುತ್ತಿಗೆ ಹಾಕಿ ಧರಣಿ ನಡೆಸಿದರು.

ಕಾರ್ಮಿಕರ ಧರಣಿಯನ್ನು ಉದ್ದೇಶಿಸಿ ಕಟ್ಟಡ ಕಾರ್ಮಿಕ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಬಿ.ಉಮೇಶ್ ಮಾತನಾಡಿ ದೇಶದ ಅಭಿವೃದ್ಧಿ ಎಂದರೆ ಜನತೆಯ ಅಭಿವೃದ್ಧಿ ಆಗಬೇಕು. ಅದರ ಬದಲು ಕೇವಲ ಶ್ರೀಮಂತರನ್ನು ಕಾರ್ಪೋರೇಟ್ ಕಂಪನಿಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಕಾರ್ಮಿಕ ಕಾನೂನುಗಳು ಕಾರ್ಮಿಕರನ್ನು ರಕ್ಷಿಸುವ ಬದಲು ಅವರನ್ನು ಬೀದಿಗೆ ತಳ್ಳುವ ಕಾನೂನುಗಳು ತಿದ್ದುಪಡಿ ಕೇಂದ್ರ ಸರ್ಕಾರದಿಂದ ನಡೆಯುತ್ತಿದೆ. ಕಾರ್ಮಿಕರನ್ನು ಮತ್ತು ರೈತರನ್ನು ರಕ್ಷಿಸುವ ಆದ್ಯತೆಗೆ ಹೆಚ್ಚು ಒತ್ತು ನೀಡಬೇಕು. ದೇಶವನ್ನು ದಾಸ್ಯಕ್ಕೆ ಲೂಟಿಗೆ ಅವಕಾಶ ಮಾಡುವ ಹೆಚ್ಚಿನ ವಿದೇಶಿ ನೇರ ಬಂಡವಾಳಕ್ಕೆ ಜೋತು ಬೀಳದೇ ದೇಶದ ಅಭಿವೃದ್ಧಿ ಆಗಬೇಕೆಂದು ಕರೆ ನೀಡಿದರು. ಮತ್ತೊಬ್ಬ ಮುಖಂಡರಾದ ಸಿಐಟಿಯು ಜಿಲ್ಲಾ ಖಜಾಂಚಿ ಕಮಲಾ ಮಾತನಾಡಿ ಸ್ಕೀಂನಲ್ಲಿ ದುಡಿಯುತ್ತಿರುವ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಜನ ಸಾಮಾನ್ಯರ ಬದುಕನ್ನು ಉತ್ತಮ ಪಡಿಸಲು ಬೆಲೆ ಏರಿಕೆ ತಡೆಯಬೇಕೆಂದರು.

ಧರಣಿಯಲ್ಲಿ ಕಾರ್ಮಿಕ ವಿರೋಧಿ ಕ್ರಮ ಮತ್ತು ಕಾನೂನು ತಿದ್ದುಪಡಿ ಕೈಬಿಡಬೇಕು. ಗುತ್ತಿಗೆ ಹೊರಗುತ್ತಿಗೆ, ಕಾರ್ಮಿಕ ಪದ್ಧತಿ ಕೈಬಿಟ್ಟು ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಅಂಗನವಾಡಿ ಸೇರಿದಂತೆ ಸ್ಕೀಂ ನೌಕರರನ್ನು ಖಾಯಂ ನೌಕರರೆಂದು ಪರಿಗಣಿಸಬೇಕು. ಕಟ್ಟಡ ಕಾರ್ಮಿಕರ ಸೌಲಭ್ಯಗಳನ್ನು ವಿತರಿಸುವಾಗ ಪರಿಶೀಲನೆ ನೆಪದಲ್ಲಿ ವಿಳಂಬ ಮಾಡದೇ ವಂತಿಕೆ ಗೊಂದಲ ಸರಿಪಡಿಸಿ ಅನುಕಂಪದ ಆಧಾರದಲ್ಲಿ ತಕ್ಷಣವೇ ಅವರಿಗೆ ವಿದ್ಯಾರ್ಥಿವೇತನ, ವಿವಾಹ, ಪಿಂಚಣಿ, ಮನೆಸಾಲ, ಸಲಕರಣೆಯ ಸಹಾಯಧನ, ದುರ್ಬಲತೆಯ ಪಿಂಚಣಿಗಳನ್ನು ನೀಡಬೇಕೆಂದು ಒತ್ತಾಯಿಸಲಾಯಿತು.

ಚಳುವಳಿಯ ನೇತೃತ್ವವನ್ನು ಸಿಐಟಿಯು ಮಧುಗಿರಿ ತಾಲ್ಲೂಕು ಅಧ್ಯಕ್ಷರಾದ ಪಾರ್ವತಮ್ಮ, ಮಲ್ಲಮ್ಮ ಕಟ್ಟಡ ಕಾರ್ಮಿಕ ಸಂಘಟನೆಯ ಮುಖಂಡರಾದ ಬೆಟ್ಟಪ್ಪ, ವಿಶ್ವನಾಥ, ವೆಂಕಟಾಚಲ, ನಾರಾಯಣಪ್ಪ, ಆಶಾ ಸಂಘಟನೆಯ ಕಮಲ ನೇತೃತ್ವವಹಿಸಿದ್ದರು.




ಗದಗ

ಗದಗ ಪ್ರತಿಭಟನೆ

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಗದಗ್ ನಗರ ಸಭೆ ಕಾಲೇಜು ಆವರಣದಿಂದ ಪ್ರತಿಭಟನಾ ಮೆರವಣಿಗೆ ಪ್ರಾರಂಭಿಸಿತು. ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗುತ್ತಾ ಮಹಾತ್ಮಾಗಾಂಧಿ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಮಹೇಶ ಹಿರೇಮಠ ಬಿ. ಬಾಬು, ಡಿ.ವೈ.ಎಫ್.ಐ. ಜಿಲ್ಲಾ ಸಂಚಾಲಕ ಪೀರು ರಾಠೋಡ, ಸಿ.ಐ.ಟಿ.ಯು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾರುತಿ ಚಿಟಗಿ ಮುಂತಾದವರು ಮಾತನಾಡಿದರು.

PÀgÁªÀ½AiÀÄ°è PÉA¨ÁªÀÄÅlzÀ ªÀ®AiÀÄ¸ÀªÉÄäÃ¼À£ÀUÀ¼ÀÄ



ವರದಿ : ವಾ. ಉಚ್ಚಿಲ್

ಉಳ್ಳಾಲ :

ದ.ಕ.ಜಿಲ್ಲೆಯಲ್ಲಿ ಸಿಪಿಐ(ಎಂ) ಪಕ್ಷದ ವಲಯ ಸಮ್ಮೇಳನಗಳು ನವಂಬರ್ ತಿಂಗಳಲ್ಲಿ ನಡೆದಿದ್ದು, ಕೊನೆಯದಾಗಿ ಉಳ್ಳಾಲ ವಲಯ ಸಮ್ಮೇಳನವು ನವಂಬರ್ 30, 2014 ರಂದು ಕೊಲ್ಯ ಎಂಬಲ್ಲಿ ಜರಗಿತು.

ಕಾಂ. ಯಾದವ ಕುತ್ತಾರ್ ನಗರದ ಕಾಂ.ಯು. ಎಂ.ಬಾವ ವೇದಿಕೆಯಲ್ಲಿ ನಡೆದ ಸಮ್ಮೇಳನವನ್ನು ಜಿಲ್ಲೆಯ ಪಕ್ಷದ ಹಿರಿಯ ಕಮ್ಯೂನಿಸ್ಟ್ ಮುಖಂಡ ಕೆ.ಆರ್.ಶ್ರೀಯಾನ್ ಉದ್ಘಾಟಿಸಿ ಮಾತನಾಡಿದರು. ಹಿರಿಯ ರೈತ ಮುಖಂಡ ಪರಮೇಶ್ವರ ಶೆಟ್ಟಿ ಅವರು ಧ್ವಜಾರೋಹಣ ಮಾಡಿದರು. ಉದ್ಘಾಟನಾ ಸಮಾರಂಭದಲ್ಲಿ ಪಕ್ಷದ ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಯಾದವ ಶೆಟ್ಟಿ ಭಾಗವಹಿಸಿ ಮಾತನಾಡಿದರು. ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಸ್ವಾಗತ ಸಮಿತಿ ಗೌರವಾಧ್ಯಕ್ಷ ರಾಜೀವ ಮೆಂಡನ್, ಅಧ್ಯಕ್ಷ ಅರುಣ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಸಮ್ಮೇಳನವು 19 ಮಂದಿ ಸದಸ್ಯರುಳ್ಳ ನೂತನ ವಲಯ ಸಮಿತಿಯನ್ನು ಆಯ್ಕೆ ಮಾಡಿತು. ಕೃಷ್ಣಪ್ಪ ಸಾಲ್ಯಾನ್ ಕಾರ್ಯದರ್ಶಿಯಾಗಿ ಪುನರಾಯ್ಕೆ ಆಗಿರುತ್ತಾರೆ.

ಸಾಯಂಕಾಲ ಬಹಿರಂಗ ಸಭೆಗೂ ಮುನ್ನ ಕೊಲ್ಯದಿಂದ ಹೊರಟು ತೊಕ್ಕೊಟುನಿಂದಲಾಗಿ ಕಲ್ಲಾಪುವರೆಗೆ ಸಮವಸ್ತ್ರಧಾರಿಗಳ ಪಥಸಂಚಲನ ಸಹಿತವಾದ ಮೆರವಣಿಗೆ ನಡೆಯಿತು. ಕಲ್ಲಾಪು ಕಾಂ. ಕಮಲ ನಾಯಕ್ ನಗರದ ಕಾಂ.ಗಂಗಾಧರ ಗಟ್ಟಿ ವೇದಿಕೆಯಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಯು.ಬಸವರಾಜು ಭಾಷಣ ಮಾಡಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ, ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಕೂಡಾ ಮಾತನಾಡಿದರು. ಜಿಲ್ಲಾ ಸಮಿತಿ ಸದಸ್ಯ ಯಾದವ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಪದ್ಮಾವತಿ ಶೆಟ್ಟಿ, ಉಳ್ಳಾಲ ವಲಯದ ಸ್ಥಳೀಯ ಸಮಿತಿ ಕಾರ್ಯದರ್ಶಿಗಳಾದ ಜಯಂತ ನಾಯಕ್, ಬಾಬು ಪಿಲಾರು ಉಪಸ್ಥಿತರಿದ್ದರು.

ಗುರುಪುರ :

ಗುರುಪುರ ವಲಯ ಸಮ್ಮೇಳನವು ನವಂಬರ್ 23 ರಂದು ಕೈಕಂಭ ಪೇಟೆಯಲ್ಲಿರುವ ಸಭಾಂಗಣದಲ್ಲಿ ನಡೆಯಿತು. ಸಮ್ಮೇಳನವನ್ನು ಜಿಲ್ಲೆಯ ಹಿರಿಯ ಮುಖಂಡರಾದ ಕೆ.ಆರ್.ಶ್ರೀಯಾನ್ ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ಯು.ಬಿ.ಲೋಕಯ್ಯ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದರು. ಎನ್.ಎ.ಹಸನಬ್ಬ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನಕ್ಕೂ ಮೊದಲು ಹಿರಿಯ ಪಕ್ಷ ಸದಸ್ಯ ಗಂಗಯ್ಯ ಅಮೀನ್ ಧ್ವಜಾರೋಹಣ ಮಾಡಿದರು.

ಸಮ್ಮೇಳನದ ಬಳಿಕ ಕೈಕಂಭ ಪೇಟೆಯಲ್ಲಿ ಮೆರವಣಿಗೆ ನಡೆದು ಬಳಿಕ ಬಹಿರಂಗ ಸಭೆ ನಡೆಯಿತು. ಬಹಿರಂಗ ಸಭೆಯಲ್ಲಿ ಕೆ.ಆರ್.ಶ್ರೀಯಾನ್, ಜೆ.ಬಾಲಕೃಷ್ಣ ಶೆಟ್ಟಿ, ಯು.ಬಿ.ಲೋಕಯ್ಯ ಭಾಷಣ ಮಾಡಿದರು.

ಗುರುಪುರ ನದಿಗೆ ಇರುವ ಸೇತುವೆಯ ಪಕ್ಕದಲ್ಲೇ ಇನ್ನೊಂದು ಸೇತುವೆ, ಕುಡಿಯುವ ನೀರು ಪೂರೈಕೆಗಾಗಿ ಗುರುಪುರ ನದಿಗೆ ಅಣೆಕಟ್ಟು ಕಟ್ಟಬೇಕೆಂದು ಕೋರುವ ನಿರ್ಣಯಗಳನ್ನು ಸಮ್ಮೇಳನವು ಅಂಗೀಕರಿಸಿತು. ಸಮ್ಮೇಳನವು 11 ಮಂದಿಯ ಸಮಿತಿಯನ್ನು ಆಯ್ಕೆ ಮಾಡಿರುತ್ತದೆ. ಸದಾಶಿವ ದಾಸ್ ಕಾರ್ಯದರ್ಶಿಯಾಗಿ ಆಯ್ಕೆ ಆಗಿರುತ್ತಾರೆ.

ಬಂಟ್ವಾಳ :

ಬಂಟ್ವಾಳ ವಲಯ ಸಮ್ಮೇಳನವು ನವಂಬರ್ 2 ರಂದು ಬಿಸಿರೋಡಿನ ಕಾಂ.ಶೀನ ಬಂಗೇರ ನಗರದ ಕಾಂ. ಮಾರಪ್ಪ ಎಂ.ವೇದಿಕೆಯಲ್ಲಿ ಜರಗಿತು. ಸಮ್ಮೇಳನವನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ ಉದ್ಘಾಟಿಸಿದರು. ಸಮ್ಮೇಳನದ ಸಮಾರೋಪ ಭಾಷಣವನ್ನು ಜಿಲ್ಲಾ ಕಾರ್ಯದರ್ಶಿ ಮಂಡಳಿ ಇನ್ನೊಬ್ಬ ಸದಸ್ಯ ವಸಂತ ಆಚಾರಿ ನಡೆಸಿಕೊಟ್ಟರು. ಸಮ್ಮೇಳನದ ಅಧ್ಯಕ್ಷತೆಯನ್ನು ಪಕ್ಷದ ಹಿರಿಯ ಮುಂದಾಳು ವಾಸು ಗಟ್ಟಿಯವರು ವಹಿಸಿದ್ದರು.



ರಾಮಣ್ಣ ವಿಟ್ಲ ಅವರು ಕಾರ್ಯದರ್ಶಿಯಾಗಿರುವ 8 ಮಂದಿಯ ವಲಯ ಸಮಿತಿಯನ್ನು ಆಯ್ಕೆ ಮಾಡಿರುತ್ತದೆ.

ಕಾನೂನು ಬಾಹಿರ ಹಣಕಾಸು ಸಂಸ್ಥೆ ಕಚೇರಿಗಳಿಗೆ ಡಿವೈಎಫ್‌ಐ ಮುತ್ತಿಗೆ :

ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗದರ್ಶಿ ಸೂತ್ರಗಳ ಅನುಸಾರ ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳು ಜನರಿಗೆ ಹೆಚ್ಚು ಬಡ್ಡಿ ಅಮಿಷ ತೋರಿಸಿ ಜನರನ್ನು ವಂಚಿಸುತ್ತಿವೆ. ಮನಿ ಲಾಂಡರಿಂಗ್ ಕಾಯಿದೆಯಡಿ ಈ ಸಂಸ್ಥೆಗಳ ಮೇಲೆ ಸರಕಾರ ಕ್ರಮ ಕೈಗೊಳ್ಳಬಹುದಾಗಿದ್ದರೂ ಸರಕಾರವು ಮೌನವಾಗಿ ಕುಳಿತಿದೆ. ಮಂಗಳೂರಿನಲ್ಲಿ ಅಗ್ರಿಗೋಲ್ಡ್, ಸಮೃದ್ಧ ಜೀವನ್, ಪಿಎಇಎಲ್ ಕಂಪೆನಿಗಳು ಹಲವಾರು ವರ್ಷಗಳಿಂದ ಕಾರ್ಯಾಚರಿಸುತ್ತಿದ್ದರೂ ಜನ ಹಣ ಕಳೆದುಕೊಂಡು ಮೋಸ ಹೋಗುತ್ತಿರುವ ಹಿನ್ನೆಲೆಯಲ್ಲಿ ಅಂಥ ಸಂಸ್ಥೆಗಳನ್ನು ಮುಚ್ಚಬೇಕೆಂದು ಡಿವೈಎಫ್‌ಐ ಮಂಗಳೂರು ನಗರ ಸಮಿತಿ ನವಂಬರ್ 29 ರಂದು ದ.ಕ.ಜಿಲ್ಲಾಧಿಕಾರಿಯವರಿಗೆ ಮನವಿ ನೀಡಿತ್ತು.

ಡಿಸೆಂಬರ್ 2 ರಂದು ಜಿಲ್ಲಾಧಿಕಾರಿಯವರು ಸಾರ್ವಜನಿಕ ಸಭೆ ನಡೆಸಿ ಕಾನೂನುಬಾಹಿರವಾಗಿ ಸಾರ್ವಜನಿಕ ರಂಗದ ಹಣ ಸಂಗ್ರಹಿಸಿ ಕಾರ್ಯಾಚರಿಸುತ್ತಿರುವ ಸಂಸ್ಥೆಗಳನ್ನು ಮುಚ್ಚಿಸಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಡಿವೈಎಫ್‌ಐ ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ಡಿಸೆಂಬರ್ 2 ರಂದು ಬೆಂಬಲಿಗರು ಸಮೃದ್ಧ ಜೀವನ್ ಕಚೇರಿಗೆ ಮುತ್ತಿಗೆ ಹಾಕಿದಾಗ ಆ ಸಂಸ್ಥೆಯವರು ಬೀಗ ಜಡಿದಿರುತ್ತಾರೆ. ಬಳಿಕ ಪಿಎಇಎಲ್ ಕಂಪೆನಿಗೆ ಮುತ್ತಿಗೆ ಹಾಕಿದಾಗ ಅವರೂ ಸಂಸ್ಥೆಯನ್ನು ಮುಚ್ಚಿರುತ್ತಾರೆ. ಅಗ್ರಿಗೋಲ್ಡ್ ಸಂಸ್ಥೆಗೆ ಹೋಗುವಷ್ಟರಲ್ಲಿ ಅವರ ಸಿಬ್ಬಂದಿಗಳು ಸಂಸ್ಥೆ ಮುಚ್ಚಿ ಹೊರಟು ಹೋಗಿರುತ್ತಾರೆ. ಡಿವೈಎಫ್‌ಐ ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಜಿಲ್ಲಾ ಸಮಿತಿಯ ಸಂತೋಷ್ ಬಜಾಲ್, ಜೀವನ್‌ರಾಜ್ ಕುತ್ತಾರ್, ನಗರ ಸಮಿತಿ ಸದಸ್ಯರ ನೇತೃತ್ವದಲ್ಲಿ ಪ್ರತಿಭಟನೆಗಳು ನಡೆದಿವೆ. ಹಲವಾರು ಮಾಧ್ಯಮಗಳ ವರದಿಗಾರರು ಪ್ರತಿಭಟನೆಗೆ ಸಾಕ್ಷಿಯಾಗಿದ್ದರೂ, ಮರುದಿನ ಒಂದು ದಿನಪತ್ರಿಕೆಯ ಹೊರತಾಗಿ ಇತರ ಪತ್ರಿಕೆಗಳು ಘಟನೆಯನ್ನು ವರದಿ ಮಾಡದಿರುವುದು ಆಶ್ಚರ್ಯಕರವಾಗಿದೆ.

ಡಿವೈಎಫ್‌ಐ ನಾಗರಿಕ ಸಮಿತಿ ನೇತೃತ್ವದಲ್ಲಿ ಜೋಕಟ್ಟೆ ಬಂದ್ :

ಎಂಆರ್‌ಪಿಎಲ್ ಪೆಟ್ರೋ ಕೆಮಿಕಲ್ಸ್ ಸ್ಥಾವರದಿಂದ ತ್ಯಾಜ್ಯ ದ್ರವ ಹಾಗೂ ತ್ಯಾಜ್ಯ ಅನಿಲಗಳನ್ನು ಹೊಸತಾಗಿ ಸ್ಥಾಪಿಸಲಾದ ಸಲ್ಫರ್ ಹಾಗೂ ಕೋಕ್ ಘಟಕದಿಂದ ಹೊರಚೆಲ್ಲುವ ವ್ಯವಸ್ಥೆಯನ್ನಯ ಪಕ್ಕದ ಜೋಕಟ್ಟೆ ಗ್ರಾಮಸ್ಥರು ತೀವ್ರ ಬಾಧಿತರಾಗಿರುವ ಬಗ್ಗೆ ಹಾಗೂ ಅದ-ಕ್ಕೆ ಸಂಬಂಧಿಸಿ ಡಿವೈಎಫ್‌ಐ ನೇತೃತ್ವದ ನಾಗರಿಕ ಹೋರಾಟ ಸಮಿತಿ ಪ್ರತಿಭಟನೆಗಳನ್ನು ನಡೆಸಿದ ಬಗ್ಗೆ ಜನಶಕ್ತಿಯಲ್ಲಿ ವರದಿ ಮಾಡಲಾಗಿತ್ತು. ಎಂಆರ್‌ಪಿಎಲ್ ಸಂಸ್ಥೆಯ ಅಧಿಕಾರಿಗಳು ನಾಗರಿಕ ಹೋರಾಟ ಸಮಿತಿಯೊಂದಿಗೆ ಮಾತುಕತೆ ನಡೆಸಿ ತ್ಯಾಜ್ಯ ಮಟ್ಟವನ್ನು ಕನಿಷ್ಟ ಮಾಲಿನ್ಯ ಮಟ್ಟಕ್ಕೆ ತರುವುದಾಗಿ ಭರವಸೆ ನೀಡಿದ್ದರೂ ಸಂಸ್ಥೆಯು ತನ್ನ ಮಾತನ್ನು ಉಳಿಸಿಕೊಂಡಿರಲಿಲ್ಲ.

ಈ ಹಿನ್ನೆಲೆಯಲ್ಲಿ ಡಿಸೆಂಬರ್ 3 ರಂದು ಜೋಕಟ್ಟೆ ಗ್ರಾಮದಲ್ಲಿ ನಾಗರಿಕ ಹೋರಾಟ ಸಮಿತಿಯ ನೇತೃತ್ವದಲ್ಲಿ ಬಂದ್ ಆಚರಿಸಲಾಯಿತು. ಅಂಗಡಿ ಮಾಲಿಕರು ಅಂಗಡಿ ಮುಚ್ಚಿ ಬಂದ್‌ಗೆ ಬೆಂಬಲ ಸೂಚಿಸಿದರು. ಸ್ಥಳೀಯರು ಹಾಗೂ ಹೋರಾಟ ಸಮಿತಿ ಸದಸ್ಯರು ಜೋಕಟ್ಟೆಯಿಂದ ಕಳವಾರುವರೆಗೆ ಮೆರವಣಿಗೆ ನಡೆಸುವ ಮೂಲಕ ಎಆರ್‌ಪಿಎಲ್ ಮತ್ತು ಎಸ್‌ಇಜೆಡ್‌ಗಳ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಸ್ಥಾವರವನ್ನು ಮುಚ್ಚದಿದ್ದಲ್ಲಿ ಜಿಲ್ಲಾದ್ಯಂತ ಬಂದ್ ನಡೆಸಲಾಗುವುದು ಎಂದು ಎಚ್ಚರಿಸಿದರು. 30 ವರ್ಷಗಳ ಹಿಂದೆ ನಡೆದ ಭೋಪಾಲ್ ದುರಂತವನ್ನು ನೆನೆಸುವ ಸಂದರ್ಭದಲ್ಲಿ ಅದೇ ರೀತಿಯ ಪ್ರಶ್ನೆಗಳನ್ನು ಎತ್ತಿರುವ ಪ್ರತಿಭಟನೆ ಇದಾಗಿರುವುದು ಗಮನಾರ್ಹ. ●

'ಸಂವಿಧಾನ ದತ್ತ ಹಕ್ಕುಗಳನ್ನು ಜನರ ಪರವಾಗಿ ಅರ್ಥೈಸಿ ಮೈಲಿಗಲ್ಲು ತೀರ್ಪುಗಳನ್ನು ನೀಡಿದ ನ್ಯಾಯಮೂರ್ತಿ ಜ. ಕೃಷ್ಣ ಐಯ್ಯರ್'

– ಪ್ರಕಾಶ್ ಕಾರಟ್ ಕಂಬನಿ



ಖ್ಯಾತ ನ್ಯಾಯಶಾಸ್ತ್ರಜ್ಞರು, ಮಾಜಿ ಸಚಿವರು, ಮಾನವ ಹಕ್ಕುಗಳ ಪ್ರತಿಪಾದಕರೂ, ಆದ ಜಸ್ಟೀಸ್ ಕೃಷ್ಣ ಐಯ್ಯರ್ ತಮ್ಮ 99 ವಯಸ್ಸಿನಲ್ಲಿ ಡಿಸೆಂಬರ್ 4, 2014 ರಂದು ನಿಧನರಾಗಿದ್ದಾರೆ. ಭಾರತದ ನ್ಯಾಯಾಂಗದ ಚರಿತ್ರೆಯಲ್ಲಿ ಮರೆಯಲಾಗದ ಒಂದು ಹೆಸರು ವಿ. ಆರ್. ಕೃಷ್ಣ ಅಯ್ಯರ್ ಅವರದ್ದು.

"ಜಸ್ಟೀಸ್ ಕೃಷ್ಣ ಅಯ್ಯರ್ ಅವರ ನಿಧನದಿಂದ ನನಗೆ ಅತೀವ ದು:ಖವಾಗಿದೆ. ಕೃಷ್ಣ ಐಯ್ಯರ್ ಒಬ್ಬ ದೂರದೃಷ್ಟಿಯುಳ್ಳ ನ್ಯಾಯಶಾಸ್ತ್ರಜ್ಞರೂ, ಮುತ್ಸದ್ದಿಯೂ ಮತ್ತು ಮಾನವ ಹಕ್ಕುಗಳ ಸಮರ್ಥಕರೂ ಆಗಿದ್ದರು. ಒಬ್ಬ ಪಕ್ಷೇತರ ಶಾಸಕನಾಗಿ ವಿಧಾನ ಸಭೆಗೆ ಆಯ್ಕೆಯಾಗಿದ್ದ ಅವರು 1957ರಲ್ಲಿ ಕೇರಳದ ಮೊದಲ ಕಮ್ಯೂನಿಸ್ಟ್ ಮಂತ್ರಿಮಂಡಲದಲ್ಲಿ ಕಾನೂನು ಮಂತ್ರಿಯಾಗಿದ್ದರು. ಸರ್ವೋಚ್ಛ ನ್ಯಾಯಾಲಯದ (ಸುಪ್ರೀಮ್ ಕೋರ್ಟ್) ನ್ಯಾಯಾಧೀಶರಾಗಿದ್ದ ಅವರು ಸಂವಿಧಾನ ದತ್ತ ಹಕ್ಕುಗಳನ್ನು ಸಾಮಾನ್ಯ ಪ್ರಜೆಯ ಪರವಾಗಿ ಅರ್ಥೈಸಿ ನೀಡಿದ ತೀರ್ಪುಗಳು ಮೈಲಿಗಲ್ಲುಗಳಾಗಿವೆ.

ಅವರ ಜೀವನದುದ್ದಕ್ಕೂ ಕೃಷ್ಣ ಐಯ್ಯರ್ ನ್ಯಾಯ, ಸಮಾನತೆ ಮತ್ತು ಸ ಮಾ ಜ ವಾ ದ ದ ಪರವಾಗಿದ್ದರು. ತಮ್ಮ ನೈತಿಕ ಪರಿಷ್ಕತೆ ಮತ್ತು ತುಳಿತಕ್ಕೊಳಗಾದವರ ಬಗ್ಗೆ ಅತೀವ ಅನುಕಂಪ ಹೊಂದಿದ್ದ ಅವರು ತಮ್ಮ ಕೊನೆಯವರೆಗೂ ಜನತಾ ನ್ಯಾಯವೇದಿಕೆಯೇ ಆಗಿದ್ದರು.

ಸಮಾಜವು ಯಾವಾಗಲೂ ಸ್ಮರಿಸುವಂತಹ ಒಬ್ಬ ಅತ್ಯುತ್ತಮ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ." ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಅವರು ಹೇಳಿದ್ದಾರೆ. ■


ಜನಶಕ್ತಿ
ಕನ್ನಡ ವಾರಪತ್ರಿಕೆ

1992ರ ನಂತರ ದೇಶ ಪ್ರತಿ ಡಿಸೆಂಬರ್ 6ರಂದು ನಾಚಿಕೆಯಿಂದ ತಲೆ ತಗ್ಗಿಸುತ್ತಿದೆ–ಈ ಬಾರಿಯಂತೂ ಮೋದಿ ಸಂಪುಟದ ಮಂತ್ರಿಗಳು, ಬಿಜೆಪಿ ಸಂಸದರುಗಳ ಹೇಳಿಕೆಗಳು ತಮ್ಮ ಅಜೆಂಡಾವನ್ನು ಸ್ಪಷ್ಟಪಡಿಸುತ್ತಿದ್ದಾರೆ. ನಮ್ಮೆಲ್ಲ ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಭಾರತೀಯ ಜನತೆಯ ಹೋರಾಟ ಯಶಸ್ವಿಯಾಗಬೇಕಾದರೆ ಈ ದುಷ್ಟ ಅಜೆಂಡಾವನ್ನು ಸೋಲಿಸಲೇಬೇಕಾಗಿದೆ. ಈ ದೃಢ ನಿರ್ಧಾರವನ್ನು ಇನ್ನಷ್ಟು ಬಲಪಡಿಸದೇ ಇರುವ ಡಿಸೆಂಬರ್ 6ರ ಯಾವುದೇ ನೆನಪಿಗೆ ಅರ್ಥವಿರಲಾರದು.

ಬಿಜೆಪಿಯ ಉದ್ಧಟ ಹೇಳಿಕೆಗಳು ಭೀಷಣ ಕೇಡಿನ ಸಂಕೇತಗಳು

ಸೀತಾರಾಮ್ ಯೆಚೂರಿ





'ಕ್ಷಮಿಸಿ, ರಾಮದೇವರೇ, ವಾನರ ಸೇನೆ ನನ್ನ ಹತೋಟಿ ಮೀರಿತು'–

ಇದು ಖ್ಯಾತ ವ್ಯಂಗ್ಯಚಿತ್ರಕಾರ ಅಬು ಅಬ್ರಹಾಂ 1992ರಲ್ಲಿ ರಚಿಸಿದ ಚಿತ್ರ.
ಅಂದು ಅಡ್ವಾಣಿಯವರು ಖೇದ ವ್ಯಕ್ತಪಡಿಸಿದ್ದರು.
ಇಂದು ಮೋದಿ ಸಂಪುಟದ ಮಂತ್ರಿಗಳೊಬ್ಬರು ಮತ್ತೆ 'ಖೇದ' ವ್ಯಕ್ತಪಡಿಸಿದರೆ,
ಇನ್ನೊಬ್ಬ ಮಂತ್ರಿಗಳು
'ನಾವೆಲ್ಲ ಹನುಮಂತರು' ಎಂದು ನೆನಪಿಸಿದ್ದಾರೆ.

ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಉದ್ದೇಶದ ಅತ್ಯಂತ ಅಸಹ್ಯಕರ ಹೇಳಿಕೆಗಳು ಕೇಂದ್ರ ಮಂತ್ರಿಮಂಡಲದ ಸದಸ್ಯರಿಂದ ಒಂದಾದ ಮೇಲೊಂದರಂತೆ ಬರುತ್ತಿರುವುದು ಮುಂಬರುವ ಕೇಡಿನ ಸಂಕೇತಗಳನ್ನು ನೀಡುತ್ತಿವೆ. ಇವು ಬಾಬ್ರಿ ಮಸೀದಿಯ ಧ್ವಂಸದ 22ನೇ ವಾರ್ಷಿಕದ ಹಿಂದಿನ ವಾರದಲ್ಲಿ ಬರುತ್ತಿರುವುದಂತೂ ನಿಜಕ್ಕೂ ಒಂದು ದುರಂತಮಯ ವ್ಯಂಗ್ಯ.

ಮೋದಿ ಸರಕಾರದ ಒಬ್ಬ ರಾಜ್ಯ ಮಂತ್ರಿಯ ಇಂತಹ ಅತ್ಯಂಕ ಆಕ್ರಮಣಕಾರಿ ಹೇಳಿಕೆಗಳು ರಾಜ್ಯಸಭೆಯಲ್ಲಿ ಎಬ್ಬಿಸಿದ ಗದ್ದಲ ಮುಂದುವರೆದಿದೆ. ದಿಲ್ಲಿ ವಿಧಾನಸಭೆಗೆ ನಡೆಯಲಿರುವ ಚುನಾವಣೆಗೆ ಸಂಬಂಧಪಟ್ಟ ಒಂದು ಸಾರ್ವಜನಿಕ ಸಭೆಯಲ್ಲಿ ಇಂತಹ ಉದ್ರೇಕಿಸುವ ಮಾತುಗಳನ್ನು ಆಡಿದ ಮಂತ್ರಿ 'ಖೇದ ವ್ಯಕ್ತಪಡಿಸಿದರೆ' ಏನೇನೂ ಸಾಲದು ಎಂದು ಸಂಸತ್ತಿನ ಮೇಲ್ಮನೆಯ ಸಮಸ್ತ ಪ್ರತಿಪಕ್ಷಗಳು ಅಸಂತೃಪ್ತಿ ವ್ಯಕ್ತಪಡಿಸಿರುವುದು ಸರಿಯಾಗಿಯೇ ಇದೆ. ಆ ಮಂತ್ರಿಯನ್ನು ವಜಾ ಮಾಡಬೇಕು, ಇಲ್ಲವೇ ಆಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಲಾಗುತ್ತಿದೆ. (ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ, ಮಂತ್ರಿಗಳು ಕ್ಷಮಾಪಣೆ ಕೇಳಿದ್ದಾರಲ್ಲ, ರಾಷ್ಟ್ರಿಯ ಹಿತದೃಷ್ಟಿಯಿಂದ ಕಲಾಪಗಳು ಮುಂದುವರೆಯಲು ಬಿಡಿ ಎಂದು ಪ್ರಧಾನ ಮಂತ್ರಿಗಳು ಮನವಿ ಮಾಡಿಕೊಂಡಿದ್ದಾರೆ, ಆದರೆ ಪ್ರತಿಪಕ್ಷಗಳು ಇದನ್ನು ಮನ್ನಿಸಲು ಸಿದ್ಧರಾಗಿಲ್ಲ, ಮಂತ್ರಿಗಳು ಅಪರಾಧ ಎಸಗಿದ್ದಾರೆ, ಅದಕ್ಕೆ ರಾಜೀನಾಮೆ ನೀಡಲೇಬೇಕು ಎಂದು ಪಟ್ಟು ಹಿಡಿದಿದ್ದಾರೆ–ಸಂ.).

ಏಕೆಂದರೆ ಈ ಮಂತ್ರಿಯ ಹೇಳಿಕೆಗಳು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 153(ಎ) ಅಡಿಯಲ್ಲಿ ಶಿಕ್ಷಾರ್ಹ ಮತ್ತು ದಂಡ ವಿಧಿಸಿ ಮನ್ನಿಸಲಾಗದ ಅಪರಾಧವಾಗುತ್ತವೆ. ನ್ಯಾಯಾಂಗ, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಅಧ್ಯಕ್ಷತೆಯ ಸಂವಿಧಾನ ಪೀಠದ ಒಂದು ತೀರ್ಪು ಇಂತಹ ಸ್ವರೂಪದ ಒಂದು ಅಪರಾಧವನ್ನು ಕೇವಲ ಕ್ಷಮಾಪಣೆಯಿಂದ ಮನ್ನಿಸಲು ಸಾಧ್ಯವಿಲ್ಲ, ಕ್ರಿಮಿನಲ್ ವಿಚಾರಣೆ ನಡೆದು ಶಿಕ್ಷೆ ವಿಧಿಸಬೇಕಾಗುತ್ತದೆ ಎಂದಿದೆ.

ಪ್ರತಿಜ್ಞೆಯ ಉಲ್ಲಂಘನೆ

ಆ ಮಂತ್ರಿ ಇಂತಹ ಟಿಪ್ಪಣಿಗಳನ್ನು ಮಾಡಿದ್ದಕ್ಕೆ ಖೇದ ವ್ಯಕ್ತಪಡಿಸಿ ಅಪರಾಧ ಮಾಡಿರುವುದನ್ನು ಒಪ್ಪಿಕೊಂಡಿದ್ದಾರೆಂದರೆ, ಅದರೊಂದಿಗೇ ನಮ್ಮ ಸಂವಿಧಾನದ ಒಂದು ಮೂಲ ತತ್ತ್ವವಾದ ಜಾತ್ಯಾತೀತತೆಯನ್ನು ಉಲ್ಲಂಘಿಸಿದ್ದಾರೆ ಎಂದೂ ಆಗುತ್ತದೆ. ಆ ಸಂವಿಧಾನದ ಅಡಿಯಲ್ಲೇ ಅವರು, ಅದನ್ನು ಎತ್ತಿಹಿಡಿಯುವ ಮತ್ತು ಗೋಪನೀಯತೆಯ ಪ್ರತಿಜ್ಞೆ ಸ್ವೀಕರಿಸಿ ಮಂತ್ರಿಯಾಗಿರುವುದು. ಹೀಗಿರುವಾಗ ಆ ಮಂತ್ರಿ ಆ ಹುದ್ದೆಯಲ್ಲಿ ಮುಂದುವರೆಯುವುದಕ್ಕೆ ಯಾವುದೇ ಸಮರ್ಥನೆ ಉಳಿಯುವುದಿಲ್ಲ. ಆದ್ದರಿಂದಲೇ ರಾಜ್ಯಸಭೆಯಲ್ಲಿ ಕಲಾಪಗಳು ಸ್ಥಗಿತಗೊಂಡಿರುವುದು.

ಇದನ್ನು ಹೇಗೆ ಪರಿಹರಿಸುವುದು ಎಂಬುದು ಮೋದಿ ಸರಕಾರಕ್ಕೆ ಬಿಟ್ಟ ಸಂಗತಿ. ಸಂಸತ್ತಿನ ಒಳಗೂ ಮತ್ತು ಹೊರಗೂ ಬಿಜೆಪಿ ಯಾವುದೇ ಪಶ್ಚಾತ್ತಾಪವನ್ನಾಗಲೀ, ಇಂತಹ ಸಂಪುಟದ ಮಂತ್ರಿಗಳ ಹೇಳಿಕೆಗಳಿಗೆ ಕಡಿವಾಣ ಹಾಕುವ ಭರವಸೆಯನ್ನಾಗಲೀ ಕೊಡುತ್ತಿಲ್ಲ, ಬದಲಿಗೆ, ಉದ್ಧಟತನದ ಆಕ್ರಮಣಕಾರೀ ನಿಲುವನ್ನೇ ಮುಂದುವರೆಸುತ್ತಿದೆ. ಅವರು ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಒಂದು ಉನ್ಮತ್ತ ಅಸಹಿಷ್ಣು 'ಹಿಂದೂ ರಾಷ್ಟ್ರ'ವನ್ನಾಗಿ ಪರಿವರ್ತಿಸುವ ಆರೆಸ್ಸೆಸ್‌ನ ನಿಜವಾದ ಅಜೆಂಡಾವನ್ನು ಅನುಸರಿಸುತ್ತಿದ್ದಾರೆ ಎಂಬುದು ಸ್ಪಷ್ಟ.

ಈ ಮೋದಿ ಸರಕಾರದ ಮಂತ್ರಿಗಳು ಮತ್ತು ಸಂಸತ್ ಸದಸ್ಯರುಗಳ ಹೇಳಿಕೆಗಳ ಸ್ಯಾಂಪಲ್ ಇಲ್ಲಿದೆ:

* ಸಂಸತ್ತಿನಲ್ಲಿ ಈಗ ಚರ್ಚೆಯಲ್ಲಿರುವ ರಾಜ್ಯಮಂತ್ರಿ ಸಾಧ್ವಿ ನಿರಂಜನ ಜ್ಯೋತಿ ಡಿಸೆಂಬರ್ 1, 2014ರಂದು ದಿಲ್ಲಿಯ ರ‍್ಯಾಲಿಯೊಂದರಲ್ಲಿ ಹೇಳಿದ ಮಾತುಗಳು: " ದಿಲ್ಲಿಯ ಜನತೆ ತಮಗೆ ರಾಮ್‌ಝಾದೆಗಳ(ರಾಮನ ಅನುಯಾಯಿಗಳ) ಸರಕಾರ ಬೇಕೋ ಅಥವ (ಮುದ್ರಿಸಲಾಗದ ಮಾತು–ಅಕ್ರಮ ಸಂತಾನ)ಗಳ ಸರಕಾರ ಬೇಕೋ ಎಂದು ನಿರ್ಧರಿಸಬೇಕಾಗಿದೆ".

ನಂತರ ಅತ್ಯಂತ ಉದ್ಧಟತನದಿಂದಲೇ ಆಕೆ ಹೇಳುತ್ತಾರೆ– "ನಾನು ದೇಶದ ಗಡಿಗಳು, ಅದರ ಸಮಗ್ರತೆಯ ಬಗ್ಗೆ ರಾಜಿ ಮಾಡಿಕೊಳ್ಳುವ ರಾಷ್ಟ್ರ–ವಿರೋಧಿಗಳ(ಮುಸ್ಲಿಮರ ಎಂದು ಓದಿಕೊಳ್ಳಿ) ಬಗ್ಗೆ ಹೇಳುತ್ತಿದ್ದೆ. ದೇಶವನ್ನು ಲೂಟಿ ಮಾಡುವ ಜನಗಳನ್ನು ಬೇರೆ ಹೇಗೆಂದು ಕರೆಯಲು ಸಾಧ್ಯ...? ಅವರನ್ನು ಏನೆಂದು ಕರೆಯಬೇಕು? ಅದಕ್ಕೇಕೆ ಆಕ್ಷೇಪ?"

ಇವು ಎಲ್ಲೋ ಬಾಯಿತಪ್ಪಿಯಷ್ಟೇ ಬಂದ ಹೇಳಿಕೆಗಳಲ್ಲ. ಈ ಅಂಕಣದಲ್ಲಿ ಈ ಮೋದಿ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಪ್ರಸ್ತಾಪಿಸಿದ ಆರೆಸ್ಸೆಸ್‌ನ 'ಸರಸಂಘಚಾಲಕ'ರೂ ಸೇರಿದಂತೆ ಅವರ ವಿವಿಧ ಮುಖಂಡರ ಅತ್ಯಂತ ಉದ್ರೇಕಕಾರಿ ಹೇಳಿಕೆಗಳನ್ನು ನೆನಪಿಸಿಕೊಳ್ಳಿ.

'ನಾವೆಲ್ಲ ಹನುಮಂತರು'

ಇನ್ನೊಬ್ಬ ರಾಜ್ಯಮಂತ್ರಿ, ಚುನಾವಣಾ ಪ್ರಚಾರದ ಸಮಯದಲ್ಲಿ ಮೋದಿಯವರನ್ನು ವಿರೋಧಿಸುವವರು ಪಾಕಿಸ್ತಾನಕ್ಕೆ ಹೋಗಲಿ ಎಂಬ ಕುಖ್ಯಾತ ಹೇಳಿಕೆ ನೀಡಿದ ವ್ಯಕ್ತಿ, ಗಿರಿರಾಜ್ ಕಿಶೋರ್, ಡಿಸೆಂಬರ್ 1, 2014ರಂದು ಹೀಗೆ ಹೇಳಿದ್ದಾರೆ: "ಹನುಮಂತ ನಿಮಗೆ ಗೊತ್ತೇನು? ನಾವೆಲ್ಲ ಹನುಮಂತರು. ಹನುಮಂತ ರಾಮನಿಗೆ ಹೇಳಿದ ನನಗೆ ನನ್ನದೇ ಆದ ಗುರುತು ಇಲ್ಲ, ನಾವೆಲ್ಲ ಇಡೀ ದೇಶದಲ್ಲಿ ಮೋದಿಯ ಭಕ್ತರಾಗಿದ್ದೇವೆ."

ಕೆಲವು ಬಿಜೆಪಿ ಸಂಸತ್ ಸದಸ್ಯರು ಏನು ಹೇಳಿದ್ದಾರೆ ಓದಿ :

"ಅಲ್ಪಸಂಖ್ಯಾತ ಸಮುದಾಯದ ಜನಸಂಖ್ಯೆ 40ಶೇ.ಕ್ಕಿಂತ ಹೆಚ್ಚಿರುವ ಸ್ಥಳಗಳಲ್ಲಿ ಬೇರೆ ಸಮುದಾಯಗಳಿಗೆ ಜಾಗವಿಲ್ಲ. ಇವೇ ಗಲಭೆಗಳು ನಡೆಯುವ ಪ್ರದೇಶಗಳು."(ಯೋಗಿ ಆದಿತ್ಯನಾಥ್)

"ಸತ್ಯ ಸಂಗತಿಯೆಂದರೆ ಮದರಸಾಗಳು ರಾಷ್ಟ್ರ–ವಿರೋಧಿ ಚಟುಚಟಿಕೆಗಳಲ್ಲಿ ಶಾಮೀಲಾಗಿವೆ. ಅವರು ಯುವಜನರು ಭಯೋತ್ಪಾದಕರು, ಜಿಹಾದಿಗಳಾಗುವಂತೆ ಶಿಕ್ಷಣ ಕೊಡುತ್ತಿವೆ.....ಸರಕಾರ ಇದನ್ನು ತನಿಖೆ ಮಾಡಬೇಕು."(ಸಾಕ್ಷಿ ಮಹಾರಾಜ್)

(ಇವೆಲ್ಲ ಡಿಸೆಂಬರ್ 3, 2014 'ಮೈಲ್ ಟುಡೆ' ಯಲ್ಲಿ ಪ್ರಕಟವಾದವುಗಳು)

ಹಿಂದು ಮಹಾಸಭಾದ ಪ್ರಧಾನ ಕಾರ್ಯದರ್ಶಿ ನವೀನ್ ತ್ಯಾಗಿ ಎಲ್ಲ ಐಟಂ ಹುಡುಗಿಯರನ್ನು 'ವೇಶ್ಯೆಯರು' ಎಂದು ಘೋಷಿಸಬೇಕು ಎಂದು ಆಗ್ರಹಿಸಿದ್ದಾರೆ. ಈ ಹಿಂದೆ ಹಿಂದೂ ಮಹಾಸಭಾ ಹರ್‍ಯಾಣಾದಲ್ಲಿ ಹುಡುಗಿಯರು ಶಾಲೆ, ಕಾಲೇಜುಗಳಲ್ಲಿ ಜೀನ್ಸ್ ಧರಿಸುವುದನ್ನು, ಮೊಬೈಲ್ ಬಳಸುವುದನ್ನು ನಿಷೇಧಿಸಬೇಕು ಎಂದು ಆದೇಶ ಹೊರಡಿಸಿತ್ತು. ಇಂತಹ ನೈತಿಕ ಪೋಲೀಸ್‌ಗಿರಿ ದೇಶದ ವಿವಿಧ ಭಾಗಗಳಲ್ಲಿ, ಅದರಲ್ಲೂ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಮತ್ತು ಕರ್ನಾಟಕದಲ್ಲಿ ಹೆಚ್ಚುತ್ತಿದೆ.


ಹರ್‍ಯಾಣದ ಹಿರಿಯ ಖಾಪ್ ಪಂಚಾಯತ್ ಸದಸ್ಯರು ಇಂತಹ ಆದೇಶಗಳನ್ನು ಬೆಂಬಲಿಸಿದ್ದಾರೆ: "ಮಹಿಳೆಯರು ಬಿಗಿಯಾದ ಉಡುಪುಗಳನ್ನು ಧರಿಸಿದರೆ ಗಂಡಸರು ಆಕರ್ಷಿತರಾಗುತ್ತಾರೆ, ಅದರಿಂದ ತಪ್ಪುಗಳು ಸಂಭವಿಸಬಹುದು. ನೀವು ಉಡುಪು ಧರಿಸುವ ರೀತಿಯ ಬಗ್ಗೆ ನೋಡಿಕೊಳ್ಳುವುದು ಒಳ್ಳೆಯದು. ಇಂತಹ ಉಡುಪುಗಳನ್ನು ತೊಟ್ಟರೆ ಅತ್ಯಾಚಾರಗಳು ಕಡಿಮೆಯಾಗಲಾರವು. ಆದ್ದರಿಂದ ಶಿಷ್ಟ ಬಟ್ಟೆಗಳನ್ನು ಧರಿಸಿ"ಎಂದು ಅವರು ಹೇಳುತ್ತಾರೆ. (ಒನ್‌ಇಂಡಿಯಾ.ಕಾಂ).

ನಿಜವಾದ ಅಜೆಂಡಾ

ಮುಸ್ಲಿಮರು, ದಲಿತರು ಮತ್ತು ಆದಿವಾಸಿಗಳ ಪ್ರಮಾಣ ನಮ್ಮ ದೇಶದ ಜನಸಂಖ್ಯೆಯಲ್ಲಿ 38.8ಶೇ. ಆಗಿದ್ದರೆ, ನಮ್ಮ ದೇಶದ ಜೈಲುಗಳಲ್ಲಿ ಈ ವಿಭಾಗಗಳಿಗೆ ಸೇರಿದ ವಿಚಾರಣಾಧೀನ ಕೈದಿಗಳ ಪ್ರಮಾಣ 53 ಶೇ. ಎಂಬ ಸಂಗತಿಗೆ ಸಂಬಂಧಪಟ್ಟಂತೆ ಕೇಳಿದ ಪ್ರಶ್ನೆಗೆ ಪ್ರತಿಯಾಗಿ ಗ್ರಹ ವ್ಯವಹಾರಗಳ ರಾಜ್ಯಮಂತ್ರಿ ನೀಡಿದ ಲಿಖಿತ ಉತ್ತರದಲ್ಲಿ ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ ರಾಜ್ಯಗಳಲ್ಲಿ ವಿಚಾರಣಾಧೀನ ಕೈದಿಗಳ ಸಂಖ್ಯೆಯೂ ಹೆಚ್ಚು ಎಂದು ಹೇಳಿದ್ದರು. ಹಿಂದುಸ್ತಾನ್ ಟೈಮ್ಸ್(ಡಿಸೆಂಬರ್3, 2014) ಇದರ ವರದಿಯನ್ನು 'ವಿವಾದಾಸ್ಪದ: ಮಂತ್ರಿಗಳಿಂದ ಅಪರಾಧ ಮತ್ತು ಧರ್ಮದ ನಡುವೆ ಸಂಬಂಧದ ಸಂಕೇತ' ಎಂಬ ಶಿರೋನಾಮೆಯ ಅಡಿಯಲ್ಲಿ ಪ್ರಕಟಿಸಿದೆ.

ಅಂದರೆ, 'ಅಭಿವೃದ್ಧಿ', 'ಒಳ್ಳೆಯ ದಿನಗಳು ಬರಲಿವೆ" ಎಂಬ ಮಾತುಗಳ ಅಬ್ಬರವೇನೇ ಇರಲಿ, ಮೋದಿ ಸರಕಾರ ಅನುಸರಿಸುತ್ತಿರುವ ನಿಜವಾದ ಅಜೆಂಡಾ ಆರೆಸ್ಸೆಸ್ ಕಣ್ಣೋಟವನ್ನು ಮುಂದೊಯ್ಯುವುದು. ಇದು ನಮ್ಮ ದೇಶದ ಸಮ್ಮಿಶ್ರ ಸಾಮಾಜಿಕ ಹಂದರವನ್ನು ಮುರಿದು ಹಾಕುವತ್ತ ಅಪಾಯಕಾರಿಯಾಗಿ ಒಯ್ಯುವುದು ಖಂಡಿತ. ಹೀಗಿದೆ, ಈ ಅಂಕಣದಲ್ಲಿ ಈ ಮೊದಲು ಮತ್ತೆ–ಮತ್ತೆ ಚರ್ಚಿಸಿದಂತೆ, ಸೀಳು ನಾಲಗೆಯ ದುಷ್ಟ ರಾಜಕೀಯ– ಕಣ್ಣುಮುಚ್ಚಿ ನಂಬುವ ಸಾರ್ವಜನಿಕರ ವಿಭಾಗಗಳಿಗೆ ಒಂದು ನಾಲಗೆ, ನಮ್ಮ ದೇಶದ ವೈವಿಧ್ಯಮಯ ಸಾಮಾಜಿಕ–ಸಾಂಸ್ಕೃತಿಕ ಚಿತ್ತಾರದ ಐಕ್ಯತೆ ಮತ್ತು ಸಮಗ್ರತೆಯನ್ನು ಬುಡಮೇಲು

ಮುಂದಿನ ಪುಟ 15 ನೋಡಿ



ವಾಜಪೇಯಿ–
ಅಡ್ವಾಣಿ–
ಮೋದಿ–
ಸಾಧ್ವಿ–
ಇತ್ಯಾದಿ, ಇತ್ಯಾದಿ
ಒಬ್ಬರನ್ನೊಬ್ಬರು
ಮೀರಿಸುವ
ಉದ್ಧಟ ಹೇಳಿಕೆಗಳ
ಕೇಸರಿ ಪರಂಪರೆ

ವ್ಯಂಗ್ಯಚಿತ್ರ ಕೃಪೆ:
ಸುರೇಂದ್ರನ್,
ದಿ ಹಿಂದು

ದೆಹಲಿಯಲ್ಲಿ 'ದಲಿತರ ಶೋಷಣಾ ಮುಕ್ತಿ ಮಂಚ್'ನ ಪ್ರಥಮ ಯಶಸ್ವಿ ರಾಷ್ಟ್ರೀಯ ಸಮಾವೇಶ

'ದಲಿತರ ಸಮಸ್ಯೆಗಳನ್ನು ಚರ್ಚಿಸುವ ಸಲುವಾಗಿಯೇ ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯಬೇಕು.'

–ಕಾಂ. ಪ್ರಕಾಶ್ ಕಾರಟ್ ಆಗ್ರಹ



ಖ್ಯಾತ ಚಿಂತಕ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಗೋಪಾಲಸ್ವಾಮಿ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿರುವುದು

ವರದಿ: ಎನ್. ನಾಗರಾಜ್

ಇದೊಂದು ಅತ್ಯಂತ ಮಹತ್ವದ ಸುದ್ದಿ. ಒಂದು ಲೆಕ್ಕದಲ್ಲಿ ಅತ್ಯಂತ ಉತ್ಸಾಹದಾಯಕವಾದ ಸುದ್ದಿ. ನವದೆಹಲಿಯ 'ಸಂವಿಧಾನ ಕ್ಲಬ್'ನ ಸಭಾಂಗಣದಲ್ಲಿ ದಿನಾಂಕ 27.11.2014 ರಂದು ದೇಶದ ನಾನಾ ರಾಜ್ಯಗಳ ದಲಿತ ಹಕ್ಕು ಸಂಘಟನೆಗಳು ಪಾಲ್ಗೊಂಡ ರಾಷ್ಟ್ರೀಯ ಸಮಾವೇಶವೊಂದು ಅತ್ಯಂತ ಯಶಸ್ವಿಯಾಗಿ ಜರುಗಿತು. ಈ ಸಮಾವೇಶವನ್ನು 'ದಲಿತರ ಶೋಷಣಾ ಮುಕ್ತಿ ಮಂಚ್' ವೇದಿಕೆಯಿಂದ ಈ ಸಮಾವೇಶವನ್ನು ಸಂಘಟಿಸಲಾಗಿತ್ತು. ಇದರ ನೇತೃತ್ವವನ್ನು ಸಿಪಿಐ(ಎಂ) ಪಕ್ಷ ವಹಿಸಿತ್ತು.

ಸಮಾವೇಶವನ್ನು ಖ್ಯಾತ ಚಿಂತಕರು, ಜವಹರ ಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಗೋಪಾಲ್ ಗುರು ಉದ್ಘಾಟಿಸಿದರು. ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕೆ. ವರದ ರಾಜನ್ ಅವರು ಪ್ರಸ್ತಾವಿಕವಾಗಿ ಮಾತನಾಡಿದರು. ಮತ್ತೊಬ್ಬ ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ. ಬೃಂದಾ ಕಾರಟ್, ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಶ್ರೀನಿವಾಸ್ ಸಮಾವೇಶದಲ್ಲಿ ಲಿಖಿತ ವರದಿ ಮಂಡಿಸಿದರು. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾದ ಕಾಂ. ಹನನ್ ಮುಲ್ಲಾ, ಕಾಂ. ಹೇಮಲತಾ ಮುಂತಾದವರು ವೇದಿಕೆಯಲ್ಲಿದ್ದರು.

ಈ ಸಮಾವೇಶದಲ್ಲಿ 465 ಪ್ರತಿನಿಧಿಗಳು ಅದರಲ್ಲಿ 42 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದು ವಿಶೇಷವಾಗಿತ್ತು. ಎರಡು ರಾಜ್ಯಗಳನ್ನು ಹೊರತು ಪಡಿಸಿ ದೇಶದ ಎಲ್ಲ ರಾಜ್ಯಗಳಿಂದ ಪ್ರತಿನಿಧಿಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು. ಕರ್ನಾಟಕದಿಂದ 9 ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮಾವೇಶವು ದಲಿತ ಸಮುದಾಯ ದಿನದಿನವೂ ಅನುಭವಿಸುತ್ತಿರುವ ಅಪಮಾನ, ನೋವುಗಳು, ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ, ಅತ್ಯಾಚಾರಗಳ ಪ್ರವೃತ್ತಿ, ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೇ ಬುಡಮೇಲು ಮಾಡುತ್ತಿರುವ ನವ ಉದಾರೀಕರಣ ನೀತಿಗಳು, ಮನುವಾದಿ ಜಾತಿ ಶ್ರೇಣೀಕರಣವನ್ನು, ಜಾತಿ ಭೇದ–ಅಸ್ಪೃಶ್ಯತೆಯ ಅನ್ಯಾಯಗಳು, ಕ್ರೌರ್ಯಗಳನ್ನು ಮಸುಕು ಮಾಡುವ ಕೋಮುವಾದದ ಅಪಾಯಗಳು ಹಾಗೂ ಕೋಮುವಾದಿ ಶಕ್ತಿಗಳ ಕುತಂತ್ರಗಳ ಕುರಿತು ಆಳವಾದ ಮತ್ತು ವಿವರವಾದ ಚರ್ಚೆಗಳನ್ನು ನಡೆಸಿತು. ದಲಿತರ ಸ್ವಾಭಿಮಾನಕ್ಕೆ ಅಪಚಾರವೆಸಗುವ ಪ್ರವೃತ್ತಿಗಳ ವಿರುದ್ಧ ದಲಿತ ಸಬಲೀಕರಣಕ್ಕಾಗಿ ಹಾಗೂ ಅಂತಿಮವಾಗಿ ದಲಿತರ ವಿಮೋಚನೆಗೆ ಅಗತ್ಯವಾದ ಚಳುವಳಿಯ ದಾರಿಯ ಕುರಿತು ಸಮಾವೇಶವು ಗಂಭೀರವಾಗಿ ಚರ್ಚಿಸಿತು.

'ದಲಿತರ ಮೇಲಿನ ದೌರ್ಜನ್ಯ ಜಾತಿ ತಾರತಮ್ಯ ಚರ್ಚಿಸಲು 'ವಿಶೇಷವಾದ ಸಂಸತ್ ಅಧಿವೇಶನ' ಕರೆಯಿರಿ'



ಈ ಸಮಾವೇಶವು ದಲಿತರ ಹಕ್ಕುಗಳಿಗೆ ಸಂಬಂಧ ಪಟ್ಟಂತೆ ಹಾಗೂ ದಲಿತರ ಮೇಲಿನ ದೌರ್ಜನ್ಯ ಜಾತಿ ತಾರತಮ್ಯ ಕುರಿತಂತೆ ಚರ್ಚಿಸಲು 'ವಿಶೇಷವಾದ ಸಂಸತ್ ಅಧಿವೇಶನ'ವನ್ನು ಕರೆಯಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಸಮಾವೇಶ ಕೈಗೊಂಡಿತು. ಇದಲ್ಲದೆ, ಇನ್ನು 9 ನಿರ್ಣಯಗಳನ್ನು ಒಮ್ಮತದಿಂದ ಅಂಗೀಕರಿಸಿತು.

'ದಲಿತರ ಶೋಷಣಾ ಮುಕ್ತಿ ಮಂಚ್' ವೇದಿಕೆಯು ಈ ಪ್ರಥಮ ರಾಷ್ಟ್ರೀಯ ಸಮಾವೇಶವನ್ನು 9 ರಾಜ್ಯಗಳಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ 9 ದಲಿತ ಹಕ್ಕುಗಳ ಸಮಿತಿ ಹಾಗೂ ಸಂಘಟನೆಗಳು ಒಟ್ಟುಗೂಡಿ ಹಾಗೂ ಸಾಮಾಜಿಕ ತುಳಿತಕ್ಕೆ ಒಳಗಾಗಿರುವ ದಲಿತರ ಸಾಮಾಜಿಕ ನ್ಯಾಯಕ್ಕಾಗಿ ದುಡಿಯುತ್ತಿರುವ ವ್ಯಕ್ತಿಗಳು, ಪ್ರಗತಿಪರರು ಒಂದಾಗಿ ಆಯೋಜಿಸಲಾಗಿತ್ತು.

ಈ 'ದಲಿತ ಶೋಷಣಾ ಮುಕ್ತಿ ಮಂಚ್' (ಡಿಎಸ್ಎಂಎಂ) ವೇದಿಕೆಯು ಅಸ್ಪೃಶ್ಯತಾ ಆಚರಣೆ ಹಾಗೂ ಜಾತಿತಾರತಮ್ಯದ ವಿರುದ್ಧ ಹಾಗೂ ದಲಿತರ ಮೇಲೆ ಹಲವು ರಾಜ್ಯಗಳಲ್ಲಿ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಹಾಗೂ ಸಾಮಾಜಿಕ ನ್ಯಾಯ, ಸಾಮಾಜಿಕವಾಗಿ ಧಮನಕ್ಕೆ ಸಿಕ್ಕಿರುವವರಿಗೆ ಆರ್ಥಿಕವಾಗಿ ಬಲವರ್ಧನೆಗೊಳಿಸುವ – ಇಂತಹ ಹೋರಾಟಗಳಲ್ಲಿ ತೊಡಗಿಸಿಕೊಂಡಿರುವ ಯಾವುದೇ ವ್ಯಕ್ತಿ, ಸಂಘಟನೆ, ವೇದಿಕೆಗಳು – ಈ ಡಿಎಸ್ಎಂಎಂ ವೇದಿಕೆಯೊಂದಿಗೆ ಸೇರಿಕೊಳ್ಳಬಹುದಾಗಿದೆ.

ದಲಿತರೆಂದರೆ–ಸಾಮಾಜಿಕವಾಗಿ ಜಾತಿದಮನಕ್ಕೆ ಒಳಪಟ್ಟವರು

ಸಮಾವೇಶ ಸಮಾರೋಪವನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್ ನೆರವೇರಿಸಿದರು. ಅವರು ಮಾತನಾಡುತ್ತಾ ಎಂಟು ವರ್ಷಗಳ ಹಿಂದೆ 2006ರಲ್ಲಿ ಇದೇ ಕಟ್ಟಡದ ಮಾಲ್ವಂಕರ್ ಸಭಾಂಗಣದಲ್ಲಿ ಸಂಘಟಿಸಿದ್ದ ಅಖಿಲ ಭಾರತ ಸಮಾವೇಶದಲ್ಲಿ; ದಲಿತರ ಮೇಲೆ ನಡೆಯುತ್ತಿರುವ ಸಾಮಾಜಿಕ ದಬ್ಬಾಳಿಕೆ, ಅಸ್ಪೃಶ್ಯತಾ ಆಚರಣೆಗಳು, ಜಾತಿ ತಾರತಮ್ಯ ಹಾಗೂ ಅವರ ಸಂವಿಧಾನ ಬದ್ಧ ಹಕ್ಕುಗಳು ಹಾಗೂ ದಲಿತರನ್ನು ಶೋಷಣೆಯಿಂದ ವಿಮುಕ್ತಿಗೊಳಿಸಲು–ಸಿಪಿಐ(ಎಂ) ಪಕ್ಷದ ನಿಲುವುಗಳನ್ನು ಸ್ಪಷ್ಟ ಪಡಿಸಲಾಗಿತ್ತು. ಆ ನಿಟ್ಟಿನಲ್ಲಿ ಒಂದು 'ಬೇಡಿಕೆಗಳ ಪಟ್ಟಿ'ಯನ್ನು ಘೋಷಣೆ ಮಾಡಲಾಗಿತ್ತು. ಇದೀಗ 8 ವರ್ಷಗಳ ನಂತರ 'ದಲಿತ ಶೋಷಣಾ ಮುಕ್ತಿ ಮಂಚ್' ಸ್ಥಾಪನೆಗೊಂಡಿದ್ದು ನನಗೆ ತುಂಬ ಸಂತೋಷ ತಂದಿದೆ. ಇದೊಂದು ಮಹತ್ವಪೂರ್ಣ ಸಂಗತಿ ಎಂದರು. ಇದು ದಲಿತರ ಹಕ್ಕುಗಳನ್ನು ರಕ್ಷಿಸಲು, ಹಾಗೂ ಅವರ ಮೇಲಿನ ಜಾತಿತಾರತಮ್ಯ ಹಾಗೂ ಅಸ್ಪೃಶ್ಯತಾ ಆಚರಣೆಗಳ ವಿರುದ್ಧದ ಹೋರಾಟ ಸಂಘಟಿಸಲು, ಈ ವೇದಿಕೆ ಸ್ಪೂರ್ತಿದಾಯಕವಾಗಿದೆ ಎಂದರು.

ಒಂಬತ್ತು ರಾಜ್ಯಗಳಲ್ಲಿ ಈಗಾಗಲೇ ಸಂಘಟನೆ ರೂಪತಾಳಿ, ಪಾಳೇಗಾರಿ ಮೌಲ್ಯಗಳ ರೂಪಕವಾಗಿರುವ, ಜಾತಿ ತಾರತಮ್ಯಗಳ ವಿರುದ್ಧ ಅನೇಕ ಹೋರಾಟಗಳು, ಚಳುವಳಿಗಳು ಮೂಡಿ ಬಂದಿದೆ. ಪ್ರಮುಖವಾಗಿ ತಮಿಳುನಾಡು ಅಸ್ಪೃಶ್ಯತಾ ನಿರ್ಮೂಲನಾ ವೇದಿಕೆ, ಅತ್ಯಂತ ಶಕ್ತಿದಾಯಕವಾದ ಹೋರಾಟಗಳನ್ನು ನಡೆಸಿದೆ. ಅದರಲ್ಲಿ 'ಊತ್ತುಪುರಂನ ಜಾತಿ ಅಡ್ಡಗೋಡೆ' ಕೆಡವಿದ್ದು ಐತಿಹಾಸಿಕ ಹೋರಾಟವಾಗಿದೆ.

ಹಾಗೆಯೇ, ಆಂಧ್ರ ಪ್ರದೇಶದಲ್ಲಿ "ಕುಲ ಎವಕ್ಷ, ವ್ಯತಿರಿಕ್ತ ಹೋರಾಟ ಸಂಘ(ಕೆವಿಪಿಎ) ನಡೆಸಿದ ಮತ್ತೊಂದು ಮೈಲುಗಲ್ಲು ಹೋರಾಟ. ಎಸ್‌ಸಿ–ಎಸ್‌ಟಿ – ಉಪಯೋಜನೆಯ ಜಾರಿಗೆ 'ಒಂದು ಶಾಸನ'ವನ್ನು ವಿಧಾನ ಸಭೆಯಲ್ಲಿ ಅನುಮೋದನೆಗೊಳ್ಳಲು ನಡೆಸಿದ ಚಳುವಳಿ ಎಸ್‌ಸಿ/ ಎಸ್‌ಟಿಗಳಿಗೆ ಸಂವಿಧಾನಾತ್ಮಕ ಹಕ್ಕುಗಳ ಅನುಷ್ಠಾನಕ್ಕೆ ಮಾದರಿಯಾಗಿದೆ. ಕೇರಳದಲ್ಲಿನ ಭೂಮಿ ಹೋರಾಟ, ಕರ್ನಾಟಕದಲ್ಲಿ ಮಡೆ–ಮಡೆ ಸ್ನಾನ ಹಾಗೂ ಪಂಕ್ತಿಭೇದದ ವಿರುದ್ಧದ ಹೋರಾಟಗಳು ಅತ್ಯಂತ ಮೂತ್ವಪೂರ್ಣ ಹೋರಾಟಗಳಾಗಿ ಮೂಡಿಬಂದಿವೆ. ಹೀಗೆ ದಲಿತರ ಮೇಲಿನ ಅಮಾನವೀಯ ಕೃತ್ಯಗಳ ವಿರುದ್ಧದ ಹೋರಾಟಗಳು ದಲಿತರಿಗೆ ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಸಿಪಿಐ(ಎಂ)ನ ಅಚಲತೆಯು ಸಾಬೀತುಗೊಂಡಿದೆ. ಇದಕ್ಕೆ ಸಾರ್ವಜನಿಕರಿಂದ ಪ್ರೋತ್ಸಾಹದಾಯಕ ಸ್ಪಂದನ ದೊರೆಯುತ್ತಿದೆ.

ಈ ಎಲ್ಲಾ ಹೋರಾಟಗಳು, ದೊಡ್ಡ ಚಳುವಳಿಯಾಗಿ ವಿಸ್ತಾರಗೊಳಬೇಕಾಗಿದೆ. ದಲಿತರ ಹಕ್ಕುಗಳನ್ನು ರಕ್ಷಿಸಿಕೊಳ್ಳುವುದು ಹಾಗೂ ದಲಿತರ ಮೇಲಿನ ಅಸ್ಪೃಶ್ಯತೆ, ಜಾತಿ ತಾರತಮ್ಯದ ದೌರ್ಜನ್ಯಗಳ ವಿರುದ್ಧ ಹೋರಾಡುವುದು ಸಿಪಿಐ(ಎಂ) ಪಕ್ಷದ ದೃಢ ನಿಲುವಾಗಿದೆ ಎಂದರು.

ಇಮ್ಮಡಿ ಧಾಳಿ

ಮಾರ್ಕ್ಸ್‌ವಾದಿಗಳಾದ ನಾವು ಪ್ರಜ್ಞಾಪೂರ್ವಕವಾಗಿ ತಿಳಿದುಕೊಳ್ಳಬೇಕಾಗಿರುವ ಅಂಶಗಳು ಸಾಮಾಜಿಕ ದಮನದ ವಿರುದ್ಧದ ಹೋರಾಟವನ್ನೂ ಮೀರಿದ್ದು ಎಂಬುದು. ದಲಿತರ ಆರ್ಥಿಕ– ಸಾಮಾಜಿಕ ಸಮಾನತೆಗಾಗಿ ಹೋರಾಡುವ ಜೊತೆಗೆ, ಸಾಮಾಜಿಕ ನ್ಯಾಯ ಒದಗಿಸಲು ಬೇಕಾಗಿರುವ ಕೆಲವು ನಿರ್ಣಾಯಕ ಅಂಶಗಳನ್ನು ನಾವು ಅರಿಯಬೇಕಾಗಿದೆ ಎಂದೂ ಕಾರಟ್ ವಿವರಿಸಿದರು.

ಜಾತಿ ವ್ಯವಸ್ಥೆಯ ಪೋಷಣೆ–ದಲಿತರ ಮೇಲಿನ ದ್ವಿಮುಖ ಶೋಷಣೆ

ನಮ್ಮ ದೇಶದ ಆಳುವ ಬಂಡವಾಳಶಾಹಿ–ಭೂ ಮಾಲಿಕ ವರ್ಗ ಜಾತಿ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡಿರುವುದರಿಂದ, ಭಾರತದ ಆಳುವ ವರ್ಗ ಜಾತಿಯ ಪೂರ್ವಾಗ್ರಹಗಳನ್ನು ಪೋಷಿಸಿಕೊಂಡು ಬರುತ್ತಿದೆ. ಈ ಜಾತಿ ಪದ್ಧತಿಯು ವರ್ಗ ಶೋಷಣೆ ಮತ್ತು ಜಾತಿದಮನ ಎರಡನ್ನೂ ಒಳಗೊಂಡಿರುವುದರಿಂದ ದಲಿತರು ಎರಡು ರೀತಿಯಲ್ಲೂ ಶೋಷಣೆಗೆ ತುತ್ತಾಗುತ್ತಾರೆ. ದಲಿತರಲ್ಲಿ ಹೆಚ್ಚಿನವರು ಭೂ ರಹಿತರು, ಅಂದರೆ, ಕೃಷಿ ಕೂಲಿಕಾರರಾಗಿದ್ದಾರೆ. ಆದ್ದರಿಂದ ಮಾರ್ಕ್ಸ್‌ವಾದಿಗಳಾದ ನಾವುಗಳು, ಜಾತಿವ್ಯವಸ್ಥೆಯನ್ನು ತೊಡೆದು ಹಾಕುವ–

ಅಸ್ಪೃಶ್ಯತಾ ಆಚರಣೆಗಳು ಮತ್ತು ಜಾತಿತಾರತಮ್ಯದ ನಿರ್ಮೂಲನೆಗಾಗಿ ನಡೆಯುವ ಹೋರಾಟಗಳಲ್ಲಿ ಮುಂದಾಳುಗಳಾಗಿ ನಿಲ್ಲಬೇಕಾದ ಅಗತ್ಯವಿದೆ ಎಂದು ಕಾರಟ್ ಒತ್ತಿ ಹೇಳಿದರು. ಇದನ್ನೆ ಸಿಪಿಐ(ಎಂ) ಪಕ್ಷದ ಕಾರ್ಯಕ್ರಮವು ಒಂದು ಪ್ರಧಾನ ಗುರಿಯಾಗಿ ಪ್ರಸ್ತಾಪಿಸಿದೆ ಎಂದೂ ಅವರು ವಿವರಿಸಿದರು.

ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಸರ್ಕಾರಗಳು ಸತತವಾಗಿ ನವ–ಉದಾರೀಕರಣ ನೀತಿಗಳಿಗೆ ಜೋತು ಬಿದ್ದಿವೆ. ಈ ನೀತಿಗಳು ದೋಷಪೂರಿತವಾಗಿದ್ದು, ಜನರ ಬದುಕಿಗೆ ಮಾರಕವಾಗಿವೆ. ಅದರಲ್ಲಿಯೂ, ಇತ್ತೀಚಿಗೆ ಅಧಿಕಾರಕ್ಕೆ ಬಂದ ಪ್ರತಿಗಾಮಿ ಬಿಜೆಪಿಯು, ಮೋದಿಯ ನೇತೃತ್ವದಲ್ಲಿ ಇದೇ ನವ–ಉದಾರವಾದದ ಧೋರಣೆಗಳನ್ನೆ ಮತ್ತಷ್ಟು ತೀವ್ರತರದಲ್ಲಿ ಜಾರಿಗೆ ತರುತ್ತಿದೆ. ವಿದೇಶಿ ಬಂಡವಾಳಕ್ಕೆ ಜೋತು ಬಿದ್ದಿದೆ. ಒಂದು ಕಡೆ ಸರ್ಕಾರ ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ಒದಗಿಸುತ್ತಿರುವ ಅನುದಾನಗಳನ್ನು ಈ ನವಉದಾರವಾದ ಜಾರಿಗೊಂಡ ನಂತರದ ಕಾಲಾವಧಿಯಿಂದ ನಿರಂತರವಾಗಿ ವರ್ಷದಿಂದ ವರ್ಷಕ್ಕೆ ಕಡಿತಗೊಳಿಸಿಕೊಂಡು ಬರುತ್ತಿದೆ. ಮತ್ತೊಂದೆಡೆ ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಣಗೊಳಿಸುವ ಅಬ್ಬರದ ಧೋರಣೆಗಳಿಂದ ಉದ್ಯೋಗಗಳು ಸೀಮಿತಗೊಂಡಿವೆ. ಮೀಸಲಾತಿ ಎಂಬುದು ಪುಸ್ತಕದಲ್ಲಿಯೇ ಉಳಿದು ಹೋಗಿದೆ ಹಾಗೂ ಮರಿಚೀಕೆಯಾಗಿ ಮಾಯವಾಗುತ್ತಿದೆ. ಇನ್ನು ಉದ್ಯೋಗಗಳಲ್ಲಿ ದಿನಗೂಲಿಗಳು, ಗುತ್ತಿಗೀಕರಣ ಹೆಚ್ಚಾಗಿ, ಕಾರ್ಮಿಕರ ಶೋಷಣೆ ಇಮ್ಮಡಿಗೊಂಡಿದೆ. ಅಷ್ಟೆ ಅಲ್ಲದೆ ಜನರ ಬದಕಿನ ಮೇಲೆ ಆಕ್ರಮಣಗಳು ದಿನದಿಂದ ದಿನಕ್ಕೆ ಮುಮ್ಮಡಿಗೊಂಡಿದೆ. ಭೂಮಿ, ಮನೆ, ಶಿಕ್ಷಣ, ಆರೋಗ್ಯ ಹಾಗೂ ಮೂಲಭೂತ ಪ್ರಶ್ನೆಗಳು ಕಡೆಗಣಿಸಲ್ಪಟ್ಟಿವೆ.

ದಲಿತರು ಕೃಷಿಯಿಂದಲೂ ಆಚೆಗೆ

ಒಂದು ಅಂದಾಜಿನಂತೆ ದಲಿತರಲ್ಲಿ ಸಣ್ಣ ಪುಟ್ಟ ಭೂಮಿ ಹೊಂದಿರುವವರು 2011 ರಲ್ಲಿ ಶೇ.20 ರಷ್ಟು ವ್ಯವಸಾಯ ಮಾಡುತ್ತಿದ್ದರು. ಆದರೀಗ 2014 ರಲ್ಲಿ ಕೇವಲ ಶೇ.14.6 ರಷ್ಟು ಮಾತ್ರ ವ್ಯವಸಾಯದಲ್ಲಿ ತೊಡಗಿಸಿಕೊಂಡಿದ್ದಾರೆ. ಉಳಿದವರು ಬೇಸಾಯದ ಭೂಮಿ ಇದ್ದರೂ ಸಹ, ಬೆಳೆ ಬೆಳೆಯಲು ಸಾದ್ಯವಾಗುತ್ತಿಲ್ಲ. ಏಕೆ–ಂದರೆ, ವ್ಯವಸಾಯಕ್ಕೆ ಅಗತ್ಯವಿರುವ ಸಾಮಾಗ್ರಿಗಳ ಬೆಲೆ ಗಗನ ಕುಸುಮವಾಗಿರುವುದೇ ಈ ದುಸ್ಥಿತಿಗೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಗೊತ್ತಾಗುವ ಅಂಶವೆಂದರೆ, ದಲಿತರ ಹಾಗೂ ದಲಿತೇತರರ ಮಧ್ಯೆ ಇರುವ ಆರ್ಥಿಕ ಅಸಮಾನತೆ ಬೆಳೆಯುತ್ತಿದೆ. ಇದರ ಜೊತೆಯಲ್ಲಿಯೇ, ಸಾಮಾಜಿಕವಾಗಿ ಅಸ್ಪೃಶ್ಯತೆ ಹಾಗೂ ಜಾತಿತಾರತಮ್ಯದಿಂದ ದಲಿತರು ದಮನಕ್ಕೆ ಈಡಾಗಿದ್ದಾರೆ. ಒಂದು ಕಡೆ ಆರ್ಥಿಕ ಶೋಷಣೆ ಹಾಗೂ ಜಾತಿದಮನಕ್ಕೆ ಸಿಕ್ಕಿ ನರಳುತ್ತಿರುವ ಇವರನ್ನು ಸಂಘಟಿಸುವ ಜವಾಬ್ದಾರಿ ಕಮ್ಯೂನಿಸ್ಟರಾದ ನಮ್ಮ ಮೇಲಿರುವ ಪ್ರಮುಖವಾದ ಕೆಲಸವಾಗಿದೆ ಎಂದು ಕಾಂ. ಪ್ರಕಾಶ್ ಕಾರಟ್ ಪಕ್ಷದ ನಿಲುವನ್ನು ನೆರೆದಿದ್ದ ಪ್ರತಿನಿಧಿಗಳಿಗೆ ಮನಮುಟ್ಟುವಂತೆ ತಿಳಿಸಿದರು.


ಮೂಗಿಗೆ ತುಪ್ಪ

ದಲಿತರ ಸಬಲೀಕರಣದ ದೃಷ್ಟಿಯಿಂದ ಸಂವಿಧಾನ ಬದ್ಧವಾಗಿರುವ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ವಿಫಲವಾಗಿರುವ ಸರ್ಕಾರಗಳು, ಮೂಗಿಗೆ ತುಪ್ಪ ಸವರುವಂತೆ ಅಲ್ಪ ಸ್ವಲ್ಪ ಅನುದಾನಗಳ ಯೋಜನೆಗಳನ್ನು ರೂಪಿಸಿರುತ್ತಾರೆ. ಆದರೆ ಅವುಗಳ ಜಾರಿಯಲ್ಲಿ ಆಳುವ ವರ್ಗಕ್ಕೆ ನಿಶ್ಚಿತತೆ ದೃಢತೆ ಇರುವುದಿಲ್ಲ. ಆ ಸಂದರ್ಭದಲ್ಲಿ ನಮ್ಮ ಸಂಘಟನೆಗಳು ಮಧ್ಯಪ್ರವೇಶ ಮಾಡುವ ಮೂಲಕ ಆ ಶೋಷಿತ ಹಾಗೂ ದಮನಕ್ಕೆ ತುತ್ತಾದವರಿಗೆ ತಲುಪದಂತೆ ಮಾಡಬೇಕಾಗಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕಾಯಿದೆ ಯುಪಿಎ ಸರ್ಕಾರವಿದ್ದಾಗ ಪಾರ್ಲಿಮೆಂಟಿನಲ್ಲಿ ನಮ್ಮ ಪಕ್ಷದ ಮಧ್ಯಪ್ರವೇಶದಿಂದ ಅನುಷ್ಠಾನಕ್ಕೆ ಬಂದಿತು. ಅದರಂತೆ 100 ದಿನಗಳ ಉದ್ಯೋಗ ಖಾತ್ರಿ ಜಾರಿಗೆ ಬಂದಿತು. ಅದರಿಂದ ಈ ವರ್ಗಕ್ಕೆ ಅದು ಹೆಚ್ಚು ಅನುಕೂಲವಾಯಿತು ಕೂಡ, ಆದರೆ ಅದನ್ನು 200 ದಿನಗಳಿಗೆ ಹೆಚ್ಚಿಸುವಂತೆ ಹಾಗೂ ರೂ. 300 ದಿನಕ್ಕೆ ಸಂಭಾವನೆ ಕೊಡುವಂತೆ ಒತ್ತಾಯ ತರಬೇಕಾಗಿದೆ.


ಕರ್ನಾಟಕದ ಪ್ರತಿನಿಧಿಗಳು

ಇನ್ನು ಪರಿಶಿಷ್ಟ–ಜಾತಿ/ಪರಿಶಿಷ್ಟ ಪಂಗಡದವರಿಗೆ ಪ್ರಸ್ತುತವಿರುವ ವಿಶೇಷ ಘಟಕ ಯೋಜನೆ – ಎಸ್‌ಸಿಎಸ್‌ಪಿ ಉಪಯೋಜನೆಗಳ ಜಾರಿಯ ಬಗ್ಗೆ ಇಲ್ಲಿ ಚರ್ಚೆಯಾಗಿದೆ. ಆದರೆ ಮೋದಿ ಸರ್ಕಾರವು ಯೋಜನಾ ಆಯೋಗವನ್ನೇ ರದ್ದುಪಡಿಸಲು ಯೋಜನೆ ರೂಪಿಸಿದ್ದಾರೆ ಎಂದರು.

ಮತ್ತೆ ಈ ಸಮಾವೇಶ ದಲ್ಲಿನ ಪ್ರತಿನಿಧಿಗಳು ಗಂಭೀರ ವಾಗಿ ಅರ್ಥೈಸಿಕೊಳ್ಳಬೇಕಾದ ಮತ್ತೊಂದು ಅಂಶವೆಂದರೆ, ಬಿಜೆಪಿ ಆಡಳಿತವು ಮೋದಿಯ ಪ್ರಧಾನಮಂತ್ರಿ ನೇತೃತ್ವದಲ್ಲಿ ಆರ್‌ಎಸ್‌ಎಸ್‌ನ ಸಿದ್ಧಾಂತ ವನ್ನು ಸರ್ಕಾರದ ದೈನಂದಿನ ಕಾರ್ಯ ಕ್ರಮಗಳಲ್ಲಿ ಅಳವಡಿಸಿ ಕೊಳ್ಳುತ್ತಿದೆ. ಕೋಮು ಗಲಭೆಗಳನ್ನು ಸೃಷ್ಟಿಸುತ್ತಿದೆ. ಈ ಸಂದರ್ಭದಲ್ಲಿ ದಲಿತರನ್ನು ಓಲೈಸಿಕೊಂಡು ಮುಸ್ಲಿಂ ಜನಾಂಗದ ವಿರುದ್ಧ ಎತ್ತಿಕಟ್ಟುತ್ತಿದೆ. ನೀವು ಹಿಂದುಗಳು ಎಂದು ದಲಿತರನ್ನು ಪ್ರಚೋದಿಸಿ ಹಿಂದುತ್ವ ಸಿದ್ಧಾಂತವನ್ನು ಈ ಸಮುದಾಯದ ಮಧ್ಯೆ ಹರಡಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ವಿರುದ್ಧ ಛೂ ಬಿಡುತ್ತಿದೆ. ಈಗಾಗಲೇ, ಮುಜಾಪರ್ ಗಲಭೆ, ಕರ್ನಾಟಕದ ಮಂಗಳೂರು ಗಲಭೆ ಹಾಗೂ ಉತ್ತರ ಪ್ರದೇಶ, ಮಧ್ಯಪ್ರದೇಶ ರಾಜ್ಯಗಳಲ್ಲಿ ಈ ಕೆಲಸಕ್ಕೆ ಕೈಹಾಕಿರುವುದು ಸಾಕ್ಷಿ ಸಮೇತ ಸಾಬೀತಾಗಿದೆ. ಇದು ಆರ್‌ಎಸ್‌ಎಸ್‌ನ ಸಾಮಾಜಿಕ ಅಜೆಂಡಾ ವಾಗಿದೆ. ದಲಿತರನ್ನು ಈ ನಿಟ್ಟಿನಲ್ಲಿ ಎಚ್ಚರಿಸಿ, ಕೋಮುವಾದದ ಅಪಾಯಗಳನ್ನು ನಾವು ತಿಳಿಸಬೇಕಾಗಿದೆ ಎಂದು ಕಾಂ. ಪ್ರಕಾಶ್ ಕಾರಟ್ ತಿಳಿಸಿದರು.


ಕಾಂ. ಗೋಪಾಲಕೃಷ್ಣ ಅರಳಹಳ್ಳಿ ಮಾತನಾಡುತ್ತಿರುವುದು

‘ದಲಿತರೆಂದರೆ–ಸಾಮಾಜಿಕವಾಗಿ ಜಾತಿದಮನಕ್ಕೆ ಒಳಪಟ್ಟವರು’

ದಲಿತರೆಂದರೆ – ಸಾಮಾಜಿಕವಾಗಿ ಜಾತಿದಮನಕ್ಕೆ ಒಳಪಟ್ಟವರು ಎಂಬುದನ್ನು ಸರಿಯಾಗಿ ಅರಿಯಬೇಕೆಂದು ಪ್ರಕಾಶ್ ಕಾರಟ್ ಸ್ಪಷ್ಟವಾಗಿ ಹೇಳಿದರು.

ಈ ‘ದಲಿತ ಶೋಷಣಾ ಮುಕ್ತಿ ವೇದಿಕೆ’ಯ ಮೂಲ ಉದ್ದೇಶಗಳಲ್ಲಿ – ಪ್ರಮುಖವಾದದ್ದು, ಇಲ್ಲಿಯವರೆಗೆ ಸಾಮಾಜಿಕ ದಮನ, ಜಾತಿಯ ತಾರತಮ್ಯದ ಬಗ್ಗೆ ಹೋರಾಡಿದ ಹಲವಾರು ಪ್ರಗತಿಪರರಾದ ಪ್ರಮುಖವಾಗಿ ಡಾ| ಬಿ.ಆರ್. ಅಂಬೇಡ್ಕರ್, ಬುದ್ಧ, ಬಸವಣ್ಣ, ಪೆರಿಯಾರ್ ರಾಮಸ್ವಾಮಿ, ನಾರಾಯಣ ಗುರು ಇವರ ಅನುಯಾಯಿಗಳನ್ನು ಈ ವೇದಿಕೆಯಡಿಯಲ್ಲಿ ಕೆಲಸ ಮಾಡಲು ಆಸಕ್ತಿ ಇದ್ದರೆ, ಅವರನ್ನೂ ಒಳಗೊಂಡಂತೆ ನಮ್ಮ ಸಾಮೂಹಿಕ ಹಾಗೂ ವರ್ಗ ಸಂಘಟನೆಗಳಲ್ಲಿರುವ ದಲಿತರು, ದಲಿತರು–ದಲಿತೇತರರನ್ನೂ ಈ ಚಳುವಳಿಯಡಿಯಲ್ಲಿ ಜೊತೆಗೂಡಿಸಲು ಸಾಧ್ಯವಾಗಬೇಕೆಂದರು.

ಕೊನೆಯದಾಗಿ, ಸಿಪಿಐ(ಎಂ) ಪಕ್ಷದ ಕಾರ್ಯಕ್ರಮ ಪ್ರಸ್ತಾಪಿಸಿರುವಂತೆ, ಜಾತಿ ಪದ್ಧತಿಯನ್ನು ಹೊಗಲಾಡಿಸದೆ, ದಲಿತರಿಗೆ ಸ್ವಾತಂತ್ರ್ಯವೆಂಬುದು ಬರಿಯ ಮಾತಾಗುತ್ತದೆ. ದಲಿತರಿಗೆ ಸ್ವಾತಂತ್ರ್ಯ ಹಾಗೂ ಸಮಾನತೆ ಎಂದರೆ ಆರ್ಥಿಕ, ಸಾಮಾಜಿಕ ಹಾಗೂ ನಿಜವಾದ ರಾಜಕೀಯ ಸಮಾನತೆ ಎಂಬರ್ಥ ಎಂದರು. ನಮ್ಮ ನಿಜವಾದ ಸಮಾಜವಾದದ ಗುರಿ ತಲುಪಲು, ಮೊದಲು ಜನತಾ ಪ್ರಜಾಪ್ರಭುತ್ವದ ಕಾಂತ್ರಿಯ ಮುಖ್ಯವಾಹಿನಿಯ ಚಳುವಳಿಗೆ ದಲಿತರನ್ನೂ ಸೆಳೆಯ ಬೇಕೆಂದ–ರೆ, ಅವರಿಗೆ ನಿಜವಾದ ಸ್ವಾತಂತ್ರ್ಯ, ಸಮಾನತೆಯನ್ನು ಖಾತ್ರಿಪಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಪಕ್ಷದ ಎಲ್ಲ ಸಮಿತಿಗಳು ಕಾರ್ಯ ಪ್ರವೃತ್ತರಾಗಬೇಕು.

ಸಂವಿಧಾನದ ಅಧಿವೇಶನ ದಲ್ಲಿ, ಸಂವಿಧಾನವನ್ನು ರಾಷ್ಟ್ರಕ್ಕೆ ಅರ್ಪಿಸುವ ಮೊದಲು ಸಂವಿಧಾನ ರಚನಾ ಸಭೆಯಲ್ಲಿ ಡಾ| ಬಿ.ಆರ್. ಅಂಬೇಡ್ಕರ್ ರವರು ಹೇಳಿದ ಮಾತುಗಳು ಇಂದಿಗೂ ಪ್ರಸ್ತುತವಿದೆ ಎಂದು ನೆನಪಿಸಿದರು; “ನಾವು 26 ಜನವರಿ 1950 ರಿಂದ ಸಂವಿಧಾನವನ್ನು ಆಚರಣೆಗೆ ತರುತ್ತಿದ್ದೇವೆ. ಇಲ್ಲಿರುವ ವೈರುಧ್ಯಗಳನ್ನು ಅರ್ಥಮಾಡಿಕೊಳ್ಳಬೇಕು. ರಾಜಕೀಯದಲ್ಲಿ ‘ಒಬ್ಬ ಮನುಷ್ಯನಿಗೆ – ಒಂದು ಮತ’ದ ರಾಜಕೀಯ ಹಕ್ಕಿನ ಸಮಾನತೆಯನ್ನು ಒದಗಿಸಿದ್ದೇವೆ. ಆದರೆ ಆರ್ಥಿಕ ಹಾಗೂ ಸಾಮಾಜಿಕವಾಗಿ ‘ಒಬ್ಬ ಮನುಷ್ಯ ಒಂದು ಮೌಲ್ಯ’ದ ಸಮಾನತೆಯನ್ನು ಒದಗಿಸಲು ಸಾರ್ಥವಾಗಿಲ್ಲ. ಈ ವೈರುಧ್ಯಗಳಿಂದ ನಾವು ಆದಷ್ಟು ಬೇಗ ಬಗೆಹರಿಸಿಕೊಂಡು ಈ ಜನರಿಗೆ ಆರ್ಥಿಕ – ಸಾಮಾಜಿಕ ಸಮಾನತೆಯನ್ನು ಒದಗಿಸಲೇಬೇಕು. ಇಲ್ಲದಿದ್ದರೆ, ಅಸಮಾನತೆಯಿಂದ ಶೋಷಣೆಗೆ ತುಳಿತಕ್ಕೆ ಸಿಕ್ಕಿ ಬಳಲುತ್ತಿರುವ ಈ ಜನರು “ನಾವು ನಿರ್ಮಿಸಿರುವ” ಪ್ರಜಾಪ್ರಭುತ್ವದ ವ್ಯವಸ್ಥೆಯನ್ನೇ ಧ್ವಂಸಗೊಳಿಸುವ ಶಕ್ತಿ ಅವರಿಗಿದೆ.” ಎಂಬ ಅಂಬೇಡ್ಕರ್ ರವರ ಮಾತನ್ನು ನೆನಪಿಸಿಕೊಟ್ಟ ಕಾಂ. ಪ್ರಕಾಶ್ ಕಾರಟ್ ರವರು ಈ ದ.ಶೋ. ಮು.ಮಂಚ್ ವೇದಿಕೆಯ ಘೋಷಣೆಗಳಾದ, ‘ಐಕ್ಯತೆ, ಸಂಘಟನೆ, ಹಾಗೂ ಹೋರಾಟ’ದಿಂದ ದಲಿತರಿಗೆ ಆರ್ಥಿಕ ಬಲವರ್ಧನೆ, ಸಾಮಾಜಿಕ ನ್ಯಾಯ ಮತ್ತು ಸಮಾನತೆ ಒದಗಿಸುವುದು ಸೂಕ್ತವಾದ ಘೋಷಣೆಯಾಗಿದೆ – ಈ ನಿಟ್ಟಿನಲ್ಲಿ ಈ ಸಮಾವೇಶ ಐತಿಹಾಸಿಕವಾದದ್ದು, ಹಾಗೂ ಶೋಷಣಾಮುಕ್ತ ಸಮಾಜದ ಗುರಿ ತಲುಪಲು ಆಶಾಭಾವನೆಯಿಂದ ಕೂಡಿದ್ದು ಆಗಿದೆ ಎಂದು ತಮ್ಮ ಸಮಾರೋಪ ಭಾಷಣ ಮುಗಿಸಿದರು.

ಸಮಾವೇಶ ಅಂಗೀಕರಿಸಿದ ನಿರ್ಣಯಗಳು

1. ದಲಿತರ ಸಮಸ್ಯೆಗಳನ್ನು ಚರ್ಚಿಸುವ ಸಲುವಾಗಿ ಸಂಸತ್ತಿನ ವಿಶೇಷ ಅಧಿವೇಶವನ್ನು ಕರೆಯಬೇಕು.
2. ಖಾಸಗೀ ಕ್ಷೇತ್ರದಲ್ಲಿಯೂ ‘ಮೀಸಲಾತಿ’ ಯನ್ನು ಅಗತ್ಯವಾಗಿ ಒದಗಿಸಲೇಬೇಕು.
3. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ‘ದೌರ್ಜನ್ಯ ತಡೆ ಕಾಯಿದೆ’ ಬಲವರ್ಧನೆಗೊಳಿಸಿ ಸೂಕ್ತ ತಿದ್ದುಪಡಿಗಳನ್ನು ತರಬೇಕು.
4. ಪರಿಶಿಷ್ಟ ಜಾತಿ ಉಪಯೋಜನೆಯ ಸೂಕ್ತ ಅನುಷ್ಠಾನಕ್ಕಾಗಿ ‘ಸಂವಿಧಾನ ಬದ್ಧ ಶಾಸನ’ವನ್ನು ರಚಿಸಬೇಕು.
5. ಮಹಾತ್ಮಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು (ಎಂ.ಜಿ.ಎನ್.ಆರ್.ಇ.ಜಿ.ಎ)– ಬಲವರ್ಧನೆ ಗೊಳಿಸಬೇಕು.
6. ದಲಿತ ಮಹಿಳೆಯರ ಸಮಸ್ಯೆಗಳನ್ನು ನಿವಾರಿಸಲು ವಿಶೇಷ ಕ್ರಮಗಳನ್ನು ರೂಪಿಸಬೇಕು.
7. ಕಾಪ್ ಪಂಚಾಯತ್ ಅನ್ನು ನಿರ್ಮೂಲನೆಗೊಳಿಸ ಬೇಕು.
8. ಕೃಷಿ, ಮನೆ ಮತ್ತು ಜೀವನಕ್ಕೆ ಅಗತ್ಯವಾದ ಭೂಮಿಯನ್ನು ದಲಿತರಿಗೆ ಒದಗಿಸಬೇಕು.
9. ಉದ್ಯೋಗ ಮತ್ತು ನೇಮಕಾತಿ ವಿಷಯಗಳಿಗೆ ಸಂಬಂಧಪಟ್ಟಂತೆ, ದಲಿತ ವಿದ್ಯಾರ್ಥಿ ಹಾಗೂ ನಿರುದ್ಯೋಗಿಗಳಿಗೆ ಕೌಶಲ್ಯ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕು.
10. ದಲಿತರು ಅಂತರ್ ಜಾತಿಯ ವಿವಾಹವಾದರೆ ವಿಶೇಷ ಭತ್ಯೆಗಳು ಮತ್ತು ಸೌಲಭ್ಯ ಒದಗಿಸಬೇಕು.

ನೂತನ ಅಖಿಲ ಭಾರತ ಸಮಿತಿ

ಸಮಾವೇಶವು ಒಟ್ಟು 27 ಜನರ ಅಖಿಲ ಭಾರತ ಸಮಿತಿಯನ್ನು ಚುನಾಯಿಸಿತು. ಸಮಿತಿಯ ಸಂಚಾಲಕರಾಗಿ ಕೇರಳದ ಸಂಗಾತಿ ರಾಜೇಂದ್ರನ್ ಅವರು ಚುನಾಯಿತರಾದರು. ಕರ್ನಾಟಕದಿಂದ ಗೋಪಾಲಕೃಷ್ಣ ಅರಳಹಳ್ಳಿಯವರು ಈ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಕರ್ನಾಟಕದಿಂದ ಪಾಲ್ಗೊಂಡ ಪ್ರತಿನಿಧಿಗಳು

ಕಾಂ.ಮಾರುತಿ ಮಾನ್ಪಡೆ, ಕಾಂ. ಗೋಪಾಲಕೃಷ್ಣ ಅರಳಹಳ್ಳಿ, ಕಾಂ. ಎನ್. ನಾಗರಾಜ್, ಕಾಂ. ಜಿ. ಚಂದ್ರಶೇಖರ್, ನಾಗರಾಜ (ಬಾಗೇಪಲ್ಲಿ), ಕಾಂ. ಕೃಷ್ಣ (ಮಂಡ್ಯ), ಕಾಂ. ಎಲ್ಲಪ್ಪ (ಕೋಲಾರ), ಕಾಂ. ಪೃಥ್ವಿ(ಹಾಸನ), ಕಾಂ. ಲಿಂಗಪ್ಪ ನಂತೂರು(ದಕ್ಷಿಣ ಕನ್ನಡ) ಕರ್ನಾಟಕ ರಾಜ್ಯದಿಂದ ಒಟ್ಟು ಒಂಬತ್ತು ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಬೆಂಗಳೂರು ಉತ್ತರ ಜಿಲ್ಲಾ ಸಮ್ಮೇಳನವು ನವೆಂಬರ್ 28, ರಿಂದ 30, 2014 ರ ವರೆಗೆ ನಡೆಯಿತು. ಈ ಸಮ್ಮೇಳನವು ತನ್ನ ವ್ಯಾಪ್ತಿಯ ಪ್ರದೇಶದ ಜನ ಜೀವನದ ಕುರಿತು ಆಳವಾದ ಚರ್ಚೆಯನ್ನು ನಡೆಸಿದೆ. ಜನರ ಬದುಕಿನ ಸಮಸ್ಯೆಗಳ ಆಧಾರದಲ್ಲಿ ಚಳುವಳಿಯನ್ನು ಬಲಪಡಿಸಲು ನಿರ್ಧರಿಸಿರುವ ಸಮ್ಮೇಳನದ ವರದಿಯ ಪ್ರಮುಖ ಸಾರ ಮತ್ತು ಕಲಾಪಗಳ ವಿವರ ಹೀಗಿದೆ.

ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಸಮ್ಮೇಳನ

ತತ್ತರಗೊಂಡ ಜನರ ಬದುಕಿನ ಜಂಜಡಗಳಿಗೆ ಉತ್ತರ ಹುಡುಕುವ ಯತ್ನ

ಬೆಂಗಳೂರು ಅಂತರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ನಗರವಾಗಿದೆ. ಬೆಂಗಳೂರು ಮಹಾನಗರ ಪಾಲಿಕೆ 198 ವಾರ್ಡ್‌ಗಳನ್ನು ಹೊಂದಿದೆ. ದೇವನಹಳ್ಳಿಯಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ನಮ್ಮ ಮೆಟ್ರೋ ಕಾರ್ಯನಿರ್ವಹಿಸುತ್ತಿದೆ. ಮೆಟ್ರೋ, ಓರಾಯನ್, ಗೋಪಾಲನ್, ಫೋರಂ ಹೀಗೆ ನೂರಾರು ವ್ಯಾಪಾರ ಮಾಲ್‌ಗಳು ಕಾರ್ಯನಿರ್ವಹಿಸುತ್ತಿವೆ.

ಜಾಗತಿಕ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಬೆಂಗಳೂರು ಪ್ರಮುಖ ಕೇಂದ್ರವಾಗಿದೆ. ಬೆಂಗಳೂರು ಪೂರ್ವ ತಾಲ್ಲೂಕು ಐಟಿ ಬೆಳವಣಿಗೆಯ ಪ್ರಮುಖ ಪ್ರದೇಶವಾಗಿದೆ. 1984ರಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆ ಆರಂಭವಾಗಿ, 1992ರಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆಯಾಯಿತು. ಫಾರ್ಚ್ಯೂನ್ 500 ಸಂಸ್ಥೆಗಳ ಪೈಕಿ ಎಲ್ಲಾ ಸಂಸ್ಥೆಗಳೂ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇವೆಲ್ಲಾ ಹೊರಗುತ್ತಿಗೆ ಸೇವೆಯನ್ನು ಪಡೆಯುತ್ತಿವೆ. 2012ನೇ ಸಾಲಿನಲ್ಲಿ 2,250 ಸಂಸ್ಥೆಗಳಿಂದ ರೂ 82,000 ಕೋಟಿ ಮೊತ್ತದ ತಂತ್ರಾಂಶಗಳ ರಫ್ತು ವ್ಯವಹಾರವನ್ನು ಸಾಧಿಸಲಾಗಿದೆ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ ಮಾಹಿತಿ ತಂತ್ರಜ್ಞಾನ ಹೂಡಿಕೆ ವಲಯದ 100 ಎಕರೆ ಭೂಪ್ರದೇಶದಲ್ಲಿ ಮೊಬೈಲ್ ಹ್ಯಾಂಡ್ ಸೆಟ್ ಉತ್ಪಾದನೆ ಮತ್ತು ಜೋಡಣಾ ಕೇಂದ್ರ ಸ್ಥಾಪಿಸಲು ನಿರ್ಧರಿಸಲಾಗಿದೆ.


ಸಮಗ್ರ ಕೃಷಿ ವ್ಯಾಪಾರ ನೀತಿ 2011ರ ಅನ್ವಯ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ, ಬೃಹತ್ ಕೃಷಿ ಆಧಾರಿತ ಉದ್ಯಮಗಳಿಗೆ ಮತ್ತು ಕೃಷಿಮೂಲ ಸೌಕರ್ಯಗಳಿಗೆ ಮುದ್ರಾಂಶ ಶುಲ್ಕ ವಿನಾಯಿತಿ ಮತ್ತು ನೊಂದಣಿ ಸೌಲಭ್ಯವನ್ನು ಒದಗಿಸಲಾಗಿದೆ. ಕೃಷಿ ವ್ಯವಹಾರಗಳನ್ನು ಕೈಗೊಳ್ಳುವ ರಫ್ತು ಘಟಕಗಳಿಗೆ ಪ್ರವೇಶ ತೆರಿಗೆ ವಿನಾಯಿತಿ ಕೃಷಿ ಮಾರುಕಟ್ಟೆ ಸೆಸ್‌ನಲ್ಲಿ ಶುಲ್ಕ ವಿನಾಯಿತಿ ನೀಡಲಾಗಿದೆ. ಈ ನೀತಿಯನ್ವಯ ಕೃಷಿ ಆಧಾರಿತ ಮತ್ತು ಕೃಷಿ ಮೂಲ ಸೌಕರ್ಯ ಅಭಿವೃದ್ಧಿ ಪಡಿಸುವ ಬೃಹತ್ ಉದ್ಯಮಗಳಿಗೆ ಮೂಲಧಾರಿತ ತೆರಿಗೆಯಡಿ ಬಡ್ಡಿರಹಿತ ಸಾಲ, ವಿದ್ಯುತ್ ಶುಲ್ಕಗಳಿಗೆ ವಿನಾಯಿತಿ ನೀಡಲಾಗಿದೆ. ಎ.ಟಿ. ರಾಮಸ್ವಾಮಿ ವರದಿ ಪ್ರಕಾರ ಬೆಂಗಳೂರು ನಗರದಲ್ಲಿ 40,000 ಕ್ಕೂ ಹೆಚ್ಚು ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿರುವುದೆಲ್ಲ ಜಗಜ್ಜಾಹೀರಾದ ವಿಷಯ.

ಕೈಗಾರಿಕೆ

ಪಕ್ಷದ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ವ್ಯಾಪ್ತಿಯು ಬೆಂಗಳೂರು ಪೂರ್ವ, ಯಲಹಂಕ, ಯಶವಂತಪುರ, ರಾಜಾಜಿನಗರ, ಕಾಮಾಕ್ಷಿಪಾಳ್ಯ, ಪೀಣ್ಯ ಕೈಗಾರಿಕಾ ಪ್ರದೇಶಗಳನ್ನು ಒಳಗೊಂಡಿದೆ. ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಘಟಕಗಳು ಹೆಚ್ಚಾಗಿವೆ. ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ದಿಮೆಗಳಾದ ಬಿಇಎಲ್, ಐಟಿಐ, ಹೆಚ್‌ಎಂಟಿ, ಬಿಹೆಚ್‌ಇಎಲ್, ಬಿಇಎಂಎಲ್, ಕೆಎಸ್‌ಡಿಎಲ್ ಹಿಂದುಸ್ಥಾನ ಏರೋನಾಟಿಕ್ಸ್ ಮುಂತಾದ ಹಲವು ಬೃಹತ್ ಕೈಗಾರಿಕೆಗಳೂ ಈ ಪ್ರದೇಶದಲ್ಲಿವೆ.


ಸಮ್ಮೇಳನದ ಅಂಗವಾಗಿ ಬಹಿರಂಗ ಸಭೆಯಲ್ಲಿ ಮಾತನಾಡುತ್ತಿರುವ ವಿಜೆಕೆ ನಾಯರ್

ಬೆಂಗಳೂರು ನಗರದಲ್ಲಿನ ಸಾರ್ವಜನಿಕ ಉದ್ದಿಮೆಗಳು ಸರ್ಕಾರದ ನೀತಿಗಳಿಂದಾಗಿ ಮುಚ್ಚಿಹೋಗಿವೆ ಅಥವಾ ರೋಗಗ್ರಸ್ಥವಾಗಿವೆ. ಕೆಲವು ಪ್ರಮುಖ ಖಾಸಗಿ ಘನ ಕೈಗಾರಿಕೆಗಳು ಸರ್ಕಾರದ ನೀತಿಯನ್ನು ಬಳಸಿಕೊಂಡು ಹೊಸ ಬಂಡವಾಳ ಹೂಡಿಕೆಯ ಹೆಸರಲ್ಲಿ ನಗರದ ಹೊರ ವಲಯದ ಪ್ರದೇಶಗಳಲ್ಲಿ ಭೂಮಿಯನ್ನು ಪಡೆದು, ನಗರ ಕೇಂದ್ರದಲ್ಲಿದ್ದ ಕಾರ್ಖಾನೆಯ ಭೂಮಿಯನ್ನು ಅತಿ ಹೆಚ್ಚು ಲಾಭಕ್ಕೆ ಮಾರಾಟ ಮಾಡಿ ಬಂಡವಾಳ ಕ್ರೋಢಿಕರಿಸಿಕೊಂಡಿವೆ. ಹೀಗಾಗಿ ಹೊಸ ಬಂಡವಾಳ ಹೂಡಿಕೆ ಎಂಬ ಹೆಸರಲ್ಲಿ ದೊಡ್ಡ ದಂಧೆ ನಡೆದಿದೆ.


ಧ್ವಜಾರೋಹಣ ಮಾಡುತ್ತಿರುವುದು

ಏಷ್ಯಾದಲ್ಲೇ ಅತಿ ದೊಡ್ಡದಾದ ಸಣ್ಣ ಮತ್ತು ಮಧ್ಯಮ ಪ್ರಮಾಣದ ಬೃಹತ್ ಕೈಗಾರಿಕಾ ಪ್ರದೇಶ ಪೀಣ್ಯ ಈ ಜಿಲ್ಲೆಯಲ್ಲಿದೆ. 5000ಕ್ಕೂ ಹೆಚ್ಚು ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. 30 ಮಧ್ಯಮ ಕೈಗಾರಿಕೆಗಳು ಇವೆ. ಸರಿಸುಮಾರು 5 ಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ. ವಾರ್ಷಿಕ ವಹಿವಾಟು ಸರಿ ಸುಮಾರು ರೂ.15,000 ಕೋಟಿ ಇದೆ.

ಬೆಂಗಳೂರು ನಗರದಲ್ಲಿ ಸರ್ಕಾರದ ಅಂಕಿಅಂಶ 31–03–2011ರಂತೆ ಶಾಪ್ಸ್ ಮತ್ತು ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆ ಅಡಿಯಲ್ಲಿ 3,11,926 ಘಟಕಗಳಲ್ಲಿ 7,72,237. ಕಾರ್ಮಿಕರು, ಟೆಕ್ಸ್‌ಟೈಲ್–101, ಕೆಮಿಕಲ್–260, ಇಂಜಿನಿಯರಿಂಗ್–2594, ಇತರೆ–2765, ಒಟ್ಟು ಕೈಗಾರಿಕೆಗಳು 6594, ಕಂಪನಿಗಳು 7,32,982 ಕಾರ್ಯನಿರ್ವಹಿಸುತ್ತಿವೆ.

ಅಸಂಘಟಿತ ಕಾರ್ಮಿಕರ ಪರಿಸ್ಥಿತಿ

ಬೆಂಗಳೂರಿನ ಒಟ್ಟು ಜನಸಂಖ್ಯೆಯಲ್ಲಿ ಯಾವುದೇ ರಕ್ಷಣೆಯಿಲ್ಲದೆ, ಕೆಲಸದ ಭದ್ರತೆ ಇಲ್ಲದೆ ಅಮಾನವೀಯ ಶೋಷಣೆಗೆ ಒಳಗಾಗಿರುವ ಅಸಂಘಟಿತ ಕಾರ್ಮಿಕರ ಸಂಖ್ಯೆ ದೊಡ್ಡಪ್ರಮಾಣದಲ್ಲಿ ಬೆಳೆಯುತ್ತಿದೆ. ಸರ್ಕಾರಗಳ ಬಂಡವಾಳಪರ ನೀತಿಗಳಿಂದಾಗಿ ಸಂಘಟಿತ ವಲಯದ ಕೈಗಾರಿಕೆಗಳಲ್ಲೂ ಕೂಡ ಅಸಂಘಟಿತ ರೂಪದ ಕೆಲಸಗಾರರ ಸಂಖ್ಯೆ ಹೆಚ್ಚಾಗುತಿದೆ. ವಿದೇಶೀ ಬಂಡವಾಳಕ್ಕೆ ಆದ್ಯತೆಯನ್ನು ಕಿರು ಹಾಗು ಸಣ್ಣ ವ್ಯಾಪಾರಗಳಲ್ಲಿಯೂ ನೀಡುತ್ತಿರುವ ಕಾರಣ ಹಲವು ಗುಡಿಕೈಗಾರಿಕೆಗಳು, ವ್ಯಾಪಾರ ಸಂಸ್ಥೆಗಳು ನಶಿಸಿಹೋಗುತ್ತಿವೆ. ಪ್ರಮುಖವಾಗಿ ಚಿಲ್ಲರೆ ವ್ಯಾಪಾರ, ರೇಷ್ಮೆ, ಮತ್ತಿತರೆ ಕೈಗಾರಿಕೆಗಳು ಅಸ್ತಿತ್ವ ಕಳೆದುಕೊಂಡು ಈ ಕೈಗಾರಿಕೆಗಳ ಮೇಲೆ ಅವಲಂಬಿತವಾಗಿರುವ ಜನ ಕೆಲಸ ಕಳೆದುಕೊಳ್ಳುತ್ತಿದ್ದಾರೆ.

ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಹಾಗು ಹೊರ ರಾಜ್ಯಗಳಿಂದ ವಲಸೆ ಬಂದು ದೈಹಿಕ ದುಡಿಮೆಯಲ್ಲಿ ತೊಡಗಿಸಿಕೊಂಡಿರುವವರು, ನಾನಾ ವಲಯಗಳ ಅಸಂಘಟಿತ ಕಾರ್ಮಿಕರು ಯಾವುದೇ ಕನಿಷ್ಟ ನಾಗರೀಕ ಸೌಲಭ್ಯಗಳಿಲ್ಲದೆ, ಬೀದಿಬದಿಯಲ್ಲಿ ಜೀವನ ಮಾಡುವವರ ಸಂ–ಖ್ಯೆಯೂ ಗಣನೀಯವಾಗಿ ಹೆಚ್ಚಾಗುತ್ತಿದೆ.

ನಾಗರೀಕ ಸಮಸ್ಯೆಗಳು ಹಾಗೂ ಕಸ ವಿಲೇವಾರಿ ಪ್ರಶ್ನೆ

ನಗರದ ಕಸ ವಿಲೇವಾರಿ ಗುತ್ತಿಗೆಯೇ ಒಂದು ದೊಡ್ಡ ಲಾಭಿಯಾಗಿದ್ದು ನೂರಾರು ಕೋಟಿ ರೂಪಾಯಿಗಳ ಲೂಟಿ ನಡೆದಿದೆ. ಬೆಂಗಳೂರು ಗಾರ್ಬೇಜ್ ಸಿಟಿಯಾಗಿದ್ದು, ರೋಗ ರುಜಿನಗಳ ಕೇಂದ್ರವಾಗಿದೆ. ರಸ್ತೆಗಳ ನಿರ್ವಹಣೆ ಎಂಬುದೇ ಇಲ್ಲವಾಗಿದೆ.

ಬಿಬಿಎಂಪಿಯನ್ನು 294 ಆರೋಗ್ಯ ವಾರ್ಡ್‌ಗಳಾಗಿ ವಿಂಗಡಿಸಲಾಗಿತ್ತು. ಈ ಹಿಂದೆ 112 ಆರೋಗ್ಯ ವಾರ್ಡ್‌ಗಳ ಕಸಗಳನ್ನು ಬಿಬಿಎಂಪಿಯ ಆರೋಗ್ಯ ಶಾಖೆಯು ನಿರ್ವಹಿಸುತ್ತಿತ್ತು ಮತ್ತು 182 ಆರೋಗ್ಯ ವಾರ್ಡ್‌ಗಳ ಕಸ ನಿರ್ವಹಣೆಯನ್ನು ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ ವಹಿಸಲಾಗಿತ್ತು. ಒಂದೂವರೆ ವರ್ಷದಿಂದೀಚೆಗೆ ಕಸ ನಿರ್ವಹಣೆ ಕಾರ್ಯವನ್ನು ಬಿಬಿಎಂಪಿಯ ಕಾಮಗಾರಿ ಇಲಾಖೆಗೆ ವಹಿಸಲಾಗಿದ್ದು, ಸಮಸ್ಯೆ ಉಲ್ಬಣಗೊಂಡಿದೆ.

ಕುಡಿಯುವ ನೀರು

ನಗರದಲ್ಲಿ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸಲಾಗದ ಪರಿಸ್ಥಿತಿ ಇದೆ. ಕುಡಿಯುವ ನೀರನ್ನು ಗಂಗಾ ಕಲ್ಯಾಣ ಯೋಜನೆ ಹೆಸರಿನಲ್ಲಿ ಖಾಸಗೀಕರಣ ಮಾಡುತ್ತಿದ್ದು ನೀರಿಗೆ ಮೀಟರ್ ಅಳವಡಿಸುವ ಕೆಲಸವನ್ನು ಒಂದು ಕಡೆ ಮಾಡುತ್ತಾ, ಈಗಿರುವ ಸಾರ್ವಜನಿಕ ನಲ್ಲಿಗಳನ್ನು ಕಿತ್ತು ಹಾಕಿ, ಹಣ ಕೊಟ್ಟು ನೀರು ಖರೀದಿ ಮಾಡುವ ಪರಿಸ್ಥಿತಿಯನ್ನು ಜಲಮಂಡಳಿ ನಿರ್ಮಾಣ ಮಾಡಿದೆ. ನೀರಿನ ಬೆಲೆ ಏರಿಕೆಗಳ ವಿರುದ್ಧ ಹೋರಾಟಗಳು ನಡೆಯುತ್ತಿವೆ. ವಿಶ್ವ ಸಂಸ್ಥೆಯ ಮಾನದಂಡದ ಪ್ರಕಾರ ಪ್ರತಿದಿನ ಒಬ್ಬ ವ್ಯಕ್ತಿಗೆ 135 ಲೀಟರ್ ನೀರಿನ ಅಗತ್ಯವಿದೆ. 5 ಜನರು ಇರುವ ಕುಟುಂಬಕ್ಕೆ 675 ಲೀ. ನೀರಿನ ಅವಶ್ಯಕತೆ ಇದೆ. ಆದರೆ ಈಗ ಕೇವಲ 300 ಲೀ. ಪೂರೈಕೆಯಾಗುತ್ತಿದೆ. ಕೆಲವಡೆ 100 ಲೀ. ಸಹ ಸಿಗುವುದಿಲ್ಲ. ಕೇಂದ್ರ ಹಾಗು ರಾಜ್ಯ ಸರ್ಕಾರಗಳು ನೀರನ್ನು ಮಾರಾಟದ ಸರಕನ್ನಾಗಿ ಮಾಡಿವೆ. 'ಸಜಲ' ಹೆಸರಿನಲ್ಲಿ ಜನರ ಸುಲಿಗೆ ನಡೆದಿದೆ.

ಆರೋಗ್ಯ–ಶಿಕ್ಷಣ

ಸರ್ಕಾರಿ ಮತ್ತು ಬಿ.ಬಿ.ಎಂ.ಪಿ. ಆಸ್ಪತ್ರೆಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಆವ್ಯವಸ್ಥೆ ಜನರನ್ನು ಖಾಸಗೀ ಆಸ್ಪತ್ರೆಗಳಲ್ಲಿ ದುಬಾರಿ ಶುಲ್ಕ ತೆತ್ತು ಆರೋಗ್ಯ ಸೇವೆ ಪಡೆಯುವಂತೆ ಮಾಡಿದೆ. ತಂದೆ ತಾಯಂದಿರು ಉನ್ನತ ಮಟ್ಟದ ವಿದ್ಯಾಭ್ಯಾಸ ಪಡೆದಿದ್ದರೆ ಮಾತ್ರ ಮಕ್ಕಳಿಗೆ ಪ್ರವೇಶ ನೀಡುವ ಇಂಟರ್‌ನ್ಯಾಷನಲ್ ಹೆಸರಿನ ಶಾಲೆಗಳಿವೆ. ಕೆಲವು ಖಾಸಗಿ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಮಾತನಾಡುವ ಮಕ್ಕಳಿಗೆ ದಂಡ ವಿಧಿಸುವ ಪ್ರಕ್ರಿಯೆ ನಡೆಯುತ್ತಿದೆ. ಟ್ಯೂಷನ್ ಫೀ, ವಾಹನ ವಂತಿಗೆ ಹೆಸರಿನಲ್ಲಿ ವಿದ್ಯಾರ್ಥಿ ಪೋಷಕರಿಂದ ಹಗಲು ದರೋಡೆ ಮಾಡಲಾಗುತ್ತಿದೆ. ಪ್ರಶ್ನೆ ಮಾಡಿದ ಪೋಷಕರಿಗೆ ರೌಡಿಗಳಿಂದ ಬೆದರಿಸುವ, ಹಲ್ಲೆ ಮಾಡಿಸುವ ಗೂಂಡಾಗಿರಿ ವರ್ತನೆ ಖಾಸಗಿ ಶಾಲೆಗಳಲ್ಲಿ ನಡೆಯುತ್ತಿವೆ. ಶಾಲೆಯ ವಂತಿಗೆ ಕಟ್ಟಲು ಸಾಧ್ಯವಾಗದಿದ್ದಾಗ ಏನೂ ಅರಿಯದ ಮಕ್ಕಳನ್ನು ತರಗತಿಯಿಂದ ಹೊರಗೆ ಹಾಕುವ ಅಮಾನುಷ ಕೃತ್ಯಗಳೂ ನಡೆಯುತ್ತಿವೆ.

ಬಿ.ಬಿ.ಎಂ.ಪಿ. ಶಾಲೆಗಳಲ್ಲಿ ವಿದ್ಯಾರ್ಥಿಗಳ ಅನುಪಾತಕ್ಕೆ ಅಗತ್ಯವಿದ್ದಷ್ಟು ಶಿಕ್ಷಕರುಗಳ ಕೊರತೆ ಇದೆ. ಬಡ–ದಲಿತ–ಹಿಂದುಳಿದ ವರ್ಗದ ಮಕ್ಕಳೇ ಹೆಚ್ಚು ಅವಲಂಬಿತವಾಗಿರುವ ಸರ್ಕಾರಿ ಹಾಗೂ ಬಿ.ಬಿ.ಎಂ.ಪಿ ಶಾಲಾ–ಕಾಲೇಜುಗಳನ್ನು ಅಗತ್ಯ ಮೂಲಭೂತ ಸೌಲಭ್ಯಗಳೊಂದಿಗೆ ಉನ್ನತೀಕರಿಸಬೇಕಾಗಿದೆ. ಶಿಕ್ಷಣ ಹಕ್ಕು ಕಾಯ್ದೆ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಬಿಸಿಯೂಟ ಪೂರೈಕೆ ಅಸಮರ್ಪಕವಾಗಿದೆ. ಬೆಂಗಳೂರು ನಗರದಲ್ಲಿ ಇಸ್ಕಾನ್ ಹಾಗು ಅದಮ್ಯ ಚೇತನ ಎಂಬ ಖಾಸಗಿ ಧಾರ್ಮಿಕ ಮೂಲಭೂತವಾದಿ ಸಂಸ್ಥೆಗಳಿಗೆ ಬಿಸಿಯೂಟ ವಿತರಣೆಯನ್ನು

ವಹಿಸಲಾಗಿದೆ. ಈ ಸಂಸ್ಥೆಗಳು ಬಿಸಿಯೂಟವನ್ನು ಅಸಮರ್ಪಕವಾಗಿ ಪೂರೈಸುತ್ತಿವೆಯಲ್ಲದೆ, ಧರ್ಮ ಪ್ರಚಾರಕ್ಕೆ ಮತ್ತು ಶಾಲಾ ಮಕ್ಕಳ ಮೇಲೆ ಧಾರ್ಮಿಕ ಆಚರಣೆಗಳನ್ನು ಹೇರಲು ಶಾಲೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿವೆ. ನಗರದ ಹಲವು ಶಾಲೆಗಳಿಗೆ ಕಳಪೆ ಆಹಾರ ನೀಡಿರುವ ಕೃತ್ಯಗಳೂ ಬೆಳಕಿಗೆ ಬಂದಿವೆ. ಉನ್ನತ ಶಿಕ್ಷಣದ ವ್ಯಾಪಾರೀಕರಣಕ್ಕೆ ನಿಯಂತ್ರಣವಿಲ್ಲವಾಗಿದೆ. ಪಡಿತರ ವ್ಯವಸ್ಥೆಯಲ್ಲಿ ಜನ ಪಡಿತರ ಪಡೆಯಲು ನಾನಾ ಪಡಿಪಾಟಲು ಪಡಬೇಕಾಗಿದೆ.

ದಲಿತರ ಪರಿಸ್ಥಿತಿ ಹಾಗೂ ಜಾತಿ ತಾರತಮ್ಯ

ನಗರದ ಕೊಳಚೆ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನ ವಾಸ ಮಾಡುತ್ತಾರೆ. ಈ ಜನಕ್ಕೆ ಮೂಲಭೂತ ಸೌಕರ್ಯಗಳಿಲ್ಲ. ಸರ್ಕಾರದ ವಿಶೇಷ ಘಟಕ ಯೋಜನೆಯಲ್ಲಿ ಕೋಟ್ಯಾಂತರ ರೂ. ಹಣ ನಿಗದಿಗೊಳಿಸಿದ್ದರೂ ಈ ಯೋಜನೆಗಳು ಫಲಕಾರಿಯಾಗುತ್ತಿಲ್ಲ. ನಗರದಲ್ಲಿ 2011ರ ಜನಗಣತಿ ಪ್ರಕಾರ 11,98,385 ಪರಿಶಿಷ್ಟ ಜಾತಿಯವರಿದ್ದು, 1,90,239 ಪರಿಶಿಷ್ಟ ಪಂಗಡದ ಜನರಿದ್ದಾರೆ.

ದಲಿತರ ಮೇಲಿನ ದೌರ್ಜನ್ಯಗಳು ನಡೆಯುತ್ತಲೇ ಇವೆ. ನಗರದಲ್ಲಿ ಶೋಷಿತ ಜಾತಿಯವರಿಗೆ, ಮಾಂಸಹಾರಿಗಳಿಗೆ ಬಾಡಿಗೆ ಮನೆ ದೊರಕದ ಸ್ಥಿತಿ ನಿರ್ಮಾಣವಾಗಿದೆ. ಸರ್ಕಾರದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದೆ ತಾರತಮ್ಯ ಮಾಡಲಾಗುತ್ತಿದೆ. ಸರ್ಕಾರದ ಜಾಗತೀಕರಣ, ಖಾಸಗೀಕರಣದ ನೀತಿಯಿಂದಾಗಿ ಮೀಸಲಾತಿ ಜಾರಿಯಲ್ಲಿ ಆತಂಕ ಬಂದಿದೆ. ರಾಜ್ಯ ಸರ್ಕಾರದಲ್ಲಿ 5 ಲಕ್ಷ ಹೊರಗುತ್ತಿಗೆ ನೌಕರರ ನೇಮಕಾತಿ ಮಾಡಲಾಗಿದ್ದು ಮೀಸಲಾತಿ ಜಾರಿಗೊಳಿಸಿಲ್ಲ.

ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ದೌರ್ಜನ್ಯಗಳು

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯುರೊ (ಎನ್.ಸಿ.ಆರ್.ಬಿ) ಪ್ರಕಾರ ಮಹಿಳೆಯರ ಮೇಲಿನ ದೌರ್ಜನ್ಯಗಳು ದೇಶದ ಬೇರೆ ನಗರಗಳಿಗಿಂತ ಬೆಂಗಳೂರು ನಗರದಲ್ಲಿ ಹೆಚ್ಚಿದೆ. ಬೆಂಗಳೂರು ನಗರ 2ನೇ ಸ್ಥಾನದಲ್ಲಿದೆ. ಅತ್ಯಾಚಾರದಲ್ಲಿ ಬೆಂಗಳೂರು ನಗರ 4ನೇ ಸ್ಥಾನದಲ್ಲಿದೆ.

ಕಾರ್ಮಿಕ ಕಾಯ್ದೆ ತಿದ್ದುಪಡಿ

ರಾಜಾಸ್ಥಾನದಲ್ಲಿ ತಂದಿರುವ ತಿದ್ದುಪಡಿಗಳನ್ನು ರಾಜ್ಯದಲ್ಲೂ ತರಬೇಕೆಂಬ ಒತ್ತಾಯವನ್ನು ಮಾಲೀಕರ ಸಂಘಗಳು ಮಾಡುತ್ತಿವೆ. ಕೇಂದ್ರದಲ್ಲಿ ತರಲು ಉದ್ದೇಶಿಸಿರುವ ತಿದ್ದುಪಡಿಗಳು ಅಂಗೀಕಾರವಾದಲ್ಲಿ ರಾಜ್ಯದಲ್ಲಿನ ಒಟ್ಟು 13012 ಕಾರ್ಖಾನೆಗಳಲ್ಲಿ 12335ಕ್ಕೂ ಹೆಚ್ಚು ಕಾರ್ಖಾನೆಗಳು ಕೈಗಾರಿಕಾ ವಿವಾದ ಕಾಯ್ದೆಯಿಂದ ಹೊರಗುಳಿಯಲಿವೆ. 8709 ಕಾರ್ಖಾನೆಗಳು ಗುತ್ತಿಗೆ ಕಾರ್ಮಿಕರ ಕಾಯ್ದೆಯಿಂದ ಹೊರಗುಳಿಯಲಿವೆ, ಎಂಬ ಅಂಶವು ಒಟ್ಟಾರೆಯಾಗಿ ರಾಜ್ಯದಲ್ಲಿ ಕಾರ್ಮಿಕರನ್ನು ಬಳಸಿ ಬಿಸಾಕಲು ಮಾಲೀಕರಿಗೆ ಮುಕ್ತ ಅವಕಾಶ ಕಲ್ಪಿಸಲಿದೆ.

ದುಬಾರಿ ಮನೆ ಬಾಡಿಗೆ


ಸರ್ಕಾರ ಮನೆ ಬಾಡಿಗೆ ನಿಯಂತ್ರಣ ಕಾಯ್ದೆಯನ್ನು ಸಡಿಲಿಸಿದ ಪರಿಣಾಮವಾಗಿ ಮನೆ ಬಾಡಿಗೆಯನ್ನು ಲಂಗುಲಗಾಮು ಇಲ್ಲದೇ ಏರಿಕೆ ಮಾಡಲಾಗುತ್ತಿದೆ. ಬಹುತೇಕ ಕಾರ್ಮಿಕರು ವಾಸವಿರುವ ಬಾಡಿಗೆ ಮನೆಗಳಲ್ಲಿ ಮನೆ ಮಾಲೀಕರ ಅಣತಿಯಂತೆ ಅಲ್ಲಿಯೇ ರೇಷನ್ ಖರೀದಿ ಮಾಡಬೇಕು. ಚುನಾವಣೆ ಸಂದರ್ಭದಲ್ಲಿ ಮನೆ ಮಾಲೀಕರು ಹೇಳಿದಂತೆ ನಡೆಯಬೇಕು. ಮನೆ ಬಾಡಿಗೆ ಪ್ರತಿ ವರ್ಷ ರೂ.1000–1500 ತನಕ ಹೆಚ್ಚಳ ಮಾಡಲಾಗುತ್ತಿದೆ. ಈ ಅನಿಯಂತ್ರಿತ ಮನೆ ಬಾಡಿಗೆ ಹೆಚ್ಚಳವನ್ನು ನಿಯಂತ್ರಣ ಮಾಡಲು ಸರ್ಕಾರ ಅಗತ್ಯ ನಿಯಮಗಳೇ ಇಲ್ಲವಾಗಿವೆ.

ಅಸಂಘಟಿತ ವಲಯದ ಕಟ್ಟಡ ಕೆಲಸಗಾರರು, ಬೀದಿ ಬದಿ ವ್ಯಾಪಾರಿಗಳು, ಮನೆಕೆಲಸಗಾರರು, ಆಟೋ ಟ್ಯಾಕ್ಸಿ ಚಾಲಕರು, ದೋಬಿಗಳು – ದರ್ಜಿಗಳು, ಹಮಾಲಿ ಕಾರ್ಮಿಕರು, ಚಿಂದಿ ಆಯುವವರು ಮುಂತಾದವರು ಕಡು ಬಡತನದಲ್ಲಿ, ಅಸಹಾಯಕ ಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಇದರಲ್ಲಿ ಕಟ್ಟಡ ವಿಭಾಗ–ಕ್ಕೆ ಸಂಬಂದ ಪಟ್ಟಂತೆ ಸುಮಾರು ಬೆಂಗಳೂರು ನಗರ ವ್ಯಾಪ್ತಿಗೆ ಸೇರಿದಂತೆ 2 ಲಕ್ಷ ಕಾರ್ಮಿಕರು, 3 ಲಕ್ಷಕ್ಕೂ ಹೆಚ್ಚಿನ ಬೀದಿ ವ್ಯಾಪಾರಿಗಳು ಮತ್ತು ಮನೆ ಕೆಲಸದಲ್ಲಿ 2 ಲಕ್ಷ ಜನರು ದುಡಿಮೆಯನ್ನು ನಂಬಿ ಜೀವನ ನಡೆಸುತ್ತಿದ್ದಾರೆ. ಇವರುಗಳು ಆರೋಗ್ಯ ಸಮಸ್ಯೆಯೇನಾದರೂ ಬಂದರೆ ಸಾವಿರಾರು ರೂ. ಗಳನ್ನು ಸಾಲ–ಸೋಲ ಮಾಡಿ ಖರ್ಚು ಮಾಡುವ ಅನಿವಾರ್ಯ ಪರಿಸ್ಥಿತಿ ಇದೆ. ರಾಜ್ಯದಲ್ಲಿ ರಚಿಸಲಾಗಿರುವ ಕರ್ನಾಟಕ ರಾಜ್ಯ ಅಸಂಘಟಿತ ಸಾಮಾಜಿಕ ಭದ್ರತಾ ಮಂಡಳಿಗೆ ಅಸಂಘಟಿತ ಕಾರ್ಮಿಕರನ್ನು ನೊಂದಾಯಿಸಿ ಸೌಲಭ್ಯ ನೀಡಬೇಕಿದೆ. ಅಸಂಘಟಿತ ವಲಯದ ಕಾರ್ಮಿಕರಿಗೆಂದು ರೂಪಿಸಲಾಗಿರುವ ರಾಷ್ಟ್ರೀಯ ಸ್ವಾಸ್ಥ ಭೀಮಾ ಯೋಜನೆಯನ್ನು ಕೂಡಲೇ ಎಲ್ಲಾ ಪಲಾನುಭವಿಗಳಿಗೆ ಅಗತ್ಯ ಸ್ಮಾರ್ಟ ಕಾರ್ಡ್ ನೀಡುವ ಮೂಲಕ ಜಾರಿ ಮಾಡಬೇಕಿದೆ ಮತ್ತು ವಿಮಾ ಮೊತ್ತವನ್ನು ಹಾಲಿ 30,000 ರೂ.ಗಳಿಂದ 1 ಲಕ್ಷ ರೂ.ಗೆ ಹೆಚ್ಚಿಸಬೇಕಿದೆ.

ಗುತ್ತಿಗೆ ಕಾರ್ಮಿಕರ ಕುರಿತು ಖಾಯಂ ಕಾರ್ಮಿಕರ ಸಂಘ ವಿವಾದಗಳನ್ನು ಎತ್ತಿದರೂ ಸಹಾ ನ್ಯಾಯ ನಿರ್ಣಯಕ್ಕೆ ಕಳುಹಿಸಲು ಆಯುಕ್ತರ ಕಛೇರಿ ನಿರಾಕರಿಸುತ್ತಿದೆ. ಶಾಸನಬದ್ಧ ನಿರೀಕ್ಷಣೆ ನಡೆಸಿ ಕ್ರಮ ಕೈಗೊಳ್ಳಲು ಒತ್ತಾಯಿಸಿದರೂ ಅಗತ್ಯ ಕ್ರಮವಹಿಸದೆ ನಿರ್ಲಕ್ಷ ಮಾಡುವ ಪ್ರವೃತ್ತಿ ಹೆಚ್ಚುತ್ತಿದೆ. ಕಾರ್ಮಿಕರ ಮುಷ್ಕರದ ಅವಧಿಗಿಂತ ಮಾಲೀಕರ ಬೀಗಮುದ್ರೆ ಕಾಲ ಹೆಚ್ಚಾಗುವ ಪ್ರವೃತ್ತಿ ಫೆದರ್‌ಲೈಟ್ ಕಾರ್ಮಿಕರ ಮುಷ್ಕರದ ವೇಳೆ ಕಂಡು ಬಂತು. ಬೀಗಮುದ್ರೆ ನಿಷೇಧಕ್ಕೆ ಕ್ರಮವಹಿಸದೆ, ಅನಗತ್ಯ ವಿಳಂಬ ಮಾಡುವ, ವಿವಾದ ಶಿಫಾರಸ್ಸು ಮಾಡುವಾಗ ಕಾಯ್ದೆಗೆ ಭಿನ್ನವಾಗಿ ಆದೇಶಿಸಿ, ಮಾಲೀಕರಿಗೆ ಉಚ್ಚನ್ಯಾಯಲಯಕ್ಕೆ ಹೋಗಿ ತಡೆ ಆಜ್ಞೆ ಪಡೆಯಲು ಅನುವಾಗುವಂತೆ ಅವಕಾಶ ಕಲ್ಪಿಸಲು ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಕಛೇರಿ ನಿರತವಾಗಿದೆ. ಉಚ್ಚ ನ್ಯಾಯಲಯ ತಡೆ ಆಜ್ಞೆ ನೀಡುವ ಬೆಳೆವಣಿಗೆಗಳು ನಡೆದಿದೆ.

ಐಸಿಐಸಿಐ ಲಾಮ್‌ಬಾರ್ಡ್ ಪ್ರಕರಣದಲ್ಲಿ ಉಚ್ಚನ್ಯಾಯಾಲಯ ಕಾರ್ಮಿಕ ಪರಿಹಾರ ಕಾಯ್ದೆಯಡಿ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಪ್ರಾಧಿಕಾರತ್ವಕ್ಕೆ ತಡೆ ನೀಡಿದ ಕಾರಣ, ಸೂಕ್ತ ಪ್ರಾಧಿಕಾರಿಗಳನ್ನು ಅಧಿಸೂಚಿಸಲು ರಾಜ್ಯ ಸರ್ಕಾರವು ವರ್ಷಗಟ್ಟಲೆ ಸಮಯ ತೆಗೆದು–ಕೊಂಡಿದೆ. ಪರಿಣಾಮವಾಗಿ ಕಾರ್ಮಿಕ ಪರಿಹಾರ ಕಾಯ್ದೆ, ವೇತನ ಪಾವತಿ, ಕನಿಷ್ಠ ವೇತನ ಕಾಯ್ದೆಯಡಿ ಪ್ರಕರಣಗಳು ಕೊಳೆಯುವಂತಾಗಿದೆ. ಕಾರ್ಮಿಕ ರಂಗದ ಒತ್ತಡದ ಪರಿಣಾಮವಾಗಿ ಕಾರ್ಮಿಕ ಪರಿಹಾರ ಕಾಯ್ದೆ, ವೇತನ ಪಾವತಿ ಕಾಯ್ದೆ ಅಡಿ ಪ್ರಾಧಿಕಾರಿಗಳನ್ನು ಅಧಿಸೂಚಿಸಿದೆ. ಆದರೆ ಕನಿಷ್ಟ ವೇತನ ಕಾಯ್ದೆಯಡಿಯಲ್ಲಿ ಅಧಿಸೂಚನೆ ಹೊರಡಿಸದೆ ಮಾಲಿಕರಿಗೆ ಸಹಕರಿಸಿ, ಕಾರ್ಮಿಕರನ್ನು ವಂಚಿಸುತ್ತಿದೆ.

2014–19ರ ನೂತನ ಕೈಗಾರಿಕಾ ನೀತಿಯಲ್ಲಿ ಉದ್ಯೋಗ ಸೃಷ್ಠಿಗೆ ಉತ್ತೇಜನ ನೀಡುವ ನೆಪದಲ್ಲಿ ಕಾಯಂ ಕಾರ್ಮಿಕರು ಯಂತ್ರಗಳ ಮೇಲೆ ನಡೆಸುವ ಉತ್ಪಾದನಾ ಕೆಲಸಗಳಲ್ಲಿ ಶೇ.30 ಗುತ್ತಿಗೆ ಕಾರ್ಮಿಕರ ನೇಮಕಕ್ಕೆ ಗುತ್ತಿಗೆ ಕಾರ್ಮಿಕರ (ಕ್ರಮೀಕರಣ ಮತ್ತು ನಿಷೇಧ) ಕಾಯ್ದೆ 1970 ಕ್ಕೆ ವ್ಯತಿರಿಕ್ತವಾಗಿ ಅನುವುಗೊಳಿಸಿದೆ. ಅಂತೆಯೆ ಗುತ್ತಿಗೆ ಕಾರ್ಮಿಕರ ಸೇವಾ ನಿಯಮಾವಳಿಗಳಲ್ಲಿ ಹಿಂದಿನ ಸರ್ಕಾರದಂತೆ ಓ.ಟಿ.ಗೆ ದುಪ್ಪಟ್ಟು ವೇತನವನ್ನು ಕಾರ್ಖಾನೆ ಕಾಯ್ದೆಗೆ ವ್ಯತಿರಿಕ್ತವಾಗಿ ಮೂಲವೇತನ (ಬೇಸಿಕ್) ಮತ್ತು ತುಟ್ಟಿಭತ್ಯೆಗೆ ಮಾತ್ರ ಸೀಮಿತಗೊಳಿಸಿ, ಪ್ರಕಟಿಸಿದೆ. ಬಿಬಿಎಂಪಿಯು ತನ್ನ ಗುತ್ತಿಗೆ ಕಾರ್ಮಿಕರಿಗೆ ರೂ.227 ಕೋಟಿಗಳ ಭವಿಷ್ಯ ನಿಧಿ ಬಾಕಿ ಉಳಿಸಿಕೊಂಡಿದೆ. ನೂರಾರು ಕೋಟಿ ರೂಪಾಯಿಗಳ ನೌಕರರ ವಿಮಾ ಕಂತನ್ನು ಭಾರತೀಯ ಜೀವ ವಿಮಾ ನಿಗಮಕ್ಕೆ ಸಲ್ಲಿಸದೆ ನೌಕರರ ವಿಮಾ ಸೌಲಭ್ಯಕ್ಕೆ ಬಿಬಿಎಂಪಿ ಕಲ್ಲು ಹಾಕುವ ಪ್ರಯತ್ನ ಮಾಡುತ್ತಿದೆ.



ನೂತನ ಕಾರ್ಯದರ್ಶಿಯಾಗಿ ಕಾಂ. ಮೀನಾಕ್ಷಿ ಸುಂದರಂ



ಜಿಲ್ಲೆಯ ರಾಜಕೀಯ ಬಲಾಬಲ

ಬೆಂಗಳೂರು ನಗರದ ಮೂರು ಲೋಕಸಭಾ ಕ್ಷೇತ್ರಗಳಲ್ಲೂ ಕಳೆದ ಚುನಾವಣೆಗಳಲ್ಲಿ ಬಿಜೆಪಿ ಪಕ್ಷವು ಗೆಲುವನ್ನು ಸಾಧಿಸಿದೆ. ಈ ಮೂರು ಎಂ.ಪಿ.ಗಳಲ್ಲಿ ಇಬ್ಬರು ಕೇಂದ್ರದ ಮಂತ್ರಿಗಳಾಗಿದ್ದಾರೆ. 2013ರಲ್ಲಿ ನಡೆದ ವಿಧಾನ ಸಭಾ ಚುನಾವಣೆಗಳಲ್ಲಿ ಹಾಗು 2014ರಲ್ಲಿ ನಡೆದ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ, ಕಾಂಗ್ರೇಸ್ ಹಾಗು ಜೆಡಿ(ಎಸ್) ಪಕ್ಷಗಳು ಪಡೆದ ಮತಗಳ ವಿವರವನ್ನು ಈ ಕೆಳಗೆ ನೀಡಲಾಗಿದೆ. ಬಿಜೆಪಿ ಹಾಗು ಕಾಂಗ್ರೇಸ್ ಪಕ್ಷಗಳು ನಗರದ ಜನರ ಮಧ್ಯೆ ಪ್ರಭಾವ ಹೊಂದಿರುವ ಪಕ್ಷಗಳಾಗಿವೆ. ಜೆಡಿ(ಎಸ್) ಪಕ್ಷವು ತನ್ನ ನೆಲೆಯನ್ನು ನಗರ ಪ್ರದೇಶದಲ್ಲಿ ಕಳೆದುಕೊಳ್ಳುತ್ತಿದೆ. ಈ ಪಕ್ಷದ ನಾಯಕತ್ವದ ಅವಕಾಶವಾದಿ ರಾಜಕಾರಣವು ಅವರ ಪಕ್ಷದ ಪ್ರಮುಖ ವ್ಯಕ್ತಿಗಳು ಬೇರೆ ಪಕ್ಷಕ್ಕೆ ವಲಸೆ ಹೋಗಲು ಕಾರಣವಾಗಿದೆ. ಜೆಡಿ(ಎಸ್) ಪಕ್ಷ ಜಿಲ್ಲೆಯ ರಾಜಕೀಯದಲ್ಲಿ ಪ್ರಾಬಲ್ಯಗಳಿಸಲು ಸಾಧ್ಯವಾಗಿಲ್ಲ. ಕಾಂಗ್ರೇಸ್ ಪಕ್ಷವು ಕೂಡ ಜಿಲ್ಲೆಯಲ್ಲಿ ಸಾಮಾಜಿಕ ಹಾಗು ರಾಜಕೀಯ ವಿಚಾರಗಳಲ್ಲಿ ಪ್ರಬಲ ಮಧ್ಯಪ್ರವೇಶ ಮಾಡುವ ಸಾಮರ್ಥ್ಯ ಪ್ರದರ್ಶನ ಮಾಡುತ್ತಿಲ್ಲ. ಇದರಿಂದಾಗಿ ಸಂಘ ಪರಿವಾರದ ಸಂಘಟನಾ ಶಕ್ತಿಯನ್ನು ಹಾಗು ಸಂಪರ್ಕಗಳನ್ನು ಬಳಸಿಕೊಂಡು ಬಿಜೆಪಿ ನಗರ ಪ್ರದೇಶದಲ್ಲಿ ತನ್ನ ಸಂಘಟನಾ ಶಕ್ತಿಯನ್ನು ಸದೃಢಪಡಿಸಿಕೊಳ್ಳಲು ಯತ್ನಿಸುತ್ತಿದೆ.

ಉತ್ತರ ಜಿಲ್ಲಾ ಸಮಿತಿಯ ವ್ಯಾಪ್ತಿಯೊಳಗೆ ಒಟ್ಟು 17 ವಿಧಾನಸಭಾ ಕ್ಷೇತ್ರಗಳು ಹಾಗು 130 ಬಿಬಿಎಂಪಿ ವಾರ್ಡ್‌ಗಳು ಬರುತ್ತವೆ. ಇಲ್ಲಿನ ವಿಧಾನ ಸಭಾ ಕ್ಷೇತ್ರಗಳಲ್ಲಿ ಕಳೆದ ಚುನಾವಣೆಗಳಲ್ಲಿ ಗೆದ್ದಿರುವ ಪಕ್ಷಗಳ ವಿವರ ಹೀಗಿದೆ. ಕೃಷ್ಣರಾಜಪುರ, ಸರ್ವಜ್ಞ ನಗರ, ಶಿವಾಜಿನಗರ, ಬ್ಯಾಟರಾಯನಪುರ, ಯಶವಂತಪುರ, ಹೆಬ್ಬಾಳ, ಗೋವಿಂದರಾಜನಗರ, ವಿಜಯನಗರ, ಗಾಂಧಿನಗರ (ಕಾಂಗ್ರೆಸ್). ಸಿವಿ ರಾಮಾನ್ ನಗರ, ಮಹಾದೇವಪುರ, ದಾಸರಹಳ್ಳಿ, ಯಲಹಂಕ, ರಾಜಾಜಿನಗರ, ಮಲ್ಲೇಶ್ವರಂ (ಬಿಜೆಪಿ). ಮಹಾಲಕ್ಷ್ಮಿಲೇಔಟ್, ಪುಲಕೇಶಿನಗರ (ಜೆಡಿ(ಎಸ್)). ಒಟ್ಟಾರೆ ಕಾಂಗ್ರೆಸ್ ಪಕ್ಷವು 9 ಕ್ಷೇತ್ರಗಳಲ್ಲಿ, ಬಿಜೆಪಿ 6 ಕ್ಷೇತ್ರಗಳಲ್ಲಿ ಹಾಗು ಜೆಡಿಎಸ್ 2 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿವೆ.

ಜಿಲ್ಲಾ ಸಮ್ಮೇಳನ ಬಹಿರಂಗ ಸಭೆ–ಉದ್ಘಾಟನೆ

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ದ ಬೆಂಗಳೂರು ಉತ್ತರ ಜಿಲ್ಲಾ ಸಮ್ಮೇಳನವು ನವೆಂಬರ್ 28, 2014 ರಂದ 30 ರ ವರೆಗೆ ನಡೆಯಿತು. ಇದರ ಅಂಗವಾಗಿ ನವೆಂಬರ್ 28 ರಂದು ಬೆಂಗಳೂರಿನ ಪೀಣ್ಯ 2 ನೇ ಹಂತದಿಂದ ಟಿ.ವಿ.ಎಸ್. ಕ್ರಾಸ್‌ವರೆಗೆ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಯಿತು. ಶುಕ್ರವಾರದ ಸಂಜೆ ಕುಡುಗೋಲು ಸುತ್ತಿಗೆಗಳ ಗುರುತಿನ ಕೆಂಬಾವುಟಗಳ ಹಾರಾಟ ಜನರ ಗಮನ ಸೆಳೆದವು. ಸಿಪಿಐ(ಎಂ) ಜಿಂದಾಬಾದ್, ಇಂಕ್ವಿಲಾಬ್ ಜಿಂದಾಬಾದ್ ಘೋಷಣೆಗಳು ಮೊಳಗಿದವು. ನೂರಾರು ಸಿಪಿಐ(ಎಂ) ಕಾರ್ಯಕರ್ತರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಕಾರ್ಮಿಕ ವಿರೋಧಿ ನೀತಿಗಳು, ಬೆಲೆ ಏರಿಕೆ, ಕೋಮುವಾದ, ಜಾತಿವಾದ ಮುಂತಾದ ನೀತಿಗಳ ವಿರುದ್ದ ಜನರು ಗಟ್ಟಿಯಾಗಿ ಕೂಗು ಹಾಕಿದರು. ಪ್ರಮುಖ ಮಾರ್ಗದಲ್ಲಿ ಸಾಗಿದ ಮೆವಣಿಗೆ ಕೊನೆಗೆ ಟಿ.ವಿ.ಎಸ್. ಕ್ರಾಸ್ ತಲುಪಿತು.

ಅಲ್ಲಿ ನಡೆದ ಬಹಿರಂಗ ಸಭೆಯ ಉದ್ಘಾಟನೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ. ವಿಜೆಕೆ ನಾಯರ್ ನೆರವೇರಿಸಿದರು. ಮತ್ತೊಬ್ಬ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ವರಲಕ್ಷ್ಮಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಿಪಿಐ(ಎಂ) ಉತ್ತರ ವಲಯ ಸಮಿತಿ ಕಾರ್ಯದರ್ಶಿ ಕಾಂ. ಲೀಲಾವತಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮಹಾಲಕ್ಷ್ಮಿ ಬಡಾವಣೆಯ ಇಎಂಎಸ್ ಭವನದಲ್ಲಿ ನವೆಂಬರ್ 29 ರಂದು ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ವಿಜೆಕೆ ನಾಯರ್ ಉದ್ಘಾಟಿಸಿದರು. ಚುನಾಯಿತರಾದ 82 ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಲಿಖಿತ ಕರಡು ವರದಿ ಆಧಾರದಲ್ಲಿ ಚರ್ಚೆ ನಡೆದು ವರದಿಯನ್ನು ಅಂಗೀಕರಿಸಲಾಯಿತು.

ನಿರ್ಣಯಗಳು

ಕಾರ್ಮಿಕರಿಗೆ ಸಮಾನ ಕನಿಷ್ಟ ವೇತನ ರೂ.15,000 ನಿಗದಿಪಡಿಸಲು ಒತ್ತಾಯಿಸಿ, ಮಾಲೀಕರ ಪರ ಕಾರ್ಮಿಕ ಕಾನೂನುಗಳ ತಿದ್ದಪಡಿ ವಿರೋಧಿಸಿ, ಪ.ಜಾತಿ/ಪ.ಪಂ. ವಿಶೇಷ ಘಟಕ ಯೋಜನೆ ಜಾರಿಗಾಗಿ,

ಕೋಮುವಾದವನ್ನು ವಿರೋಧಿಸಿ ಮುಂತಾಗಿ ಸಮ್ಮೇಳನವು ಹಲವು ನಿರ್ಣಯವನ್ನು ಅಂಗೀಕರಿಸಿತು.

ನೂತನ ಸಮಿತಿ

ಸಮ್ಮೇಳನವು 19 ಜನರ ನೂತನ ಜಿಲ್ಲಾ ಸಮಿತಿಯನ್ನು ಚುನಾಯಿಸಿತು. ಜಿಲ್ಲಾ ಸಮಿತಿಯು ಕಾಂ. ಮೀನಾಕ್ಷಿ ಸುಂದರಂ ಅವರನ್ನು ಕಾರ್ಯದರ್ಶಿಯಾಗಿ ಆಯ್ಕೆ ಮಾಡಿತು. ಹಾಗೂ ಹೆಚ್.ಎನ್. ಗೋಪಾಲ ಗೌಡ, ಟಿ. ಲೀಲಾವತಿ, ಗೌರಮ್ಮ, ಗೋಪಾಲ ಕೃಷ್ಣ ಹರಳಹಳ್ಳಿ, ಪ್ರತಾಪ ಸಿಂಹ, ರತ್ನಾಕರ ಶೆಣೈ ಅವರನ್ನೊಳಗೊಂಡ 7 ಜನರ ಕಾರ್ಯದರ್ಶಿ ಮಂಡಳಿಯನ್ನು ಚುನಾಯಿಸಿತು.

ಗಜೇಂದ್ರಗಢ : ಹಸುಗೂಸಿನ ಮೇಲೆ ಅತ್ಯಾಚಾರ :

ಕಾಮುಕನಿಗೆ ಕಠಿಣ ಶಿಕ್ಷೆಗೆ ಆಗ್ರಹಿಸಿ ಎಸ್‌ಎಫ್‌ಐ ಪ್ರತಿಭಟನೆ

ಹೊಂಬಳ ಎಂಬ ಗ್ರಾಮದಲ್ಲಿ 2 ವರ್ಷದ ಹಸುಗೂಸು–ಹೆಣ್ಣು ಮಗುವಿನ ಮೇಲಿನ ಅತ್ಯಾಚಾರ ನಡೆಸಿದ ಕಾಮುನಿಗೆ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಆಗ್ರಹಿಸಿ ಭಾರತ ವಿದ್ಯಾರ್ಥಿ ಫೇಡರೇಷನ್ (ಎಸ್‌ಎಫ್‌ಐ) ಗಜೇಂದ್ರಗಡ ನಗರ ವಿದ್ಯಾರ್ಥಿನಿಯರ ಉಪಸಮಿತಿ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ಕೆ.ಎಸ್.ಎಸ್. ಕಾಲೇಜಿನಿಂದ ರ‍್ಯಾಲಿ ಪ್ರಾರಂಭವಾಗಿ ದುರ್ಗಾ ಸರ್ಕಲ್ ಮುಖಾಂತರವಾಗಿ ಕೆ.ಕೆ. ಸರ್ಕಲ್ ತಲುಪಿ ಕೆ.ಕೆ. ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯಲ್ಲಿ ಕಾಮುಕರಿಗೆ ಶಿಕ್ಷೆ ನೀಡಬೇಕು. ಸುಪ್ರಿಂ ಕೋರ್ಟ್ ನಿರ್ದೇಶನದಂತೆ ಎಲ್ಲ ಶಾಲಾ ಕಾಲೇಜುಗಳಲ್ಲಿ 'ಲೈಂಗಿಕ ಕಿರುಕುಳ ಸಮಿತಿ' ರಚನೆ ಆಗಬೇಕು. ಮಾಧ್ಯಮಗಳಲ್ಲಿ, ಜಾಹಿರಾತುಗಳಲ್ಲಿ ಅಶ್ಲೀಲತೆಯನ್ನು ನಿವಾರಿಸಬೇಕು ಎಂದು ಘೋಷಣೆ ಕೂಗಲಾಯಿತು.



ಪ್ರತಿಭಟನೆ ಉದ್ದೇಶಿಸಿ ಎಸ್‌ಎಫ್‌ಐ ಗದಗ ಜಿಲ್ಲಾ ವಿದ್ಯಾರ್ಥಿನಿ ಉಪಸಮಿತಿ ಜಿಲ್ಲಾ ಸಂಚಾಲಕಿ ಮಾನವ್ವ ರಾಠೋಡ ಮಾತನಾಡಿ ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ 2 ವರ್ಷದ ಮಗುವಿನ ಮೇಲಿನ ಅತ್ಯಾಚಾರ ನಡೆದಿರುವುದು ಅತ್ಯಂತ ಕ್ರೂರವಾದದ್ದು. ಅತ್ಯಾಚಾರ, ದೌರ್ಜನ್ಯ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿದ್ದು, ವಿದ್ಯಾರ್ಥಿನಿಯರು ಭಯದ ವಾತಾವರಣದಲ್ಲಿ ಅಧ್ಯಯನ ಮಾಡುವ ಹಾಗೂ ಬದುಕುವ ಚಿಂತಾಜನಕ ಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ. ರಾಜ್ಯದ ರಾಜಧಾನಿ ಸೇರಿದಂತೆ ರಾಜ್ಯದೆಲ್ಲೆಡೆ ಎಳೆಯ ಕಂದಮ್ಮಗಳೂ ಸೇರಿದಂತೆ ವಿದ್ಯಾರ್ಥಿನಿಯರು ಹಾಗೂ ಮಹಿಳೆಯರ ಮೇಲೆ ಕಾಮುಕರ ಕ್ರೌರ್ಯದ ಅಟ್ಟಹಾಸ ಮಿತಿ ಮೀರಿದೆ. ಖಾಸಗಿ ಶಾಲೆಯಲ್ಲಿ ವಿದ್ಯಾರ್ಥಿನಿಯರಿಗೆ ರಕ್ಷಣೆಯಿಲ್ಲದಂತಾಗಿದೆ. ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಲು ಪೋಷಕರು ಆತಂಕಗೊಳ್ಳುತ್ತಿದ್ದಾರೆ. ಬಿಜಾಪುರದ ಆಲಮೇಲ ಶಾಲೆ, ವಿಬ್ ಗಯಾರ್ ಶಾಲೆ, ಆರ್ಕಿಡ್ ಶಾಲೆ ಹಾಗೂ ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ 2ವರ್ಷದ ಮಗುವಿನ ಮೇಲಿನ ಅತ್ಯಾಚಾರದಂತ ದೌರ್ಜನ್ಯ ಪ್ರಕರಣಗಳು ನಿರಂತರವಾಗಿ ನಡೆಯುತ್ತಲೇ ಇವೆ. ರಾಜ್ಯ ಸರಕಾರ ಈ ದುಷ್ಕೃತ್ಯಗಳನ್ನು ತಡೆಯಲು ವಿಫಲವಾಗಿದೆ. ಇನ್ನು ಜವಾಬ್ದಾರಿಯುತ ಪ್ರತಿಪಕ್ಷ ಸ್ಥಾನದಲ್ಲಿರುವ ಬಿಜೆಪಿ ಹಾಗೂ ಜೆಡಿ(ಎಸ್) ಪಕ್ಷಗಳು ಈ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಕೆಲಸ ಮಾಡುವ ಬದಲಾಗಿ ರಾಜಕೀಯ ಸ್ವ–ಹಿತಾಸಕ್ತಿಗೆ ಆ ಪ್ರಕರಣವನ್ನು ಬಳಸಿಕೊಳ್ಳುತ್ತಿವೆ. ಆಡಳಿತ–ವಿರೋಧ ಪಕ್ಷವಾಗಿ ಹೆಣ್ಣುಮಕ್ಕಳ ಶಿಕ್ಷಣ, ರಕ್ಷಣೆ ಹಾಗೂ ಭದ್ರತೆಯನ್ನು ನೀಡುವ ನಿಟ್ಟಿನಲ್ಲಿ ಮಾತನಾಡದೆ. ರಾಜಕೀಯ ಕೆಸರಾಟದಲ್ಲಿ ಪೈಪೋಟಿ ಒಡ್ಡುತ್ತಿವೆ. ಗದಗ ಜಿಲ್ಲೆಯ ಹೊಂಬಳ ಗ್ರಾಮದ 2ವರ್ಷದ ಮಗುವಿಗೆ ಹಾಗೂ ಕುಟುಂಬದವರಿಗೆ ನ್ಯಾಯ ಸಿಗಬೇಕು. ಕಾಮುಕನಿಗೆ ಕಠಿಣ ಶಿಕ್ಷೆಯನ್ನು ಬಹಿರಂಗವಾಗಿ ನೀಡಬೇಕು. ಹಸುಗೂಸು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಹೆಚ್ಚುತ್ತಿದ್ದು ಸಮಾಜ ಭದ್ರತೆ ಇಲ್ಲದ ತಾಣವಾಗಿದೆ. ಅದ್ದರಿಂದ ಮಹಿಳೆಯರ ರಕ್ಷಣೆಗೆ ತ್ವರಿತ ನ್ಯಾಯಲಯಗಳನ್ನು ತೆರೆಯಬೇಕು ಎಂದು ಆಗ್ರಹಿಸಿದರು.

ನಂತರ ಜಿಲ್ಲಾ ಕಾರ್ಯದರ್ಶಿ ಶಿವಾನಂದ ಬೋಸ್ಲೆ ಹಾಗೂ ಗಜೇಂದ್ರಗಢ ನಗರ ಕಾರ್ಯದರ್ಶಿ ಶಿವಾಜಿ ಗಡ್ಡದ ಮಾತನಾಡಿ ಮುಖ್ಯಮಂತ್ರಿಗಳಿಗೆ ವಿಶೇಷ ತಹಶೀಲ್ದಾರರ ಮುಖಾಂತರ ಮನವಿ ಸಲ್ಲಿಸಲಾಯಿತು. ಈ ವೇಳೆ ಎಸ್.ಎಫ್.ಐ. ಮುಖಂಡರಾದ ಶಿವಾಜಿ ಗಡ್ಡದ, ಸಂತೋಷ ಗುಗಲೋತ್ತರ, ಅಶೋಕ ಉಕ್ಕಿಸಲ, ರಾಜು ರಾಠೋಡ, ದೇವರಾಹ ಹಾದಿಮನಿ, ಶಿಲ್ಪಾ ಬೋವಿ, ಲಕ್ಷ್ಮಿ ನಾಯಕ, ಪೂಜಾ ಸೋಂಪುರ, ನಿರ್ಮಲಾ ಕೊಣ್ಣೂರ, ಸಾವಿತರಿ ವಾಲಿ, ಜ್ಯೋತಿ ಅಂಗಡಿ, ಗೀತಾ ರಾಜುರ, ದೇವರಾಜ ನಾಯಕ, ಮಂಜುನಾಥ ಕೊಣ್ಣೂರ, ವಿನಾಯಕ ರಾಠೋಡ ಮತ್ತಿತ್ತರರು ಇದ್ದರು.

–ಶಿವಾಜಿ ಗಡ್ಡದ ●

UÀeÉÃAzÀæ UÀqÀ: ºÉÆÃgÁlPÉÌ ªÀÄtÂzÀ ¥ÀÄgÀ¸À¨sÉ DqÀ½vÀ

10 ವರ್ಷಗಳ ನಂತರ ಆಸ್ತಿ ಉತಾರ ಪಡೆದ ಆಶ್ರಯ ಕುಟುಂಬಗಳು

ಆಶ್ರಯ ಮನೆಗಳಿಗೆ ಉತಾರ ನೀಡಬೇಕೆಂದು ಹಾಗೂ ಮೂಲಭೂತ ಸೌಕರ್ಯಕ್ಕೆ ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿ–ಕೂಲಿಕಾರರ ಸಂಘ ಮತ್ತು ಡಿವೈಎಫ್‌ಐ ಸಂಘಟನೆಗಳ ನೇತೃತ್ವದಲ್ಲಿ ನಿನ್ನೆಯಿಂದಲೆ ರಾತ್ರಿ–ಹಗಲು ನಡೆಯಿಸಿದ ಧರಣಿ ಸತ್ಯಾಗ್ರಹಕ್ಕೆ ಮಣಿದು ಪುರಸಭೆ ಆಡಳಿತ 10 ವರ್ಷಗಳ ನಂತರ ಉಣಚಗೇರಿಯ ಆಶ್ರಯ ನಿವಾಸಿಗಳಿಗೆ ಆಸ್ತಿ ಉತಾರ ನೀಡಿತು.

ಈ ಸಂದರ್ಭದ ಧರಣಿ ಉದ್ದೇಶಿಸಿ ಡಿವೈಎಫ್‌ಐ ಮುಖಂಡ ಪೀರು ರಾಠೋಡ ಮಾತನಾಡಿ ಆಶ್ರಯ ಮನೆಗಳಿಗೆ ಕೇವಲ ಉತಾರ ಸಿಕ್ಕರೆ ಸಾಲದು. ಪುರಸಭೆ ಅಲ್ಲಿನ ನಿವಾಸಿಗಳಿಗೆ ಬೀದಿ–ದೀಪ, ಉತ್ತಮ ರಸ್ತೆ, ಗಟಾರ, ಶೌಚಾಲಯ ಸೇರಿದಂತೆ ಇತರ ಮೂಲಭೂತ ಅಗತ್ಯಗಳನ್ನು ಪೂರೈಸಬೇಕೆಂದು ಒತ್ತಾಯಿಸಿದರು.

ಕೂಲಿಕಾರರ ಸಂಘದ ಬಾಲು ರಾಠೋಡ ಮಾತನಾಡಿ ಸರ್ಕಾರಿ ಜಾಗೆಯಲ್ಲಿ ಮನೆ ನಿರ್ಮಿಸಿಕೊಂಡು ವಾಸಿಸುತ್ತಿರುವ ನಿವಾಸಿಗಳಿಗೆ ಅಕ್ರಮ–ಸಕ್ರಮ ಯೋಜನೆ ಅಡಿಯಲ್ಲಿ ಹಕ್ಕುಪತ್ರ ನೀಡಿ ಸಕ್ರಮಗೊಳಿಸಬೇಕೆಂದು ಅವರು ಆಗ್ರಹಿಸಿದರು. ಪುರಸಭೆ ಸದಸ್ಯ ಎಂ.ಎಸ್. ಹಡಪದ ಹಾಗೂ ಮಾರುತಿ ಚಿಟಗಿ ಮಾತನಾಡಿ ಇದು ಹಲವು ವರ್ಷಗಳ ಬೇಡಿಕೆಯು ಇಂದು ಸುದೀರ್ಘ ಹೋರಾಟದ ಭಾಗವಾಗಿ ಈಡೇರಿದೆ. ಇದಲ್ಲದೆ ಪುರಸಭೆಯ ಉಣಚಗೇರಿ ವ್ಯಾಪ್ತಿಯ ಜಾಗೆಯಲ್ಲಿ ಈಗಾಗಲೇ ಫಲಾನುಭವಿಗಳನ್ನು ಆಯ್ಕೆ ಮಾಡಿ ಹಕ್ಕುಪತ್ರ ವಿತರಿಸಿದೆ. ಈವರೆಗೂ ನಿವೇಶನ ಹಂಚಿಕೆಯಾಗುತ್ತಿಲ್ಲ. ಈಗಲಾದರೂ ಪುರಸಭೆ ಸಂಘಟನೆಗಳು ಪ್ರತಿಭಟನೆಗಿಳಿಯುವ ಮೊದಲು ನಿವೇಶನ ಹಂಚಿಕೆ ಮಾಡಬೇಕು. ಹಾಗೂ ಉಣಚಗೇರಿಯಲ್ಲಿ ಲಕ್ಷಾಂತರ ರೂ.ಗಳ ವೆಚ್ಚದಲ್ಲಿ ನಿರ್ಮಿಸಿದ ಸಾರ್ವಜನಿಕ ಸುಲಭ ಶೌಚಾಲಯವನ್ನು ಸಾರ್ವಜನಿಕ ಉಪಯೋಗಕ್ಕೆ ಅಗತ್ಯ ಸೌಕರ್ಯಗಳೊಂದಿಗೆ ನೀಡಬೇಕೆಂದು ಆಗ್ರಹಿಸಿದರು. ಪ್ರತಿಭಟನಾ ಧರಣಿಯಲ್ಲಿ ಎಸ್‌ಎಫ್‌ಐ ಮುಖಂಡ ಶಿವಾನಂದ ಬೋಸ್ಲೆ, ಚನ್ನಪ್ಪ ಗುಗಲೋತ್ತರ, ಶಿವಪ್ಪ ಪವಾರ, ಶಾಂತವ್ವ ಹಡಪದ, ಶೋಭಾ ಪವಾರ, ರಸೂಲಸಾಬ ಮುಲ್ಲಾನವರ, ಹನುಮಂತಪ್ಪ ಕೆಟಗೇರಿ, ಶಿವಪ್ಪ ಕೆಟಗೇರಿ, ವಿನಯ, ಪರಶುರಾಮ, ಶರಣಪ್ಪ ಮಲ್ಲವ್ವ ಬಡಿಗೇರ, ಕಾಶವ್ವ ನಾಯ್ಕ, ಕಳಕಪ್ಪ, ಕರಿಯಮ್ಮ ಗುರಿಕಾರ, ಮೌಲಾಸಾಬ ಹೊಸಪೇಟಿ ಮುಂತಾದವರು ಪಾಲ್ಗೊಂಡಿದ್ದರು.

– ಬಾಲು ರಾಠೋಡ

ಉದ್ಯೋಗ ಖಾತ್ರಿ ಕಡಿತಗೊಳಿಸುವ ಮೋದಿ ಹುನ್ನಾರ ಖಂಡಿಸಿ,

ಧಾರವಾಡ ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ



ರಾಷ್ಟ್ರೀಯ ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಹಂತ ಹಂತವಾಗಿ ಶಿಥಿಲಗೊಳಿಸಿ, ಮೊಟಕುಗೊಲಿಸುವ ಕೇಂದ್ರ ಸರ್ಕಾರದ ಈ ಜನವಿರೋಧಿ ಮೋದಿಯ ಹುನ್ನಾರವನ್ನು ಖಂಡಿಸಿ ನವೆಂಬರ್ ಧಾರವಾಡ ಜಿಲ್ಲಾಧಿಕಾರಿ ಕಛೇರಿ ಮುಂದೆ ಸಿಪಿಐ(ಎಂ), ಜಿಲ್ಲಾ ಸಮಿತಿಯಿಂದ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಎಸ್. ಸೊಪ್ಪಿನ ಧರಣಿ ಸತ್ಯಾಗ್ರಹದಲ್ಲಿ ಮಾತನಾಡಿ ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಂತಹ ಒಂದು ಪ್ರಗತಿಪರ ಜನಪರ ಕಾಯ್ದೆ ಜಾರಿಗೆ ಬರಬೇಕಾದರೆ ಅದರ ಹಿಂದೆ ಜನಪರ ಸಂಘಟನೆಗಳ ಹೋರಾಟ ಮಹತ್ವದಾಗಿದೆ. ಸಿಪಿಐ(ಎಂ) ನೇತೃತ್ವದಲ್ಲಿ ಎಡಪಕ್ಷಗಳು ಸಂಸತ್ತಿನ ಒಳಗೆ ಹಾಗೂ ಹೊರಗೆ ನಡೆಸಿದ ನಿರಂತರ ಹೋರಾಟದ ಫಲವಾಗಿ ಆಗಿನ ಯುಪಿಎ–1 ಸರ್ಕಾರ ಜನಪರವಾದ ಈ ಕಾಯ್ದೆಯನ್ನು ಜಾರಿಗೆ ತಂದಿತು. ಈಗ ಈ ಕಾನೂನಿಂದಾಗಿ ಲಕ್ಷಾಂತರ ಕೃಷಿಕೂಲಿಕಾರರು ಉದ್ಯೋಗ ಪಡೆಯಲು ಸಾಧ್ಯವಾಗಿದೆ. ಪ್ರಸ್ತುತ ಇರುವ ಕಾನೂನಿನಲ್ಲಿ ಹಲವು ದೋಷಗಳಿವೆ. ಅನುಷ್ಟಾನದಲ್ಲಿ ಭ್ರಷ್ಟಾಚಾರ ನಡೆ–ಯುತ್ತಿದೆ. ಹಾಗೆಂದ ಮಾತ್ರಕ್ಕೆ ಆ ಕಾನೂನು ನಿರುಪಯುಕ್ತ ಎನ್ನುವದು ಸರಿಯಲ್ಲ. ಇಂತಹ ದೋಷಗಳನ್ನು ಸರಿಪಡಿಸಲು ಮುಂದಾಗಬೇಕು ವಿನಹ. ಅದನ್ನು ಕೇವಲ 2,500 ಪ್ರದೇಶಗಳಿಗೆ ಅನ್ವಯಗೊಳಿಸುತ್ತಾ ಹಂತ ಹಂತವಾಗಿ ಮೊಟಕುಗೊಳಿಸಲು ಹೊರಟಿರುವುದು ಅತ್ಯಂತ ಜನವಿರೋಧಿ ಕ್ರಮವಾಗಿದೆ ಎಂದು ತೀವ್ರವಾಗಿ ಕೇಂದ್ರ ಸರ್ಕಾರದ ನೀತಿಯನ್ನು ಟೀಕಿಸಿದರು.

ಗುತ್ತಿಗೆದಾರರ ಪರ ಮೋದಿ ವಕಾಲತ್ತು :

ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಆರ್.ಎಚ್. ಆಯಿ ಮಾತನಾಡಿ ಚುನಾವಣೆ ಪೂರ್ವದಲ್ಲಿ ಟೊಳ್ಳು ಭರವಸೆಗಳ ಮೂಲಕ ಅಧಿಕಾರಕ್ಕೆ ಬಂದ ಮೋದಿ ಅವುಗಳನ್ನು ಈಡೇರಿಸಲು ಆಗದೆ ಈಗ ಅಂತರಾಷ್ಟ್ರೀಯ ಬಂಡವಾಳಿಗರಿಗೆ ಅನುಕೂಲ ಮಾಡಿ ಕೊಡಲಿಕ್ಕಾಗಿ ತುದಿಗಾಲಲ್ಲಿ ನಿಂತಿರುವ ಮೋದಿ, ಕಾರ್ಮಿಕ ಹಾಗೂ ಜನವಿರೋಧಿ ನೀತಿಗಳನ್ನು ತರಲು ಹೊರಟಿರುವುದು ಬಹು ಅಪಾಯಕಾರಿಯಾಗಿದೆ. ದೇಶದಲ್ಲಿನ ನಿರುದ್ಯೋಗವನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿನ ಈಗಿದ್ದ ಕೆಲಸಗಾರರ ಪಗಾರ ಮತ್ತು ಸಾಮಗ್ರಿಗಳಿಗಾಗಿ 60:40 ಅನುಪಾತವನ್ನು 51:49 ಕ್ಕೆ ಇಳಿಸುವ ಹಿಂದಿನ ಹುನ್ನಾರ ಸ್ಪಷ್ಟವಾಗಿ ಮೋದಿ ಗುತ್ತಿಗೆದಾರರ ಪರ ವಕಾಲತ್ತು ವಹಿಸುವುದಾಗಿದೆ. ಇದು ಅತ್ಯಂತ ಹೇಯ ಹಾಗೂ ಖಂಡನೀಯವೆಂದರು.

ಧರಣಿಯಲ್ಲಿ ಬಿ.ಎನ್.ಪೂಜಾರಿ, ಎ.ಎಂ. ಖಾನ್, ರೇಣುಕಾ ಕಹಾರ, ಮಾರುತಿ ಅಂಬಿಗೇರ, ಕೆ. ಎಚ್ ಪಾಟೀಲ, ಮುಂತಾದವರು ಭಾಗವಹಿಸಿದ್ದರು.

ಹಕ್ಕುಗಳು ಮೊಟಕು, ಉಳ್ಳವರ 'ದಾನ'ದ ಮೇಲೆ ಬದುಕು ನಾಗರಿಕರನ್ನು ತಿರುಕರಾಗಿಸುವ 'ಒಳ್ಳೆಯ ದಿನಗಳು'!

'ಒಳ್ಳೆಯ ದಿನ'ಗಳ ಡೈರಿ

ವೇದರಾಜ ಎನ್.ಕೆ.



'ಸ್ವಚ್ಛ ಭಾರತ ಆಂದೋಲನ'ದ ವಿವಿಧ ಆಯಾಮಗಳು ಈಗಾಗಲೇ ಮೋದಿ ಆಳ್ವಿಕೆಯ ನಿಜಸ್ವರೂಪಕ್ಕೆ ಉದಾಹರಣೆಗಳಂತಾಗಿವೆ. ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಇದರ 'ದಾನಶೂರತೆ'ಯ ಸ್ವರೂಪದ ಬಗ್ಗೆ ವಿಶ್ಲೇಷಿಸುತ್ತ ಇದರಲ್ಲಿ ಒಂದು ಪ್ರಜಾಪ್ರಭುತ್ವದ ನಾಗರಿಕರ ಘನತೆಯ ಪ್ರಶ್ನೆಯೂ ಅಡಗಿರುವುದರತ್ತ ಗಮನ ಸೆಳೆದಿದ್ದಾರೆ.

ಈ ಆಂದೋಲನದಲ್ಲಿ 12 ಕೋಟಿ ಶೌಚಾಲಯಗಳ ನಿರ್ಮಾಣವಾಗಬೇಕಿದೆ. ಇದಕ್ಕೆ ತಗಲುವ ವೆಚ್ಚ ಸುಮಾರು 1.96 ಲಕ್ಷ ಕೋಟಿ ರೂ.ಗಳು ಎಂದು ಅಂದಾಜು ಮಾಡಲಾಗಿದೆ. ಆದ-ರೆ ಪ್ರಧಾನ ಮಂತ್ರಿಗಳ ಈ ಪ್ರಿಯ 'ಅಭಿಯಾನ'ಕ್ಕೆ ಬೇಕಾದ ಈ ಮೊತ್ತವನ್ನು ತಮ್ಮ ಸರಕಾರದ ಬಜೆಟಿನಿಂದ ಕೊಡುವ ಯೋಚನೆ ಅವರಿಗೇನೂ ಇಲ್ಲ. ಅದೇ ಮಹಾತ್ಮ ಗಾಂಧಿಯವರ ಹೆಸರಿನಲ್ಲಿರುವ ಇನ್ನೊಂದು ಜನೋಪಯೋಗೀ ಯೋಜನೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಬಜೆಟ್ ಕಡಿತ ಮಾಡುತ್ತಿರುವ ಸರಕಾರದಿಂದ ಅದನ್ನು ನಿರೀಕ್ಷಿಸುವಂತೆಯೂ ಇಲ್ಲ. ಅವರಿಗೆ ಮನಸ್ಸಿದ್ದರೂ ಅವರ ಆರ್ಥಿಕ ಸಲಹೆಗಾರರು ಇಂತಹ 'ಜನಲೋಲುಪ' ಪ್ರಾಜೆಕ್ಟುಗಳಿಗೆ 'ದುಂದುವೆಚ್ಚ' ಮಾಡಬಾರದು ಎಂದು ಅವರ ಕೈಕಟ್ಟಿ ಹಾಕುತ್ತಾರೆ. ಅವರಿಗೂ ಈ ಬಗ್ಗೆ ಕಸಿವಿಸಿಯೇನೂ ಇರುವುದಿಲ್ಲ ಎಂಬುದು ಬೇರೆ ಮಾತು.

ವಾಸ್ತವವಾಗಿ ಈ ಮೊತ್ತಕ್ಕೆ ಅವರು ನೆಚ್ಚಿರುವುದು 'ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ' ಎಂಬುದನ್ನು. ಅಂದರೆ ದೊಡ್ಡ-ದೊಡ್ಡ ಕಾರ್ಪೊರೇಟ್‌ಗಳಿಗೆ ಅವರ ಲಾಭಗಳನ್ನು ಗರಿಷ್ಟ ಮಟ್ಟಕ್ಕೆ ಏರಿಸಿಕೊಳ್ಳಲು ಸರಕಾರದ ಖಜಾನೆಯಿಂದ ಸುರಿವ ರಿಯಾಯ್ತಿಗಳಿಂದ ಅವರು ಪೇರಿಸಿಕೊಳ್ಳುವ ಅಪಾರ ಲಾಭಗಳಲ್ಲಿ ಒಂದು ಪಾಲನ್ನು 'ದಾನ'ವಾಗಿ ಕೊಡುವ ಮೊತ್ತಗಳ ಮೇಲೆ. ಈಗಾಗಲೇ ಅದಾನಿ ಮುಂತಾದವರು ತಂತಮ್ಮ 'ಕೊಡುಗೆ'ಗಳ ಘೋಷಣೆ ಮಾಡಿದ್ದಾರೆ.

ಆದರೆ, ಶುಚಿತ್ವದ ಮೂಲರಚನೆಗಳನ್ನು ಒದಗಿಸುವುದು ಒಂದು ಪ್ರಜಾಪ್ರಭುತ್ವ ಸರಕಾರದ ಜವಾಬ್ದಾರಿ, ನಮ್ಮ ಸಂವಿಧಾನ ತನ್ನ ನಿರ್ದೇಶಕ ಸೂತ್ರಗಳಲ್ಲಿ ಈ ಹೊಣೆಗಾರಿಕೆಯನ್ನು ಸರಕಾರಕ್ಕೆ ವಿಧಿಸಿದೆ. ಆದ್ದರಿಂದ ಇವನ್ನು ಹೊಂದುವುದು ಪ್ರತಿಯೊಬ್ಬ ನಾಗರಿಕರ ಹಕ್ಕು. ಕೋಟಿಗಟ್ಟಲೆ ನಾಗರಿಕರು ಹಕ್ಕಿನಿಂದ ಪಡೆಯಬೇಕಾದ್ದನ್ನು ತಮ್ಮ ಶ್ರೀಮಂತ ದೇಶಬಾಂಧವರ 'ದಾನ'ಗಳಿಂದ ಪಡೆಯಬೇಕೇ? ಇದು ಪ್ರೊ. ಪಟ್ನಾಯಕ್‌ಯವರು ಎತ್ತಿರುವ ಪ್ರಶ್ನೆ(ಟರ್ನಿಂಗ್ ಸಿಟಿಜನ್ಸ್ ಇಂಟು ಮೆಂಡಿಕಂಟ್ಸ್, ದಿ ಟೆಲಿಗ್ರಾಫ್, ನವಂಬರ್ 18)

ಸರಕಾರ ಸಂವಿಧಾನ ತನಗೆ ವಿಧಿಸಿದ ಹೊಣೆಯನ್ನು ಕಾರ್ಪೊರೇಟ್ ವಲಯದ 'ಸಾಮಾಜಿಕ ಪ್ರಜ್ಞೆ'ಗೆ ದಾಟಿಸುವುದೆಂದರೆ, ನಾಗರಿಕರ ಘನತೆಯನ್ನು ಬದಿಗೊತ್ತಿ ಅವರನ್ನು ತಮ್ಮ ಶ್ರೀಮಂತ ದೇಶಬಾಂಧವರ ಮೇಲೆ ಅವಲಂಬಿಸುವ ತಿರುಕರನ್ನಾಗಿಸಿದಂತೆಯೇ ಅಲ್ಲವೇ ಎಂದು ಅವರು ಪ್ರಶ್ನಿಸುತ್ತಾರೆ.


ಕಾರ್ಪೊರೇಟ್ ಕುಳಗಳು ಮತ್ತು ಶ್ರೀಮಂತ ಪ್ರತಿಷ್ಠಿತರು ನಿರ್ದಿಷ್ಟ ಹಳ್ಳಿಗಳನ್ನು 'ದತ್ತು' ತೆಗೆದುಕೊಂಡು ಅವನ್ನು 'ಉದ್ಧಾರ' ಮಾಡಿ ಎಂಬ ಕರೆಯೂ ಇದೇ ಗುಂಪಿಗೆ ಸೇರಿದ್ದು(ಪ್ರಧಾನ ಮಂತ್ರಿಗಳು ಈಗಾಗಲೇ ಇಂತಹ ಒಂದು ಹಳ್ಳಿಯನ್ನು ದತ್ತು ತೆ-ಗೆದುಕೊಂಡಿದ್ದಾರೆ). ಇಂತಹ ಹಳ್ಳಿಗಳ ಬಡವರು ನಿರ್ವಾಹವಿಲ್ಲದೆ ತಮ್ಮ ಶ್ರೀಮಂತ ದೇಶಬಾಂಧವರ ಇಂತಹ 'ಕರುಣೆ'ಯನ್ನು ಸಹಿಸಿಕೊಳ್ಳಬಹುದು. ಆದರೆ ಇದು ಅವರ ವ್ಯಕ್ತಿಘನತೆಯನ್ನು ಗೌರವಿಸುವಂತದ್ದಲ್ಲ ಎಂಬುದಂತೂ ಖಂಡಿತ, ಎನ್ನುತ್ತಾರೆ ಪ್ರೊ. ಪಟ್ನಾಯಕ್. ಇನ್ನು, ಒಂದು ಪ್ರಜಾಪ್ರಭುತ್ವ ಸರಕಾರ ಈ ರೀತಿ 'ದತ್ತು' ತೆಗೆದುಕೊಳ್ಳುವುದನ್ನು ಹಳ್ಳಿಗಳನ್ನು ಉತ್ತಮಪಡಿಸುವ ಒಂದು ಅಧಿಕೃತ ಸಾಧನದ ಮಟ್ಟಕ್ಕೇರಿಸುವುದು ಸಂವಿಧಾನ ವಿಧಿಸಿರುವ ಹೊಣೆಗಾರಿಕೆಯ ಉಲ್ಲಂಘನೆಯೂ ಆಗುತ್ತದೆ ಎಂಬುದು ಅವರ ಅಭಿಪ್ರಾಯ.

ಆದರೆ ಬಹಳ ಮಂದಿ ಈ ವಿಶ್ಲೇಷಣೆಯನ್ನು ಒಪ್ಪಲಿಕ್ಕಿಲ್ಲ ಎಂಬುದು ಅವರ ಸಂದೇಹ. ಏಕೆಂದರೆ ನಮ್ಮ ಸಂವಿಧಾನ ಸಮಾನತೆಯ ತತ್ವವನ್ನೇನೋ ಪ್ರತಿಪಾದಿಸಿದೆ. ಆದರೆ ಜಾತಿಪದ್ಧತಿ ನಮ್ಮಲ್ಲಿ ಬಿತ್ತಿರುವ ಅಸಮಾನತೆಯ ಮನೋಭಾವದಿಂದ ನಮ್ಮಲ್ಲಿ ಬಹಳ ಮಂದಿ ಹೊರಬಂದಿಲ್ಲ. ಅದಕ್ಕೆ ನವ-ಉದಾರವಾದದಲ್ಲಿ ಅಡಕವಾಗಿರುವ ಅಸಮಾನತೆಯ ತತ್ವ ಇದನ್ನು ಈಗ ಇನ್ನಷ್ಟು ಬಲಪಡಿಸುತ್ತಿದೆ ಎಂದು ಅವರು ಹೇಳುತ್ತಾರೆ. ಹಿಂದುತ್ವ ಮತ್ತು ನವ-ಉದಾರವಾದದ ಬೆಸುಗೆ!

ಮೇಲ್ವರ್ಗಗಳಿಗೆ ಉತ್ತೇಜನೆ ಕೊಟ್ಟರೆ ಉಂಟಾಗುವ ಅಭಿವೃದ್ಧಿಯ ಫಲಗಳು ಮೇಲಿಂದ ಕೆಳಕ್ಕೆ 'ತೊಟ್ಟಿಕ್ಕಿ' ಬಡವಿಭಾಗಗಳನ್ನು ತಲುಪಿಯೇ ತಲುಪುತ್ತವೆ ಎಂಬುದು ನವ-ಉದಾರವಾದದ ತತ್ವ. ಆದರೆ ಅದೊಂದು ಟೊಳ್ಳು ತತ್ವ ಎಂದು ಜಗತ್ತಿನ ಎಲ್ಲೆಡೆ ಸಾಬೀತಾಗುತ್ತಿರುವಾಗ, ಮೇಲ್ವರ್ಗ-ಪ್ರೇರಿತ ಅಭಿವೃದ್ಧಿಯ ಫಲಗಳು ಕೆಳಕ್ಕೆ ತೊಟ್ಟಿಕ್ಕದಿದ್ದರೂ, ಮೇಲ್ವರ್ಗಗಳ ಹೆಚ್ಚಿದ ಸಮೃದ್ಧಿಯಿಂದ ಸರಕಾರ ಹೆಚ್ಚಿನ ತೆರಿಗೆ ಆದಾಯ ಪಡೆದು ಕೆಳವರ್ಗಗಳ ಉದ್ಧಾರದ ಕ್ರಮಗಳನ್ನು ಕೈಗೊಳ್ಳುವುದು ಸಾಧ್ಯ ಎಂದು ನವ-ಉದಾರವಾದಿಗಳ ತಮ್ಮ ದನಿ ಬದಲಿಸಿದರು.

ಆದರೆ ನರೇಗದಂತಹ ಯೋಜನೆಗಳ ಪರಿಸ್ಥಿತಿ ಈ ವಾದವನ್ನೂ ಟೊಳ್ಳಾಗಿಸಿದ ನಂತರ ಈ 'ಕೆಳಗೆ ತೊಟ್ಟಿಕ್ಕುವ' ತತ್ವ ಹೊಸ ರೂಪವನ್ನು ಪಡೆದಿದೆ ಎನ್ನುತ್ತಾರೆ ಪ್ರೊ. ಪಟ್ನಾಯಕ್. ಅದೆಂದರೆ ಕಾರ್ಪೊರೇಟ್- ಹಣಕಾಸು ಕುಳಗಳ ಹಿತಾಸಕ್ತಿಗಳನ್ನು ಉತ್ತೇಜಿಸಿದರೆ, ಅವರ ಕೈಗಳಲ್ಲಿ ಜನರಿಗಾಗಿ 'ಕಾರ್ಪೊರೇಟ್ ಹೊಣೆಗಾರಿಕೆ'ಯ ಭಾಗವಾಗಿ ಕೊಡಲು ಅಪಾರ ಹಣ ಉಳಿಯುತ್ತದೆ. ಅಂದರೆ ಏನೇ ಆಗಲಿ, ಕಾರ್ಪೊರೇಟ್-ಹಣಕಾಸು ಕುಳಗಳಿಗೆ ಸರಕಾರ ಉತ್ತೇಜನೆ ನೀಡುವುದೇ ಅಭಿವೃದ್ಧಿಯ ಏಕೈಕ ದಾರಿ!

ಅಂದರೆ ಮೊದಲು ದೇಶ-ದೇಶಗಳು, ನಂತರ ದೇಶದೊಳಗೆ ರಾಜ್ಯ-ರಾಜ್ಯಗಳು ಎಫ್‌ಡಿಐಗಳನ್ನು ಆಕರ್ಷಿಸಲು ಪರಸ್ಪರ ಸ್ಪರ್ಧಿಸಿದಂತೆ, ಈಗ ತ್ರತಿಯೊಂದು ಹಳ್ಳಿ ಕೂಡ ಶ್ರೀಮಂತ ಕಾರ್ಪೊರೇಟ್ ಕುಳಗಳ 'ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ'ಯ ಮೊತ್ತಗಳನ್ನು ಆಕರ್ಷಿಸಲು ಸ್ಪರ್ಧಿಸಬೇಕು. ಇದು ಪ್ರಜಾಪ್ರಭುತ್ವವನ್ನು ಅರ್ಥಹೀನವಾಗಿಸುತ್ತದೆ ಎನ್ನುತ್ತಾರೆ ಪ್ರೊ. ಪಟ್ನಾಯಕ್.



ಕಲಮು 370 ಎಂಬ ಆಸನದ ಅಭ್ಯಾಸಕ್ಕೆ ಪ್ರಯತ್ನಿಸುತ್ತಿದ್ದಾರೆ. ಆದರೆ ತಮ್ಮನ್ನೇ ಕಟ್ಟಿ ಹಾಕಿಕೊಳ್ಳುವುದು ಮಾತ್ರ ಅವರಿಗೆ ಸಾಧ್ಯವಾಗಿದೆ.

ಸದಾ ಕಲಮು 370ರ ರದ್ದತಿಯ ರಾಗಾಲಾಪನೆ ಮಾಡುತ್ತಿದ್ದ ಬಿಜೆಪಿ
ಜಮ್ಮು-ಕಾಶ್ಮೀರ ಚುನಾವಣೆಯಲ್ಲಿ
ಅದರ ಪ್ರಸ್ತಾಪವನ್ನೇ ಮಾಡದಿರುವುದನ್ನು ಸಮರ್ಥಿಸಿಕೊಳ್ಳಲು ತಿಣುಕಾಡುತ್ತಿದೆ.

ವ್ಯಂಗ್ಯಚಿತ್ರ ಕೃಪೆ: ಜುಗ್ ಸುರೈಯಾ ಮತ್ತು ಪಾರ್ಥೊ ಸೆನ್‌ಗುಪ್ತ, ಕೃಪೆ: ಟೈಮ್ಸ್ ಆಫ್ ಇಂಡಿಯಾ

ಶೇರು ಮಾರುಕಟ್ಟೆ ನೆಗೆತ: ಜಿಡಿಪಿ, ಕಾರ್ಖಾನೆ ಉತ್ಪಾದನೆ ದರಗಳಲ್ಲಿ ಇಳಿಕೆ ಹೂಡಿಕೆದಾರರ ಈ 'ಒಳ್ಳೆಯ ದಿನಗಳು' ಎಷ್ಟು ದಿನ?

ನವಂಬರ್ 28ರಂದು ಕೇಂದ್ರೀಯ ಅಂಕಿ-ಅಂಶಗಳ ಕಚೇರಿ(ಸಿಎಸ್‌ಓ) ಈ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದ ಅಂದರೆ ಜುಲೈನಿಂದ ಸಪ್ಟಂಬರ್ ಅವಧಿಯ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿದೆ. ಹಿಂದಿನ ತ್ರೈಮಾಸಿಕ ಅವಧಿ ಪೂರ್ಣವಾಗಿ ಮೋದಿ ಸರಕಾರದ ಅವಧಿಯಾಗಿರಲಿಲ್ಲ. ಏಕೆಂದರೆ ಮೇ ತಿಂಗಳ ಉತ್ತರಾರ್ಧದಲ್ಲಷ್ಟೇ ಅದು ಅಧಿಕಾರ ವಹಿಸಿಕೊಂಡದ್ದು. ಆದರೆ ಆ ಅಂಕಿ-ಅಂಶಗಳು ಸೂಚಿಸಿದ ಆರ್ಥಿಕ ಬೆಳವಣಿಗೆ ತಮ್ಮಿಂದಲೇ ಆಯಿತೆಂದು ಅವರು ಹೇಳಿಕೊಂಡಿದ್ದರು. ಈ ಎರಡನೇ ತ್ರೈಮಾಸಿಕ ಪೂರ್ಣವಾಗಿ ಅವರದ್ದೇ ಆಗಿದ್ದು, ಈ ಅಂಕಿ-ಅಂಶಗಳು ಮೋದಿ ಸರಕಾರ ಮಾಧ್ಯಮಗಳಲ್ಲಿ ಪಡೆಯುತ್ತಿರುವ ಅಬ್ಬರದ ಪ್ರಚಾರ-ಕ್ಕೆ ಅನುಗುಣವಾಗಿಲ್ಲ, ಅವು ನಿರಾಶಾದಾಯಕವಾಗಿವೆ ಎಂಬುದು ವೀಕ್ಷಕರ ಟಿಪ್ಪಣಿ.

ಅಂಕಿ-ಅಂಶಗಳನ್ನು ನೋಡಿ-

	1ನೇ ತ್ರೈಮಾಸಿಕ	2ನೇ ತ್ರೈಮಾಸಿಕ
ಜಿಡಿಪಿ ಬೆಳವಣಿಗೆ ದರ	5.7%	5.3%
ಕಾರ್ಖಾನೆ ಉತ್ಪಾದನೆ	3.5%	0.1%
ಕೃಷಿ ವಲಯ	3.8%	3.2%
ಬಂಡವಾಳ ನಿರ್ಮಾಣ	28.6%	28.3%
ಬಳಕೆ ವೆಚ್ಚ	13.4%	11.7%
ಸಾಮಾಜಿಕ ಸೇವೆಗಳು	9.1%	9.6%

ಕೊನೆಯದಾದ 'ಸಾಮಾಜಿಕ ಸೇವೆಗಳು' ಬಿಟ್ಟು ಬೇರೆಲ್ಲ ಮಾಪಕಗಳಲ್ಲಿ ಇಳಿಕೆಯಾಗಿದೆ. ಕಳೆದ ತ್ರೈಮಾಸಿಕದಲ್ಲಿ ಕಾರ್ಖಾನೆ ಉತ್ಪಾದನೆ 3.5% ಕ್ಕೆ ಏರಿದ್ದು ತಮ್ಮ ಸರಕಾರದಿಂದ ಎಂದು ಹೇಳಿಕೊಂಡವರು ಈಗ ಅದು ಕೇವಲ 0.1%ಕ್ಕೆ ಇಳಿದಿರುವುದಕ್ಕೆ ಕಾರಣ ಹುಡುಕಬೇಕಾಗಿದೆ.

ತಮಾಷೆಯೆಂದರೆ ಅದೇ ದಿನ ಶೇರು ಮಾರುಕಟ್ಟೆ ಬಂಡವಾಳ 10 ಸಾವಿರ ಕೋಟಿ ರೂ.ಗಳನ್ನು ದಾಟಿದೆ ಎಂದು ಮಾಧ್ಯಮಗಳು ಹಿರಿ-ಹಿರಿ ಹಿಗ್ಗಿದ್ದವು. "ಮುಂಬೈ ಶೇರು ಮಾರುಕಟ್ಟೆಯ ಪಟ್ಟಿಯಲ್ಲಿರುವ ಕಂಪನಿಗಳ ಮಾರುಕಟ್ಟೆ ಮೌಲ್ಯ ಚಾರಿತ್ರಿಕ ಮೈಲಿಗಲ್ಲು ದಾಟಿದೆ" ಎಂದು ದೊಡ್ಡದಾಗಿ ಪ್ರಕಟವಾಯಿತು.

ಇದಕ್ಕೆ ಕಾರಣ ಮೋದಿ ಸರಕಾರದ ಅಡಿಯಲ್ಲಿ ಇರುವ ಹೂಡಿಕೆ-ಸ್ನೇಹಿ ವಾತಾವರಣ ಎಂದು ಹಾಡಿ ಹೊಗಳಲಾಯಿತು. ಆದರೆ ಇದೇ ಅವಧಿಯಲ್ಲಿ ಕಾರ್ಖಾನೆ ಉತ್ಪಾದನೆ ಹೆಚ್ಚಳ ದರ 3.5%ದಿಂದ 0.1ಶೇ.ಕ್ಕೆ ಏಕೆ ಇಳಿದಿದೆ ಎಂಬ ಬಗ್ಗೆ ಅವು ಮೌನವಾಗಿವೆ.

ಅಷ್ಟೇ ಅಲ್ಲ, ಮೋದಿ ಸರಕಾರ ಈ ಹಣಕಾಸು ವರ್ಷಕ್ಕೆ ಅಂ-ದಾಜು ಮಾಡಿದ ಹಣಕಾಸು ಕೊರತೆಯ 89.6%ದಷ್ಟು ಮೊದಲ ಏಳು ತಿಂಗಳಲ್ಲೇ ಖಾಲಿ ಮಾಡಿಕೊಂಡಿದೆ ಎಂದು ದೇಶದ ಮಹಾ ಲೆಕ್ಕ ಪರಿಶೋಧಕರು ಹೇಳಿದ್ದಾರೆ.

ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆಗಳು ಸತತವಾಗಿ ಇಳಿಯುತ್ತಿರುವುದರಿಂದ ನಮ್ಮ ಆಮದು ಹೊರೆ ಕಡಿಮೆಯಾಗಿದೆ, ಜತೆಗೆ ಇವುಗಳ ಮೇಲೆ ಲೀಟರಿಗೆ ರೂ.1.50 ರಷ್ಟು ಸುಂಕ ವಸೂಲಿ ಮಾಡಿ ಇಂಧನ ಸಬ್ಸಿಡಿ ಖರ್ಚನ್ನು ಇಳಿಸಿಕೊಂಡಿದೆ. ಇದರಿಂದಾಗಿ ವಾಸ್ತವವಾಗಿ ಹಣಕಾಸು ಕೊರತೆಯ ಪರಿಸ್ಥಿತಿ ಸುಧಾರಿಸಬೇಕಾಗಿತ್ತು, ಅದರ ಬದಲು ಇನ್ನಷ್ಟು ಬಿಗಡಾಯಿಸಿದೆ.

ಇದೀಗ ಮೋದಿ ಸರಕಾರದ ಆರ್ಥಿಕ ಕ್ರಮಗಳ ಸದ್ಯದ ಫಲಿತಾಂಶ.

ಕಚ್ಚಾ(ತೈಲದ) ಜೋಕು

ಮೋದಿ ಸರಕಾರ ಬಂದ ಮೇಲೆ ಪೆಟ್ರೋಲ್, ಡೀಸೆಲ್ ಬೆಲೆಗಳು ಇಳಿಯುತ್ತಿವೆ ಎಂದು ಆಳುವ ಪಕ್ಷದ ಮಂದಿ ಹೇಳಿಕೊಳ್ಳುತ್ತಿದ್ದಾರೆ. ನಿಜ, ಪೆಟ್ರೋಲ್ ಬೆಲೆ 11% ದಷ್ಟು ಇಳಿದಿದೆ. ಡೀಸೆಲ್ ಬೆಲೆ 8%ದಷ್ಟು ಇಳಿದಿದೆ, ವಿಮಾನಕ್ಕೆ ಬಳಸುವ ಇಂಧನದ ಬೆಲೆ 14ಶೇ.ದಷ್ಟು ಇಳಿಸಿದೆ, ವಾಣಿಜ್ಯ ಎಲ್‌ಪಿಜಿ ಬೆಲೆ 17%ದಷ್ಟು ಇಳಿದಿದೆ.

ಆದರೆ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ಯಾರಲ್‌ಗೆ 115 ಡಾಲರು ತಲುಪಿದ್ದ ಕಚ್ಚಾತೈಲ ಬೆಲೆ ಈಗ 72 ಡಾಲರುಗಳಿಗೆ ಇಳಿದಿದೆ. ಅಂದರೆ ಸುಮಾರು 40 ಶೇ.ದಷ್ಟು ಇಳಿದಿದೆ. ಪೆಟ್ರೋಲ್, ಡೀಸೆಲ್ ಬೆಲೆಗಳ ಮೇಲೆ ನಿಯಂತ್ರಣ ತೆಗೆದು ಅದನ್ನು ಮಾರುಕಟ್ಟೆ ಬೆಲೆಗಳಿಗೆ ಜೋಡಿಸಲಾಗಿದೆ ಎನ್ನುವುದಾದರೆ ಪೆಟ್ರೋಲ್, ಡೀಸೆಲ್ ಬೆಲೆಗಳಲ್ಲಿ 40ಶೇ. ಇಳಿಕೆ ಏಕಾಗಲಿಲ್ಲ? ಇದನ್ನು ಕಚ್ಚಾ ಜೋಕು ಎಂದು ಒಂದು ಪತ್ರಿಕೆ ವರ್ಣಿಸಿದೆ.

ಇದಕ್ಕೆ ಸಿಗುವ ಉತ್ತರ ಕಾಂಗ್ರೆಸ್ ನೇತೃತ್ವದ ಸರಕಾರದ ವಕ್ತಾರರು ಕೊಡುತ್ತಿದ್ದ ಉತ್ತರಗಳೇ- ತೈಲ ಮಾರಾಟ ಕಂಪನಿಗಳು ಅಪಾರ ಲಾಭ ಮಾಡುತ್ತಿದ್ದರೂ ಅಂತರ್ರಾಷ್ಟ್ರೀಯ ಬೆಲೆಗಳಿಗೆ ಹೋಲಿಸಿದರೆ 'ಅಂಡರ್ ರಿಕವರಿ' ಎಂದು ತೋರಿಸುವ ಹುಸಿ ಲೆಕ್ಕಾಚಾರ. ನಿಜ ಹೇಳಬೇಕೆಂದರೆ ಕಚ್ಚಾತೈಲದ ಆಮದಿನಲ್ಲಿ ಉಳಿದ ಹಣವನ್ನು ಸರಕಾರ ಜನಸಾಮಾನ್ಯರ ಒಳಿತಿಗೆ ಬಳಸಿಲ್ಲ, ಬದಲು ಖಾಸಗಿ ಹೂಡಿಕೆದಾರರಿಗೆ ಕೊಟ್ಟಿರುವ ಬಕ್ಷೀಸುಗಳಿಂದ ಆಗಿರುವ ಹಣಕಾಸು ಕೊರತೆಯನ್ನು ಕಡಿಮೆ ಮಾಡಿಕೊಳ್ಳಲು ಬಳಸುತ್ತಿದೆ.

ಎಡ ಶಕ್ತಿಗಳ ಐಕ್ಯತೆಯತ್ತ ಸಾಗಿದ ಬಿಹಾರ

ಬಿಹಾರದ ಅಭಿವೃದ್ಧಿ ಎಂದು ಕರೆಯಲಾದ ಕಟ್ಟುಕತೆಯನ್ನು ಬಯಲಿಗೆಳೆಯುವ ಮಹತ್ವದ ಪುಸ್ತಕವೊಂದನ್ನು ಬಿಡುಗಡೆ ಮಾಡುವ ಸಲುವಾಗಿ ಸಿಪಿಐ(ಎಂಎಲ್) 'ಜನ್ ಸುನ್ವಾಯಿ' (ಜನತಾ ನ್ಯಾಯಾಲಯ) ಆಯೋಜಿಸಿತ್ತು. ಅದೊಂದು ಅಪರೂಪದ ಕಾರ್ಯಕ್ರಮವಾಗಿತ್ತು. ಏಕೆಂದರೆ ಪ್ರಮುಖ ಎಡ ಪಕ್ಷಗಳ ನಾಯಕರು– ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್, ಸಿಪಿಐನ ಅತುಲ್ ಅಂಜಾನ್ ಮತ್ತು ಸಿಪಿಐ(ಎಂ.ಎಲ್.) ಪ್ರಧಾನ ಕಾರ್ಯದರ್ಶಿ ದೀಪಾಂಕರ್ ಭಟ್ಟಾಚಾರ್ಯ ಅವರ ಜೊತೆಯಲ್ಲಿ ಆರ್‌ಎಸ್‌ಪಿ ಮತ್ತು ಎಸ್‌ಯುಸಿಐ(ಸಿ) ಪಕ್ಷಗಳ ಪ್ರತಿನಿಧಿಗಳೂ– ಒಂದೇ ವೇದಿಕೆಯಲ್ಲಿ ಸೇರಿ ಎಡ ಶಕ್ತಿಗಳನ್ನು ಒಟ್ಟಿಗೆ ತರುವ ನಿಟ್ಟಿನಲ್ಲಿ ಚಿಂತನೆ ನಡೆಸಿದರು.

ಬಿಹಾರ ಜನಸಂಖ್ಯೆಯ 80% ಬಡವರು ಮತ್ತು ತುಳಿತಕ್ಕೊಳಗಾದವರು ನೈಜ ಬದಲಾವಣೆಗೆ ಹಾತೊರೆಯುತ್ತಿದ್ದ ಸನ್ನಿವೇಶದಲ್ಲಿ ಎಡಪಕ್ಷಗಳು ಒಟ್ಟಿಗೆ ಬರುತ್ತಿರುವುದು ಈ ಜನರ ನಿರೀಕ್ಷೆಯನ್ನು ಹೆಚ್ಚಿಸಿದೆ. ಅಪಾರ ಸಂಖ್ಯೆಯಲ್ಲಿ ಸೇರಿದ್ದ ಜನರನ್ನುದ್ದೇಶಿಸಿ ಪ್ರಕಾಶ್ ಕಾರಟ್ ಮಾತನಾಡಿ ಸಿಪಿಐ(ಎಂ. ಎಲ್.) ಪಕ್ಷವು ನಡೆಸಿರುವ ಸರ್ವೆಯು ಈ ವರೆಗೆ ಬಿಹಾರದಲ್ಲಿ ಆಡಳಿತ ನಡೆಸಿದ ಬೂರ್ಜ್ವಾ–ಭೂಮಾಲಕರನ್ನು ಪ್ರತಿನಿಧಿಸುವ ಪಕ್ಷಗಳ ಬಣ್ಣ ಬಯಲು ಮಾಡಿರುವುದೇ ಅಲ್ಲದೆ ಬಿಹಾರದ ರೈತರು ಹಾಗೂ ಕಾರ್ಮಿಕ ವರ್ಗ ಎದುರಿಸುತ್ತಿರುವ ನಿಜ ಜೀವನದ ಸಮಸ್ಯೆಗಳನ್ನು ಮುನ್ನೆಲೆಗೆ ತಂದಿರುವುದು ಶ್ಲಾಘನೀಯ ಎಂದರು. ಬಿಜೆಪಿ ಜೊತೆಗೂಡಿ ಆಡಳಿತ ನಡೆಸಿದ ನಿತೀಶ್ ಕುಮಾರ್ ಸರ್ಕಾರವು ಭೂಮಾಲಕರ ಒತ್ತಾಯಕ್ಕೆ ಮಣಿದು, ಭೂ ಸುಧಾರಣೆಗಳನ್ನು ಗಾಳಿಗೆ ತೂರಿದೆ. ಬಿಹಾರದಲ್ಲಿ ಮಹಿಳೆಯರು ಮತ್ತು ಮಹಾದಲಿತರ ಮೇಲೆ ಇತ್ತೀಚೆಗೆ ಹೆಚ್ಚುತ್ತಿರುವ ಹಿಂಸಾ ಪ್ರಕರಣಗಳು ಸಮಾಜವು ಇನ್ನೂ ಫ್ಯೂಡಲ್(ಊಳಿಗಮಾನ್ಯ) ಶಕ್ತಿಗಳ ಹಿಡಿತದಲ್ಲಿರುವುದನ್ನೂ ಮತ್ತು ಅವರು ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಉತ್ತೇಜಿತರಾಗಿವಂತೆ ಕಂಡುಬರುವುದನ್ನೂ ಸೂಚಿಸುತ್ತದೆ. ಈ ಸನ್ನಿವೇಶದಲ್ಲಿ ಈಗ ಬಿಡುಗಡೆಯಾಗಿರುವ ಪುಸ್ತಕದಲ್ಲಿ ಪ್ರಸ್ತಾಪಿಸಿರುವ 15 ಅಂಶಗಳ ಆಧಾರದ ಮೇಲೆ ಮುಂದಿನ ದಿನಗಳಲ್ಲಿ ಎಡಶಕ್ತಿಗಳು ಒಟ್ಟಾಗಿ ಜಂಟಿ ಹೋರಾಟ ನಡೆಸಲಿವೆ ಎಂದು ಹೇಳಿದರು.

ಸಿಪಿಐನ ರಾಷ್ಟ್ರೀಯ ನಾಯಕ ಅತುಲ್ ಅಂಜಾನ್ ಮಾತನಾಡುತ್ತಾ ಸರ್ವೆ ನಡೆಸಿದ ಸಿಪಿಐ(ಎಂ.ಎಲ್.) ಪ್ರಯತ್ನಕ್ಕೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಪೊಳ್ಳು ಭರವಸೆಗಳ ಮೂಲಕ ಕೇಂದ್ರದಲ್ಲಿ ಅಧಿಕಾರ ಹಿಡಿದಿರುವ ಸರ್ವಾಧಿಕಾರಿ ಶಕ್ತಿಗಳು ಒಡ್ಡುತ್ತಿರುವ ಅಪಾಯವನ್ನು ಎದುರಿಸಲು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಸಜ್ಜಾಗಬೇಕೆಂದು ಕರೆ ಕೊಟ್ಟರು.

ಸಿಪಿಐ(ಎಂ.ಎಲ್.) ಪ್ರಧಾನ ಕಾರ್ಯದರ್ಶಿ ದೀಪಾಂಕರ್ ಭಟ್ಟಾಚಾರ್ಯ ಅವರು ಸರ್ವೆ ಬಗ್ಗೆ ಪ್ರಸ್ತಾಪಿಸಿ ತಮ್ಮ ಪಕ್ಷದ ಕಾರ್ಯಕರ್ತರು ಬಿಹಾರದ ಉದ್ದಗಲಕ್ಕೂ ಎರಡು ಲಕ್ಷ ಕುಟುಂಬಗಳನ್ನು ಸಂದರ್ಶಿಸಿ ಮಾಹಿತಿ ಕಲೆ ಹಾಕಿರುವುದನ್ನು ಶ್ಲಾಘಿಸಿದರು. ಭೂ ಸುಧಾರಣೆ, ಕೃಷಿ ಅಭಿವೃದ್ಧಿ, ಕೃಷಿ ಭೂಮಿ ವಶಪಡಿಸಿಕೊಳ್ಳುವಿಕೆ, ಸಾಮಾಜಿಕ ಭದ್ರತೆ, ನಿರ್ವಸತಿ, ಎಲ್ಲರಿಗೂ ಆಹಾರ; ವಿದ್ಯೆ; ಆರೋಗ್ಯ; ವಿದ್ಯುಚ್ಛಕ್ತಿ ಹಾಗೂ ನಿರ್ಮಲ ವಾತಾವರಣ, ಬಡ್ಡಿ ಸಾಲದಿಂದ ಬಿಡುಗಡೆ, ಸಾರ್ವಜನಿಕ ಸಾರಿಗೆ, ಸಮಾನ ಅವಕಾಶ ಮತ್ತು ಘನತೆ ಹಾಗೂ ಎಲ್ಲರಿಗೂ ನ್ಯಾಯ ಈ ಎಲ್ಲಾ ವಿಷಯಗಳಲ್ಲೂ ಸರ್ಕಾರಗಳು ಸೋತಿವೆ. ಆದರೂ ಶೇ.10 ರಿಂದ ಶೇ.13 ಜಿಡಿಪಿ ಬೆಳವಣಿಗೆಯಾಗಿದೆ ಎಂದು ಅವರು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುತ್ತಾರೆ. ಉದ್ಯೋಗ ಖಾತ್ರಿ ಯೋಜನೆ, ಇಂದಿರಾ ಆವಾಸ್ ಯೋಜನೆ, ಪಡಿತರ ಯೋಜನೆ ಮತ್ತು ಬಡವರ ಪರವಾಗಿರುವ ಇನ್ನೂ ಕೆಲವು ಸ್ಕೀಂಗಳ ಅನುಷ್ಠಾನ ಭಾರಿ ಕಳಪೆ ಮಟ್ಟದಲ್ಲಿದೆ. ಈ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಸಾವಿರಾರು ಕೋಟಿ ರೂಪಾಯಿಗಳನ್ನು ರಾಜಕಾರಣಿ–ಅಧಿಕಾರಿ– ಗುತ್ತಿಗೆದಾರ ಒಟ್ಟಾಗಿ ಕೊಳ್ಳೆ ಹೊಡೆಯುತ್ತಿರುವುದನ್ನು ಕಳಪೆ ಅನುಷ್ಠಾನ ಗಟ್ಟಿಯಾಗಿ ಸಾರುತ್ತದೆ. ಟಾಡಾ ಕಾನೂನು ದುರ್ಬಳಕೆ ಮಾಡಿ ಎಡಪಕ್ಷದ ಕಾರ್ಯಕರ್ತರನ್ನು ಬಂಧಿಸುವುದನ್ನು ಅವರು ತೀವ್ರವಾಗಿ ಖಂಡಿಸಿದರು. ಕೊಬ್ಬಿದ ಭೂಮಾಲಕರು ಬ್ರಹ್ಮೇಶ್ವವರ ಸಿಂಗ್ ನೇತೃತ್ವದಲ್ಲಿ ಕಟ್ಟಿಕೊಂಡಿದ್ದ "ರಣವೀರ ಸೇನೆ" 1990 ರ ದಶಕದಿಂದಲೂ ತುಳಿತಕ್ಕೊಳಗಾದ ಸಹಸ್ರಾರು ಮಂದಿಯ ಕಗ್ಗೊಲೆ ಮಾಡಿರುವ ಬಗ್ಗೆ ತನಿಖೆ ನಡೆಸುವಂತೆ ಅವರು ಒತ್ತಾಯಿಸಿದರು. ಕೊಲೆಗಡುಕರ ಈ ನಾಯಕನನ್ನು "ಬಿಹಾರದ ಗಾಂಧಿ" ಎಂದು ಹಾಡಿ ಹೊಗಳಿದ್ದ ಗಿರಿರಾಜ್ ಸಿಂಗ್ ಎಂಬ ವ್ಯಕ್ತಿ ಈಗ ಮೋದಿ ಸಂಪುಟದಲ್ಲಿ ಮಂತ್ರಿಯಾಗಿದ್ದಾರೆ.



ಸಿಪಿಐ(ಎಂಎಲ್) ಪಾಟ್ನಾ ರ್‍ಯಾಲಿಯನ್ನು ದೇಸಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಮಾತಾಡುತ್ತಿರುವುದು

ಎಡ ಶಕ್ತಿಗಳನ್ನು ಒಗ್ಗೂಡಿಸಲು ಸಿಪಿಐ(ಎಂ) ಮಾಡಿದ ಸತತ ಪ್ರಯತ್ನ ಈಗ ಫಲ ಕಾಣುತ್ತಿದೆ. ನವ–ಉದಾರವಾದಿ ನೀತಿಗಳನ್ನು ಮತ್ತು ಬಲಗೊಳ್ಳುತ್ತಿರುವ ಕೋಮುವಾದವನ್ನು ಸಮರ್ಥವಾಗಿ ಎದುರಿಸಲು ಮತ್ತು ಬಿಜೆಪಿಯ ವಿರುದ್ಧ ಸೈದ್ಧಾಂತಿಕವಾಗಿ ಹೋರಾಡಲು ಹಾಗೂ ಛಿದ್ರಕಾರಿಗಳು ಭಾರತದ ಐಕ್ಯತೆ–ಯ ಮೇಲೆ ನಡೆಸುತ್ತಿರುವ ದಾಳಿ ಎದುರಿಸಲು, ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟದಲ್ಲಿ ಮೂಡಿದ ಐಕ್ಯತೆಯ ಮಾದರಿಯಲ್ಲಿ ಜನ ಸಾಮಾನ್ಯರನ್ನು ಒಗ್ಗೂಡಿಸಿ ಒಂದು ಐಕ್ಯ ಹೋರಾಟ ಮಾಡಲು ಸಾಧ್ಯವಾಗುವುದು ಎಡ ಶಕ್ತಿಗಳಿಗೆ ಮಾತ್ರ.

1857 ರಿಂದ 1942 ರವರೆಗೆ ನಡೆದ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟದಲ್ಲಿ ಬಿಹಾರ ದೊಡ್ಡ ಕೊಡುಗೆ ನೀಡಿದೆ. ಬಿಹಾರದ ಚಂಪಾರಣ್‌ನಿಂದ ಗಾಂಧೀಜಿಯವರು ರೈತ ಸತ್ಯಾಗ್ರಹ ಆರಂಭಿಸಿದ್ದರು. 1930ರ ದಶಕದಲ್ಲಿ ಸ್ವಾಮಿ ಸಹಜಾನಂದ ಸರಸ್ವತಿಯವರು ರೈತ ಚಳುವಳಿ ನಡೆಸಿದ್ದೂ ಬಿಹಾರದಿಂದಲೇ. ಇಂದಿರಾ ಗಾಂಧಿಯವರ ಸರ್ವಾಧಿಕಾರಿ ಧೋರಣೆಗಳ ವಿರುದ್ಧ 1974ರಲ್ಲಿ ಜಯ ಪ್ರಕಾಶ್ ನಾರಾಯಣ ಚಳುವಳಿ ಆರಂಭಿಸಿದ್ದೂ ಬಿಹಾರದಿಂದಲೇ. ಎಡ ಶಕ್ತಿಗಳು ದೇಶದ ಸಮರಧೀರ ರೈತ ಮತ್ತು ಪ್ರಜಾಪ್ರಭುತ್ವವಾದಿ ಚಳುವಳಿಗಳ ನೈಜ ವಾರಸುದಾರರು. ಆದ್ದರಿಂದ, ಅವರು ಇಂದಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸಬಲ್ಲರು. ■

ಶಾರದಾ ಚಿಟ್ ಫಂಡ್ ಹಗರಣ : ತೃಣಮೂಲ ರಾಜ್ಯ ಸಭಾ ಸದಸ್ಯನ ಬಂಧನ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ನಿಕಟವರ್ತಿಯೂ, ತೃಣಮೂಲ ಪಕ್ಷದ ರಾಜ್ಯ ಸಭಾ ಸದಸ್ಯನೂ, ಶಾರದಾ ಗುಂಪಿನೊಂದಿಗೆ ಒಪ್ಪಂದ ಇದ್ದ 'ಪ್ರತಿದಿನ್' ಎನ್ನುವ ಬಂಗಾಳಿ ದಿನ ಪತ್ರಿಕೆಯ ಮಾಲೀಕನೂ, ತೃಣಮೂಲ ಪತ್ರಿಕೆ 'ಜಾಗೋ ಬಾಂಗ್ಲಾ'ದ ಸಂಪಾದಕನೂ ಆಗಿದ್ದ ಶ್ರೀಂಜೊಯ್ ಬೋಸ್ ಎಂಬ ಆಸಾಮಿಯನ್ನು ಸಿಬಿಐ ಬಂಧಿಸಿದೆ. ಅನೇಕ ಉದ್ದಿಮೆ/ವ್ಯವಹಾರಗಳ ಒಡೆತನವಿರುವ ಕುಟುಂಬದಿಂದ ಬಂದ ಈತನ ತಂದೆಯೂ ತೃಣಮೂಲ ಪಕ್ಷದ ಮಾಜಿ ಸಂಸದ.

ಸಿಬಿಐ ಬಂಧಿಸಿರುವ ತೃಣಮೂಲ ಪಕ್ಷದ ವರಿಷ್ಠರಲ್ಲಿ ಈತ ಮೂರನೆಯವನು. ತೃಣಮೂಲ ಪಕ್ಷದ ಮತ್ತೊಬ್ಬ ರಾಜ್ಯ ಸಭಾ ಸದಸ್ಯ ಕುನಾಲ್ ಘೋಷ್ ಮೊದಲನೆಯವನು. ಪಶ್ಚಿಮ ಬಂಗಾಳದ ಮಾಜಿ ಡಿಜಿಪಿ ಹಾಗೂ ತೃಣಮೂಲ ಪಕ್ಷದ ಪ್ರಮುಖ ನಾಯಕ ರಜತ್ ಗುಪ್ತಾ ಎರಡನೆಯವನು.

ಈ ಹಗರಣಕ್ಕೆ ಸಂಬಂಧಿಸಿದಂತೆ ಬಹಳ ಕುತೂಹಲ ಕೆರಳಿಸಿರುವ ಅಂಶವೆಂದರೆ, ಆತ್ಮಹತ್ಯಾ ಪ್ರಯತ್ನ ಮಾಡಿದ್ದ ಕುನಾಲ್ ಘೋಷ್‌ನ ಒತ್ತಾಯ: ಈ ಹಗರಣದಲ್ಲಿ ಮುಖ್ಯ ಮಂತ್ರಿ ಮಮತಾ ಬ್ಯಾನರ್ಜಿಯವರೂ ಶಾಮೀಲಾಗಿದ್ದಾರೆ. ಸಿಬಿಐ ಅವರನ್ನು ವಿಚಾರಣೆಗೊಳಪಡಿಸಬೇಕು ಎಂಬುದು. ●

ತೃಣಮೂಲ ಪಕ್ಷದ ಸಂಸದ ಶ್ರೀಂಜೊಯ್ ಬೋಸ್‌ನನ್ನು ಪೊಲೀಸರು ಬಂದಿಸುತ್ತಿರುವುದು





ಶಾರದ ಚಿಟ್ ಪಂಢ್ ಹಗರಣ ಮಮತಾ ಬ್ಯಾನರ್ಜಿ ಬಂಧನಕ್ಕೆ ಆಗ್ರಹಿಸಿ ಬೃಹತ್ ಪ್ರತಿಭಟನೆ – ಕೊಲ್ಕೋತ್ತ

ಮಂಡ್ಯ : ಹಾಲು ಉತ್ಪಾದಕರ ಹೋರಾಟಕ್ಕೆ ಮಣಿದ ಮನ್‌ಮುಲ್ ಲೀಟರ್‌ಗೆ ಹಾಲಿಗೆ 1.50 ರೂ. ಹಣ ಕಡಿತದ ಕ್ರಮ ವಾಪಸ್

ಮಂಡ್ಯದ ಡೈರಿ 'ಮನ್ ಮುಲ್' ಮೇಗಾ ಡೈರಿ ನಿರ್ಮಿಸುವ ಹೆಸರಿನಲ್ಲಿ ಮಂಡ್ಯದ ಹಾಲು ಉತ್ಪಾದಕರನ್ನು 'ಕಡಿ'ಯುವ ನೀತಿ ಬಗ್ಗೆ ಮತ್ತು ಅದರ ವಿರುದ್ದ ಹಾಲು ಉತ್ಪಾದಕರು ನಡೆಸಿದ ಹೋರಾಟದ ಬಗೆಗೆ ಕಳೆದ ವಾದ ಓದಿದ್ದೀರಿ. ಈ ಹೋರಾಟದ ಸಂದರ್ಭದಲ್ಲಿ ಅಕ್ಟೋಬರ್ 30 ರಂದು ಹಾಲು ಉತ್ಪಾದಕರ ಬೃಹತ್ ಪ್ರತಿಭಟನೆಯ ಸ್ಥಳಕ್ಕೆ ಆಗಮಿಸಿದ ಮಂಡ್ಯ ಡಿ.ಸಿ. ಯವರ ಮಧ್ಯಪ್ರವೇಶದಿಂದ ನವೆಂಬರ್ 6 ರಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ (ಮನ್‌ಮುಲ್) ಆಡಳಿತ ಮಂಡಳಿಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರು ಹಾಲು ಉತ್ಪಾದಕರ ಹೋರಾಟ ಸಮಿತಿಯ ಮುಖಂಡರು ಮತ್ತು ರಾಜ್ಯ ರೈತ ಸಂಘದ ಮುಖಂಡರ ಸಭೆ ಏರ್ಪಡಿಸಲಾಗಿತ್ತು.

ಸಭೆಯಲ್ಲಿ ಹೋರಾಟಗಾರರು ಆಡಳಿತ ಮಂಡಳಿಯವರನ್ನು ನೀವು ಮೆಗಾ ಡೈರಿ ಮಾಡಲು ಜನರಲ್ ಬಾಡಿಯಲ್ಲಿ ಅನುಮತಿ ಪಡೆದಿದ್ದೀರಾ? ಜಂಟಿ ನೋಂದಣಾಧಿಕಾರಿಗಳಿಂದ ಹಾಗೂ ಕೆ.ಎಂ.ಎಫ್.ನವರಿಂದ ಅನುಮತಿ ಪಡೆಯಲಾಗಿದೆಯಾ? ಮತ್ತು ಮೇಗಾಡೈರಿ ನಿರ್ಮಾಣಕ್ಕೆ ನೀಲಿ ನಕ್ಷೆ ತಯಾರಿಸಿದ್ದೀರಾ? ಹಾಲು ಉತ್ಪಾದಕರಿಂದ 1.50 ರೂ. ಹಣ ಕಟಾವು ಮಾಡಲು ಜನರಲ್ ಬಾಡಿಯಲ್ಲಿ ಅನುಮತಿ ಪಡೆದಿದ್ದೀರಾ? ನೀವು ಮೆಗಾ ಡೈರಿ ಮಾಡಿದರೆ ಮಾನವ ಸಂಪನ್ಮೂಲ ಕಡಿಮೆಯಾಗುತ್ತದೆ. ಹಾಗಾದರೆ 240 ಜನರ ನೇಮಕಾತಿಯ ಔಚಿತ್ಯವೇನು? 80 ಕೋಟಿ ರೂ.ಗಳ ಹೊಸ ಯಂತ್ರಗಳ ಅಳವಡಿಸುವ ಔಚಿತ್ಯವೇನು? ಎಂದು ಪ್ರಶ್ನಿಸಿದರು. ಆಡಳಿತ ಮಂಡಳಿಯವರು ತಬ್ಬಿಬ್ಬಾಗಿ 'ನಾವು ರೈತರ ಹಣದಲ್ಲಿ ಕಡಿತ ಮಾಡುತ್ತಿಲ್ಲ. ಅದರ ಬದಲಾಗಿ ಸೆಪ್ಟೆಂಬರ್ 2013ರಲ್ಲಿ ಹಾಲಿನ ಬೆಲೆ ಗ್ರಾಹಕರಿಗೆ 2 ರೂ. ಹೆಚ್ಚಿಸಿದಾಗ ಆ ಹಣವನ್ನು ಮೂಲಭೂತ ಸೌಕರ್ಯಕ್ಕೆ ಪ್ರತ್ಯೇಕ ಖಾತೆಯಲ್ಲಿಟ್ಟು ಬಳಸಿಕೊಳ್ಳಿ ಎಂದು ರಾಜ್ಯ ಸರ್ಕಾರ ತಿಳಿಸಿತ್ತು. ಆದ–ರೆ ನಾವು ಆ ಹಣವನ್ನು ಗ್ರಾಹರಿಗೆ ನೇರವಾಗಿ ಕೊಟ್ಟು ಬಿಟ್ಟಿದ್ದೀವಿ. ಅದನ್ನು ಈಗ ಕಟಾವು ಮಾಡುತ್ತೇವೆಂದು ತಿಳಿಸಿದರು. ಹಾಗಾದರೆ ಅದರ ಸುತ್ತೋಲೆ ಕೊಡಿ. ಇಲ್ಲವೆ 2013ರ ಅಗಸ್ಟಿನಲ್ಲಿ ಏನು ದರ ಇತ್ತೋ ಅದೇ ದರ ಮುಂದುವರೆಸಿ ಎಂದಾಗ ಅವರಿಂದ ಸರ್ಮಪಕ ಪ್ರತಿಕ್ರಿಯೆ ಬರಲಿಲ್ಲ. ಆಗ ಡಿ.ಸಿ.ಯವರು ಮಧ್ಯ ಪ್ರವೇಶ ಮಾಡಿ ರೈತರ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿ. ಆದರೆ ಮುಂದಿನ ದಿನಗಳಲ್ಲಿ ಮೆಗಾಡೈರಿಯ ಅಗತ್ಯವಿದೆ. ಉತ್ಪಾದನೆಗೆ ಅನುಗುಣವಾಗಿ ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳಬೇಕೆಂದರು. 'ನಿಮಗೆ ಈ ಸಂದರ್ಭದಲ್ಲಿ ಸರಿಯಾದ ಮಾಹಿತಿ ನೀಡಲು ಆಗುತ್ತಿಲ್ಲ. ಹಾಗಾಗಿ ಇನ್ನೊಮ್ಮೆ ಆಡಳಿತ ಮಂಡಳಿ ಸಭೆ ಕರೆದು ಹೋರಾಟಗಾರರ ಸಮ್ಮುಖದಲ್ಲಿ ಚರ್ಚಿಸಿ ಅಂತಿಮ ತೀರ್ಮಾನಕ್ಕೆ ಬನ್ನಿ.' ಎಂದು ತಾಕೀತು ಮಾಡಿದರು.

ದುಂಡು ಮೇಜಿನ ಸಭೆ

ಹಾಲು ಉತ್ಪಾದಕರ ಹೋರಾಟ ಸಮಿತಿಯು ನವೆಂಬರ್ 11, 2014 ರಂದು ಮಂಡ್ಯದ ಗಾಂಧಿ ಭವನದಲ್ಲಿ ದುಂಡು ಮೇಜಿನ ಸಭೆಯನ್ನು ಸಂಘಸಿತು. ಸಭೆಗೆ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ, ಟಿ.ಎಲ್. ಕೃಷ್ಣೇಗೌಡ, ಟಿ. ಯಶವಂತ್, ಎನ್.ಎಲ್. ಭರತ್‌ರಾಜ್ ರೈತ ನಾಯಕರಾದ ಕೆ. ಬೋರಯ್ಯ, ಸುನಂದ ಜಯರಾಮು, ಮಂಜೇಶ್‌ಗೌಡ, ಸುಧೀರ್ ಕುಮಾರ್, ರಾಮಲಿಂಗೇಗೌಡ, ವಿಶ್ವನಾಥ, ನ.ಲಿ. ಕೃಷ್ಣ, ಜನವಾದಿ ಮಹಿಳಾ ಸಂಘಟನೆಯ ದೇವಿ, ಸುಶೀಲ, ಸುನೀತಾ, ಶೋಭಾ, ಸಿಐಟಿಯು ಕುಮಾರಿ, ಜನಶಕ್ತಿ ಸಂಘಟನೆಯ ಡಾ॥ ವಾಸು, ಕೃಷ್ಣಪ್ರಕಾಶ್, ಎಂಪಿಸಿಎಸ್ ನೌಕರರ ಸಂಘದ ಅ ಧ್ಯಕ್ಷರಾದ ಪುಟ್ಟಸ್ವಾಮಿ, ಕಾರ್ಯದರ್ಶಿ ಶಿವಕುಮಾರ್ ಮುಂತಾದವರು ಸೇರಿ ಹಾಲು ಉತ್ಪಾದಕರ ಸಮಸ್ಯೆಗಳು, ಆಡಳಿತ ಮಂಡಳಿಯ ಧೋರಣೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಮಂಡ್ಯ ಜಿಲ್ಲಾ



ಹಾಲು ಒಕ್ಕೂಟದ (ಮನ್‌ಮುಲ್) ಮುಂದೆ ತೀವ್ರ ಹೋರಾಟ ರೂಪಿಸಲು ತೀರ್ಮಾನಿಸಿತು. ತಾಲ್ಲೂಕು ಮಟ್ಟದಲ್ಲಿ ಹೋರಾಟ ಸಮಿತಿಗಳ ರಚಿಸಬೇಕೆಂದು ಹಾಗೂ ನವೆಂಬರ್ 26 ರಂದು ಎರಡನೇ ಹಂತದ ಜಿಲ್ಲಾ ಮಟ್ಟದ ಹೋರಾಟ ನಡೆಸಬೇಕೆಂದು ತೀರ್ಮಾನಿಸಿತು. ಅಷ್ಟರಲ್ಲಿ ಮನ್‌ಮುಲ್ ಆಡಳಿತ ಮಂಡಳಿಯು ನವೆಂಬರ್ 13 ರಂದು ಹೋರಾಟಗಾರರ ಜೊತೆ ಸಭೆ ನಡೆಸಲು ತೀರ್ಮಾನಿಸಿ ಪತ್ರ ಕಳುಹಿಸಿತ್ತು. ಆದರೆ ಚಳುವಳಿಕಾರರಿಂದ ಆ ಸಭೆಯಲ್ಲಿ ಭಾಗವಹಿಸದೆ ಹೋರಾಟ ನಡೆಸಲು ತೀರ್ಮಾನವಾಯಿತು. ಅದರಂತೆ ವ್ಯಾಪಕ ತಯಾರಿ ನಡೆಯುತ್ತಿತ್ತು. ಚಳುವಳಿ ಕಾವು ದಿನದಿಂದ ಹೆಚ್ಚಾಗುತ್ತ ಹೋಯಿತು. ಮಾಧ್ಯಮಗಳಲ್ಲಿ ಹೇಳಿಕೆಗಳು ವಿವರವಾದ ವರದಿಗಳು ಬರಲು ತೊಡಗಿದವು. ರೈತರು ದೊಡ್ಡ ಸಂಖ್ಯೆಯಲ್ಲಿ ಹೋರಾಟದಲ್ಲಿ ಭಾಗವಹಿಸುವ ಮಾಹಿತಿ ಪಡೆದ ಒಕ್ಕೂಟದ ಆಡಳಿತ ಮಂಡಳಿ ನವೆಂಬರ್ 24 ರಂದು 1.50 ರೂ. ಹಣ ಕಟಾವು ಮಾಡುವುದನ್ನು ವಾಪಸ್ಸು ಪಡೆಯಿತು. ಈ ಯಶಸ್ಸು ಹೋರಾಟಗಾರರಲ್ಲಿ ಉತ್ಸಾಹ ಮೂಡಿಸಿತು. ಇದು ಜಿಲ್ಲೆಯ ಹೋರಾಟಗಾರರಿಗೆ ಸಿಕ್ಕ ಜಯ ಎಂದು ಪರಿಗಣಿಸಿ ಹರ್ಷಚಿತ್ತರಾಗಿ 25 ರಂದು ಹೋರಾಟ ಸಮಿತಿ ಸಭೆ ಸೇರಿ ಮನ್‌ಮುಲ್ ನಿರ್ಧಾರವನ್ನು ಸ್ವಾಗತಿಸಿತು. ತಾತ್ಕಾಲಿಕ ಹಿಂಪಡಿತ ಎಂಬ ಹೇಳಿಕೆಯನ್ನು ಶಾಶ್ವತ ಹಿಂಪಡಿತ ಮಾಡಬೇಕು. ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡುಬೇಕು. ಮೆಗಾಡೈರಿಯ ಮಾಡುವುದಾದರೆ ಎನ್‌ಡಿಡಿಬಿ, ನಬಾರ್ಡ್, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಹಾಗೂ ಒಕ್ಕೂಟದ ಲಾಭಾಂಶಗಳಿಂದ ಮಾಡಬೇಕು. ಇದರ ಅನುಕೂಲವನ್ನು ರೈತರಿಗೆ ಸಿಗುವ ಹಾಗೆ ಮಾಡಬೇಕು. ಹಾಲಿನ ಉತ್ಪಾದನ ವೆಚ್ಚಕ್ಕೆ ಅನುಗುಣವಾಗಿ ಬೆಲೆ ಹೆಚ್ಚಿಸಬೇಕು. ಮನ್‌ಮುಲ್ ಭ್ರಷ್ಟಾಚಾರ ನಿಲ್ಲಬೇಕು ಹಾಗೂ ಡಿ.ಸಿ.ಯವರ ಸಮ್ಮುಖದಲ್ಲಿ ಆಡಳಿತ ಮಂಡಳಿಯವರು ಮತ್ತು ಹೋರಾಟಗಾರರ ಜೊತೆಗೂಡಿ ಅಗತ್ಯ ದಾಖಲೆಗಳೊಂದಿಗೆ ಮತ್ತೊಮ್ಮೆ ಸಭೆ ನಡೆಯಬೇಕು. ಹೈನುಗಾರಿಕೆ ಪ್ರೋತ್ಸಾಹಿಸಲು ಒಕ್ಕೂಟದಿಂದ ರೈತರಿಗೆ ಸಾಲ ನೀಡಬೇಕು. ಜಾನುವಾರುಗಳು ರೋಗಕ್ಕೆ ತುತ್ತಾಗಿ ಮರಣ ಹೊಂದಿದಾಗ ರೈತರ ಸಂಕಷ್ಟಕ್ಕೆ ಒಕ್ಕೂಟ ಮುಂದೆ ಬರಬೇಕು. ಒಕ್ಕೂಟದಲ್ಲಿ ಅನಗತ್ಯ ವೆಚ್ಚ, ಭ್ರಷ್ಟಾಚಾರ ತಡೆಗಟ್ಟಬೇಕು. ರೈತರಿಗೆ ಸಮಯಕ್ಕೆ ಸರಿಯಾಗಿ ಹಣ ಪಾವತಿ ಮಾಡಬೇಕು. ಸೀಝನ್ ಮತ್ತು ನಾನ್‌ಸೀಝನ್ ಎಂಬ ಹೆಸರಿನಲ್ಲಿ ದರ ಕಡಿಮೆ ಮಾಡಬಾರದು. ಮಾರುಕಟ್ಟೆ ವಿಸ್ತರಿಸಲು ಗಮನ ನೀಡಬೇಕು. ಅಗತ್ಯ ಪ್ರದೇಶಗಳಲ್ಲಿ ನಂದಿನಿ ಪಾರ್ಲರ್‌ಗಳನ್ನ ಸ್ಥಾಪಿಸಿ ಹಾಲು, ಮೊಸರು, ತುಪ್ಪ ಇನ್ನಿತರ ಉಪಉತ್ಪನ್ನಗಳನ್ನು ಮಾರಾಟ ಮಾಡಬೇಕು. ಹಬ್ಬದ ದಿನಗಳಲ್ಲಿ ಸಹಕಾರ ಸಂಘಗಳ ಮೂಲಕ ಹಾಲು ಉತ್ಪಾದಕರಿಗೆ ರಿಯಾಯಿತಿ ದರದಲ್ಲಿ ಪೇಡ ವಿತರಿಸಬೇಕೆಂದು ಒತ್ತಾಯಿಸಲಾಯಿತು.

– ಎನ್.ಎಲ್. ಭರತ್‌ರಾಜ್.

ಚಿಕ್ಕಬಳ್ಳಾಪುರ....

ಪುಟ 16 ರಿಂದ

ಇತ್ತೀಚೆಗೆ ಯಾಕೆ ಭೇಟಿ ಕೊಟ್ಟಿದ್ದು ಎಂಬುದು ಎಲ್ಲರಿಗೂ ಗೊತ್ತಿದೆ. ಸುಬ್ರಮಣ್ಯ ದೇವಾಲಯದಲ್ಲಿ ಮಡೆಸ್ನಾನ ಆಚರಣೆಗೆ ಸಂಬಂಧಿಸಿದಂತೆ ಅವರಿಗೆ ಇಲ್ಲಿನ ಬ್ರಾಹ್ಮಣರನ್ನು ಪ್ರಚೋದಿಸುವ ಉದ್ದೇಶವಿತ್ತು.' ಎಂದು ಅವರು ಖಂಡಿಸಿದರು.

'ಮೂಢನಂಬಿಕೆ ಆಚರಣೆ ವಿರುದ್ಧ ಮಾತನಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮೂಢನಂಬಿಕೆ ನಿಷೇಧ ಕಾಯ್ದೆಯನ್ನು ಕೂಡಲೇ ಜಾರಿಗೆ ತರಬೇಕು. ಇಲ್ಲಸಲ್ಲದ ನೆಪ ಹೇಳುವ ಬದಲು ಸಂವಿಧಾನವನ್ನು ಗೌರವಿಸುವ ಗುರಿಯಿಂದಾದರೂ ಕಾಯ್ದೆಯನ್ನು ಅನುಷ್ಠಾನಗೊಳಿಸಬೇಕು.' ಎಂದು ಅವರು ಒತ್ತಾಯಿಸಿದರು.

ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯದರ್ಶಿ ಎಂ.ಪಿ. ಮುನಿವೆಂಕಟಪ್ಪ, ಸಿಪಿಐ(ಎಂ) ಪಕ್ಷದ ಮುಖಂಡರು ಜಿಲ್ಲಾ ಪಂಚಾಯ್ತಿ ಸದಸ್ಯರಾದ ಬಿ. ಸಾವಿತ್ರಮ್ಮ, ಮುಖಂಡರಾದ ಗೋಪಿನಾಥ್, ಸಿದ್ದಗಂಗಪ್ಪ, ಗೋವಿಂದಾಚಾರಿ, ರಘುರಾಮರೆಡ್ಡಿ, ಡಿವೈಎಫ್‌ಐ ಮುಖಂಡ ಮುನೀಂದ್ರ, ಎಸ್‌ಎಫ್‌ಐ ಮುಖಂಡ ರಾಜಶೇಖರ್, ಜೆಎಂಎಸ್ ನಾಯಕಿ ವೀಣಾ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಕಳೆದ ವರ್ಷದ ಅನುಭವದ ಆಧಾರದಲ್ಲಿ ಈ ವರ್ಷ ಸಾಕಷ್ಟು ಎಚ್ಚರಿಕೆ ವಹಿಸಲಾಯಿತು. ಬೆಳಿಗ್ಗೆ ಆರಂಭವಾದ ಪ್ರತಿಭಟನೆಯು ಸಂಜೆ ತಡವಾದರೂ ಕೊನೆಯಾಗದೇ ಮುಂದುವರಿಯಿತು. ಇನ್ನು ಮಡೆಸ್ನಾನ ನಡೆಯಲು ಸಾಧ್ಯವಿಲ್ಲ ಎಂಬುದು ಖಾತ್ರಿಯಾದ ಮೇಲೆಯೇ ಪ್ರತಿಭಟನಾಕಾರರು ವಾಪಸ್ ತೆರಳಿದರು. ಇದು ಚಳುವಳಿಯ ಒಂದು ಹಂತದ ಯಶಸ್ಸಾಗಿದೆ. ಜನಜಾಗೃತಿಯ ಮೂಲಕ ಜನರೇ ಮಡೆಸ್ನಾನಕ್ಕೆ ಬರದಂತೆ ಮಾಡುವ ಪ್ರಯತ್ನವೂ ಮುಂದಿನ ದಿನಗಳಲ್ಲಿ ಹೆಚ್ಚಬೇಕಿದೆ.

–ಆರ್.ಕೆ

ಭೀಷಣ ಕೇಡಿನ ಸಂಕೇತಗಳು

ಪುಟ 7 ರಿಂದ


ಮಾಡುವ ನಿಜವಾದ ಅಜೆಂಡಾದ ಇನ್ನೊಂದು ನಾಲಗೆ.

1992ರ ನಂತರ ದೇಶ ಪ್ರತಿ ಡಿಸೆಂಬರ್ 6ರಂದು ನಾಚಿಕೆಯಿಂದ ತಲೆ ತಗ್ಗಿಸುತ್ತದೆ– ಬಾಬ್ರಿ ಮಸೀದಿಯನ್ನು ಹತ್ತಿ ದಾಂಧಲೆ ನಡೆಸಿ ಕೆಡವಿ ಹಾಕಿದ್ದನ್ನು ನೆನಪಿಸಿಕೊಳ್ಳುವಾಗ. ಇನ್ನೆಲ್ಲದರ ನಡುವೆ, ಈ ನೆನಪು ಒಂದು ಉನ್ಮತ್ತ ಕೋಮುವಾದಿ ಸಂಘಟನೆ ಪ್ರಭುತ್ವ ಅಧಿಕಾರದ ಲಗಾಮು ಹಿಡಿಯುವುದರ ವಿನಾಶಕಾರಿ ಪರಿಣಾಮಗಳನ್ನು ಎತ್ತಿ ತೋರುತ್ತದೆ. ಆಗ ಉತ್ತರಪ್ರದೇಶದಲ್ಲಿ ಒಂದು ಬಿಜೆಪಿ ಸರಕಾರ ಇರದಿದ್ದರೆ ಬಾಬ್ರಿ ಮಸೀದಿ ಅದನ್ನು ಕೆಡವಿ ಹಾಕಿದ ರೀತಿಯಲ್ಲಿ ಧ್ವಂಸ ಮಾಡಲು ಸಾಧ್ಯವಿರುತ್ತಿರಲಿಲ್ಲ. ಆ ಸರಕಾರದ ಶಾಮೀಲು ಮತ್ತು ಅದು ಒದಗಿಸಿದ ಪೋಷಣೆ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯ ಮೇಲೆ ಅತ್ಯಂತ ಗಂಭೀರ ಪ್ರಹಾರಕ್ಕೆ ಅವಕಾಶ ಮಾಡಿಕೊಟ್ಟಿತ್ತಷ್ಟೇ ಅಲ್ಲ, ನೆರವನ್ನೂ ನೀಡಿತು.

ಹಲವು ಪಟ್ಟಾಗಿರುವ ಅಪಾಯ

ಇಂದು, ಬಿಜೆಪಿ 2014ರ ಸಾರ್ವತ್ರಿಕ ಚುನಾವಣೆಗಳಲ್ಲಿ ಕೇವಲ 31ಶೇ. ಮತ ಗಳಿಕೆಯೊಂದಿಗೆ ತನ್ನದೇ ಬಹುಮತವನ್ನು ಪಡೆದು ಕೇಂದ್ರ ಸರಕಾರದ ಲಗಾಮನ್ನು ಹಿಡಿದಿರುವಾಗ ಇಂತಹ ಅಪಾಯ ಹಲವು ಪಟ್ಟು ದೊಡ್ಡದಾಗುತ್ತದೆ. 'ಇಂಡಿಯಾ, ಅಂದರೆ ಭಾರತ'ದ ಸರ್ವೋಚ್ಚ ಹಿತದೃಷ್ಟಿಯಿಂದ ಇಂತಹ ಅಜೆಂಡಾವನ್ನು ವಿಫಲಗೊಳಿಸಬೇಕಾಗಿದೆ. ಈ ಶಕ್ತಿಗಳನ್ನು ತಡೆದು ನಿಲ್ಲಿಸಿ ಸೋಲಿಸುವ ದೃಢ ನಿರ್ಧಾರವನ್ನು ಇನ್ನಷ್ಟು ಬಲಪಡಿಸದೇ ಇರುವ ಡಿಸೆಂಬರ್ 6ರ ಯಾವುದೇ ನೆನಪಿಗೆ ಅರ್ಥವಿರಲಾರದು.

"ದುಷ್ಟರು ಗೆಲ್ಲಬೇಕಾದರೆ ಒಳ್ಳೆಯವರು ಮೌನವಾಗಿದ್ದರೆ ಸಾಕು" ಎಂದು ತಲೆತಲಾಂತರದಿಂದ ಹರಿದು ಬಂದಿರುವ ಪ್ರಾಚೀನ ಜಾಣ್ನುಡಿ ನಮಗೆ ಹೇಳುತ್ತದೆ. ಎಲ್ಲ ಭಾರತೀಯ ದೇಶಪ್ರೇಮಿಗಳು ಇಂತಹ ಮೌನವನ್ನು ಮುರಿದು ಭಾರತೀಯ ಗಣ–ತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯ ರಕ್ಷಣೆ ಮಾಡುವ ನಿರ್ಧಾರದ ದೃಢತೆಯನ್ನು ದ್ವಿಗುಣಗೊಳಿಸಲು ಈ 22ನೇ ವಾರ್ಷಿಕ ಸೂಕ್ತ ಸಂದರ್ಭ. ನಮ್ಮೆಲ್ಲ ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಭಾರತೀಯ ಜನತೆಯ ಹೋರಾಟ ಯಶಸ್ವಿಯಾಗಬೇಕಾದರೆ ಇದು ಅತ್ಯಗತ್ಯವಾಗಿ ಆಗಬೇಕಾಗಿದೆ.



ಮೊದಲಿಗೇ ಹೇಳುವುದಾದರೆ, ಅಸ್ವಚ್ಛ ವಿಚಾರಗಳ ಬಲೂನುಗಳನ್ನು ಬಾಡಿಗೆಗೆ ತೆಗೆದುಕೊಳ್ಳುವುದಾದರೂ ಏತಕ್ಕೆ?

ಕೃಪೆ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

RNI No. KARKAN /2006/17926 Posted on every Satuarday
Licensed to Post without prepayment License No. WPP-283

ಚಿಕ್ಕಬಳ್ಳಾಪುರ: ಜನಪರ ಚಳುವಳಿಗಳ ಪ್ರತಿರೋಧ

ಅನಿಷ್ಟ 'ಮಡೆಸ್ನಾನ'ಕ್ಕೆ ಯಶಸ್ವಿ ತಡೆ



ಯಾರಾದರೂ ಉಂಡು ಬಿಟ್ಟ ಎಂಜಲೆಲೆ ಮೇಲೆ ಉರುಳಿದರೆ, ಎಂದಾದರೂ ಚರ್ಮರೋಗ ವಾಸಿಯಾಗುವುದುಂಟೇ!! ಜೊಲ್ಲಿನ ಮೂಲಕ ಹರಡುವ ರೋಗಗಳು ಚರ್ಮಕ್ಕೆ ಅಂಟಿಕೊಳ್ಳುವ ಸಾಧ್ಯತೆ ಉಂಟು ಅಷ್ಟೆ. ಅದರಿಂದ ಯಾವ ಲಾಭವೂ ಇಲ್ಲ. ಅಪಾಯದ ಸಾಧ್ಯತೆ ಮಾತ್ರ ಇದ್ದೇ ಇದೆ.

ಒಂದು ಜಾತಿ–ಒಂದು ವಿಭಾಗದವರು ಶ್ರೇಷ್ಠರು. ಅವರ ಎಂಜಲೂ ಸಹ ಪವಿತ್ರ. ಅವರಂತೂ ಪರಮ ಪವಿತ್ರರು. ದೈವಸಮಾನರು, ಭೂಮಿಯ ಮೇಲಿರುವ ದೇವತೆಗಳು ಎಂದು ಸಾಧಿಸುವುದೇ ಇದರಲ್ಲಿರುವ ಹುನ್ನಾರ. ಅಂದರೆ ಅಸಮಾನತೆಯ ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು, ಜಾತಿ ಪದ್ದತಿ ತಾರತಮ್ಯ–ಅಸ್ಪೃಶ್ಯತೆಯಂತಹ ಆಚರಣೆಗಳನ್ನು ಮುಂದುವರಿಸಿಕೊಂಡು ಹೋಗುವುದು. ಬಲಪಡಿಸಿಕೊಂಡು ಹೋಗುವುದು. ಶೋಷಣೆಯನ್ನು ಖಾಯಂಗೊಳಿಸುವುದು. ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸುವುದು.

ಸಿಪಿಐ(ಎಂ) ಪಕ್ಷ ಮತ್ತು ಪ್ರಗತಿಪರ ಸಂಘಟನೆಗಳು ಚಳುವಳಿಗಳು ಈ ಅನಿಷ್ಠ–ವಂಚಕ ಮಡೆಸ್ನಾನ ಎಂಬ ಹೆಸರಿನ ಈ ಆಚರಣೆಯನ್ನು ತೀವ್ರವಾಗಿ ವಿರೋಧಿಸುತ್ತಾ ಬಂದಿವೆ. ಈ ವರ್ಷ ಜನ ಕಡಿಮೆ ಇದ್ದರೂ ನಾನಾ ಕಾರಣಗಳಿಂದ ಕುಕ್ಕೆ, ಪಾವಗಡದ ನಾಗಲ ಮಡಿಕೆಗಳಂತಹ ಕಡೆ ಮಡೆಸ್ನಾನ ನಡೆದು ಹೋಗಿದೆ. ಆದ–ರೆ ಚಿಕ್ಕಬಳ್ಳಾಪುರದ ಸುಬ್ರಮಣ್ಯ ದೇವಸ್ಥಾನದಲ್ಲಿ ಮಡೆಸ್ನಾನ ನಡೆಯಲು ಅವಕಾಶವಾಗಲಿಲ್ಲ. ಈ ಆಚರಣೆ ನಡೆಯಲು ಅವಕಾಶವಾಗಬಾರದೆಂದು ಒತ್ತಾಯಿಸಿ ಸಿಪಿಐ(ಎಂ) ಮತ್ತು ವಿವಿಧ ಪ್ರಗತಿಪರ ಸಂಘಟನೆಗಳು ನಡೆಸಿದ ಜನಜಾಗೃತಿ ಮತ್ತು ಹೋರಾಟ ಫಲವಿದು.

ಚಿಕ್ಕಬಳ್ಳಾಪುರದಲ್ಲಿ ಕಳೆದ ವರ್ಷವೂ ಜಿಲ್ಲಾಡಳಿತವು ಮಡೆಸ್ನಾನವನ್ನು ನಿಷೇಧಿಸಿತ್ತು. ಆದರೂ ಅಲ್ಲಿ ಮಡೆಸ್ನಾನ ನಡೆದಿತ್ತು. ಸಿಪಿಐ(ಎಂ) ಮತ್ತು ಪ್ರಗತಿಪರ ಸಂಘಟನೆಗಳು ಮಡೆಸ್ನಾನ ಪಂಕ್ತಿಬೇಧ ವಿರೋಧಿಸಿ ಪ್ರತಿಭಟನೆ ನಡೆಸಿದ್ದವು. ಆದರೆ ಮಡೆಸ್ನಾನ ನಡೆಯಲೇಬೇಕೆನ್ನುವ ಶಕ್ತಿಗಳು ಜಿಲ್ಲಾಡಳಿತದ ಆದೇಶ ಉಲ್ಲಂಘಿಸಿ, ಪ್ರತಿಭಟನಾಕಾರರಿಗೆ ಕೊಟ್ಟ ಮಾತು ಮೀರಿ–ಅವರನ್ನು ವಂಚಿಸಿ ಕೊನೆ ಕ್ಷಣದಲ್ಲಿ ಮಡೆಸ್ನಾನವನ್ನು ನಡೆಸೇ ಬಿಟ್ಟಿದ್ದರು. ಕೊನೆ ಗಳಿಗೆಯಲ್ಲಿ ಮಡೆಸ್ನಾನದ ಸುಳಿವು ಅರಿತು ಸ್ಥಳಕ್ಕೆ ಧಾವಿಸಿ ಬಂದು ಅದನ್ನು ತಡೆಯಲೆತ್ನಿಸಿದ ಸಿಪಿಐ(ಎಂ) ಕಾರ್ಯಕರ್ತರನ್ನು ಹಿಡಿದು ಅಂದು ಎಳೆದಾಡಿ ಥಳಿಸಲಾಗಿತ್ತು.

ಈ ವರ್ಷ ಏನೇ ಆಗಲಿ ಮಡೆಸ್ನಾನದ ಆಚರಣೆಗೆ ಅವಕಾಶ ಅಗಬಾರದು ಎಂದು ಸಿಪಿಐ(ಎಂ) ಮತ್ತು ಜನಪರ ಸಂಘಟನೆಗಳು ತೀರ್ಮಾನಿಸಿದ್ದವು. ಮುಜರಾಯಿ ಇಲಾಖೆಗೆ ಸೇರಿದ ಈ ದೇವಾಲಯದಲ್ಲಿ ಈ ವರ್ಷವೂ ಆಡಳಿತ ಮಡೆಸ್ನಾನವನ್ನು ನಿಷೇಧಿಸಿತ್ತು. ಆದರೂ ಮಡೆಸ್ನಾನ ನಡೆಯುವ ಸಂಭವ ಇತ್ತು. ಈ ಹಿನ್ನೆಲೆಯಲ್ಲಿ ಜನಪರ ಸಂಘಟನೆಗಳು ನವೆಂಬರ್ 28 ರ ಷಷ್ಠಿಯಂದು ಚಿಕ್ಕಬಳ್ಳಾಪುರದಲ್ಲಿ ಸುಬ್ರಹ್ಮಣ್ಯ ದೇವಾಲಯದ ಎದುರು ಬೃಹತ್ ಪ್ರತಿಭಟನೆಯನ್ನು ಯೋಜಿಸಿದ್ದವು.



ಅಂದು ಸಿಪಿಐ(ಎಂ), ಎಸ್‌ಎಫ್‌ಐ, ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆಯ ನೂರಾರು ಕಾರ್ಯಕರ್ತರು ಸುಬ್ರಮಣ್ಯ ದೇವಾಲಯದ ಎದುರು ಸೇರಿದರು. ಜಾತಿಬೇಧ, ಪಂಕ್ತಿಬೇಧ, ಮಡೆಸ್ನಾನಗಳ ವಿರುದ್ದ ಧಿಕ್ಕಾರಗಳನ್ನು ಮೊಳಗಿಸಿದರು. ಮೂಢನಂಬಿಕೆ ನಿಷೇಧಿಸುವ ಕಾಯ್ದೆಗಾಗಿ ಆಗ್ರಹಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿಯವರು ಮಡೆಸ್ನಾನ ಮೂಢನಂಬಿಕೆ ಮತ್ತು ಅನಾಗರೀಕ ಪದ್ದತಿ ಎಂಬುದು ಗೊತ್ತಿದ್ದರೂ ಕೆಲವರು ಅದರ ಆಚರಣೆಯಲ್ಲಿ ತೊಡಗಿದ್ದಾರೆ. ಮಡೆಸ್ನಾನ ಹೆಸರಿನಲ್ಲಿ ಹಿಂದುಳಿದವರು ಮತ್ತು ದಲಿತರನ್ನು ಶೋಷಿಸಲಾಗುತ್ತಿದೆ. ಮಡೆಸ್ನಾನದಲ್ಲಿ ಪಾಲ್ಗೊಂಡವರಿಗೆ ಮಕ್ಕಳಾಗುತ್ತವೆ ಮತ್ತು ಎಲ್ಲ ರೀತಿಯ ಸಮಸ್ಯೆಗಳು ನಿವಾರಣೆಯಾಗುತ್ತವೆ ಎಂದು ನಂಬಿಸಲಾಗುತ್ತಿದೆ. ಇದಕ್ಕಿಂತ ಮೌಢ್ಯದ ಪರಮಾವಧಿ ಮತ್ತೊಂದಿಲ್ಲ ಎಂದರು. ಕುಕ್ಕೆ ಸುಬ್ರಮಣ್ಯದಲ್ಲಿ ಬ್ರಾಹ್ಮಣರು ಊಟ ಮಾಡಿ ಬಿಟ್ಟ ಎಂಜಲು ಎಲೆಗಳ ಮೇಲೆ ಹಿಂದುಳಿದ ಮಲೆಕುಡಿಯ ಜನಾಂಗದವನ್ನು ಉರುಳಿಸಲಾಗುತ್ತದೆ. ಎಲೆಗಳ ಮೇಲೆ ಉರುಳಿದರೆ ಜೀವನ ಪಾವನವಾಗುತ್ತದೆ ಎಂಬಂತೆ ನಂಬಿಸಲಾಗುತ್ತದೆ. ಇಂತಹ ಮೂಢನಂಬಿಕೆ ಆಚರಣೆಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದಲೇ ಹೋರಾಟ ನಡೆಸಲಾಗುತ್ತಿದೆ ಎಂದರು.

'ದಲಿತರೊಂದಿಗೆ ಮಠದಲ್ಲಿ ಪೇಜಾವರ ಸ್ವಾಮೀಜಿ ಊಟ ಮಾಡಲಿ' – ಜಿ. ವಿ. ಶ್ರೀರಾಮರೆಡ್ಡಿ

ಮುಂದುವರಿದು ಮಾತನಾಡಿದ ಶ್ರೀರಾಮರೆಡ್ಡಿಯವರು 'ದೇವರು, ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡುವುದರ ಬದಲು ಉಡುಪಿ ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮೀಜಿಯವರು ತಮ್ಮ ಮಠದ ಆವರಣದಲ್ಲಿ ದಲಿತ ವರ್ಗದವರನ್ನು ಪಕ್ಕಕ್ಕೆ ಕೂರಿಸಿಕೊಂಡು ಊಟ ಮಾಡಲಿ. ಮಡೆಸ್ನಾನ, ಪಂಕ್ತಿಭೇದದಂತಹ ಅನಿಷ್ಟ ಪದ್ಧತಿಗಳನ್ನು ಒಪ್ಪುವುದಿಲ್ಲ, ಅವುಗಳನ್ನು ನಿಷೇಧಿಸಲಿ ಎಂದು ಬಹಿರಂಗವಾಗಿ ಹೇಳಲಿ' ಎಂದು ಜಿ.ವಿ.ಶ್ರೀರಾಮರೆಡ್ಡಿ ಪೇಜಾವರ ಶ್ರೀಗಳಿಗೆ ಸವಾಲು ಹಾಕಿದರು.

'ವಿಶ್ವ ಹಿಂದೂ ಪರಿಷತ್ತಿನ ಉಪಾಧ್ಯಕ್ಷರಾಗಿ ಬಿಜೆಪಿ, ಆರ್‌ಎಸ್‌ಎಸ್‌ವರಿಗೆ ಮಾರ್ಗದರ್ಶನ ನೀಡುವ ಪೇಜಾವರರು ಮಡೆಸ್ನಾನದಂತಹ ಮೂಢನಂಬಿಕೆಯ ಆಚರಣೆ ನಿಷೇಧಿಸಲು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಯಾಕೆ ಒತ್ತಾಯಿಸಬಾರದು? ತಮ್ಮ ಪಾದಗಳನ್ನು ನಮಿಸುವ ಮೋದಿ ಅವರು ಈ ಪದ್ಧತಿಯನ್ನು ನಿಷೇಧಿಸಲಿ ಎಂದು ಯಾಕೆ ಹೇಳಬಾರದು' ಎಂದು ಪ್ರಶ್ನಿಸಿದರು.



'ಮಾತೆತ್ತಿದರೆ ಹಿಂದೂ ಧರ್ಮದ ರಕ್ಷಣೆ ಬಗ್ಗೆ ಕಳಕಳಿ ವ್ಯಕ್ತಪಡಿಸುವ ಪೇಜಾವರರು, ಹಿಂದೂ ಧರ್ಮದಲ್ಲಿನ ಜಾತಿ ಪದ್ಧತಿ ಮತ್ತು ಅಸಮಾನತೆಯನ್ನು ಯಾಕೆ ತೊಡೆದು ಹಾಕಲು ಪ್ರಯತ್ನಿಸಬಾರದು? ಹಿಂದೂ ಧರ್ಮದ ಹೆಸರಿನಲ್ಲಿ ವರ್ಣಾಶ್ರಮ ಪದ್ಧತಿ ಅನುಷ್ಠಾನಗೊಳಿಸಲು ಯತ್ನಿಸುವವರಿಂದ ಸಮಾನತೆಯನ್ನು ಹೇಗೆ ತಾನೇ ತರಲು ಸಾಧ್ಯ? ಸ್ವಾರ್ಥಕ್ಕಾಗಿ ಧರ್ಮವನ್ನು ದುರ್ಬಳಕೆ ಮಾಡುವುದು ನಿಲ್ಲಿಸಿ' ಎಂದು ಅವರು ಒತ್ತಾಯಿಸಿದರು.

'ದಿನಕ್ಕೊಂದು ರೀತಿಯಲ್ಲಿ ಸುಳ್ಳು ಹೇಳುವ ಪೇಜಾವರರು ಚಿಕ್ಕಬಳ್ಳಾಪುರ, ಬಾಗೇಪಲ್ಲಿಗೆ

ಪುಟ 15 ರಿಂದ

ಕಾರ್ಮಿಕರ ಬದುಕಿನ ಸ್ಥಿತಿ–ಗತಿ



ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಸಮ್ಮೇಳನದ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಕಂಡು ಬಂದ ಅಣಕು ಪ್ರದರ್ಶನ.

JANASHAKTHI KANNADA VARA PATRIKE: Printed by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**